೩. ವಿತ್ತೀಯ ಕಾರ್ಯಕಲಾಪ

೨೦೦೧-೨೦೦೨ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲಿನ ಚರ್ಚೆ

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ೨೦೦೧-೨೦೦೨ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ರಾಜ್ಯಾಂಗದ ಅನುಚ್ಛೇದ ೨೦೫(೧)ರ ಮೇರೆಗೆ ನಾನು ಸದನದಲ್ಲಿ ಮಂಡಿಸುತ್ತಿದ್ದೇನೆ. ಇದರ ಬಗೆಗಿನ ವಿವರಣೆಗಳನ್ನು ಈಗಾಗಲೇ ಮಾನ್ಯ ಸದಸ್ಯರುಗಳಿಗೆ ಪೂರಕ ಅಂದಾಜುಗಳ ಬಗ್ಗೆ ಒದಗಿಸಲಾಗಿರುವ ಪುಸ್ತಕದಲ್ಲಿ ನೀಡಲಾಗಿದ್ದು ಅದನ್ನೂ ಸಹಾ ಸದನದ ಮುಂದೆ ಮಂಡಿಸಲಾಗಿದೆ. ದಯವಿಟ್ಟು ಸದನ ಈ ಪೂರಕ ಅಂದಾಜುಗಳಿಗೆ ಅನುಮತಿ ನೀಡಬೇಕೆಂದು ಕೋರುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಪೂರಕ ಅಂದಾಜುಗಳ (ಮೊದಲನೇ ಕಂತು) ಬಗ್ಗೆ ಇಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಇದರಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಅವರು ಹೇಳಿದ್ದಾರೆ. ಕೈಗಾರಿಕಾ ಸಹಾಯಧನ ಬಾಕಿ ಪಾವತಿ ಮಾಡಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸಾಲವನ್ನು ಪಡೆದಿದ್ದು ಸಾಲ ಅನುಪಾತ ಪ್ರಮಾಣವನ್ನು ಸರಿದೂಗಿಸಲು ೨೩ ಲಕ್ಷ ರೂಪಾಯಿಗಳನ್ನು ಹಾಗೂ ಸಂಸ್ಥೆಯ ಪುನರ್ ಬಂಡವಾಳಕ್ಕಾಗಿ ೫೦೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ ಎಂದು ಇದರಲ್ಲಿ ಹೇಳಲಾಗಿದೆ. ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಶೇ.೫೦ಕ್ಕಿಂತ ಹೆಚ್ಚು ಸಣ್ಣ ಕೈಗಾರಿಕೆಗಳು ಅನಾರೋಗ್ಯ ಸ್ಥಿತಿಯಲ್ಲಿ ಇವೆ. ಇವುಗಳಲ್ಲಿ ಎಷ್ಟೋ ಕೈಗಾರಿಕೆಗಳು ಮುಚ್ಚಿ ಹೋಗಿವೆ. ಹೀಗಾಗಿ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದ ಸಬ್ಸಿಡಿಯ ಮೊತ್ತ ೩೦೦ ಕೋಟಿ ರೂಪಾಯಿಗಳು ಬಾಕಿ ಇದೆ. ಕಳೆದ ವರ್ಷ ಜೂನ್ ೧೯ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಾಸಿಯಾ ಅಧ್ಯಕ್ಷರು, ಇನ್ನಿತರ ಪ್ರಮುಖ ಉದ್ದಿಮೆದಾರರು, ಸನ್ಮಾನ್ಯ ಆರ್.ವಿ.ದೇಶಪಾಂಡೆ ಮತ್ತು ಸನ್ಮಾನ್ಯ [illegible]ನವರು ಇವರೆಲ್ಲರೂ ಉಪಸ್ಥಿತರಿದ್ದ ಸಭೆಯೊಂದು ನಡೆಯಿತು. ಆ ಸಂದರ್ಭದಲ್ಲಿ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಲಿಕ್ಕೆ ಮತ್ತು ಅವುಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡಲಿಕ್ಕೆ ಏನು ಮಾಡಬೇಕೆನ್ನುವ ಬಗ್ಗೆ ಕೆಲವೊಂದು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಅದರಲ್ಲಿ ಮೊದಲನೇ ಐಟಮ್ ಸಬ್ಸಿಡಿಗೆ ಸಂಬಂಧಪಟ್ಟ ಹಾಗೆ ಇತ್ತು. ೩೦೦ ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಮೂರು ತಿಂಗಳೊಳಗಾಗಿ ಕೊಡಬೇಕು ಎಂಬ ನಿರ್ಣಯವನ್ನು ಆಗ ತೆಗೆದುಕೊಳ್ಳಲಾಗಿತ್ತು. ಬಹುಶಃ ಅದರಲ್ಲಿ ಕೇವಲ ೧೫-೨೦ ಕೋಟಿ ರೂಪಾಯಿಗಳು ಮಾತ್ರ ಸಬ್ಸಿಡಿ ಹಣ

ಬಿಡುಗಡೆಯಾಗಿದೆ ಎಂದು ನನಗನ್ನಿಸುತ್ತದೆ. ಇನ್ನೂ ಬರಬೇಕಾದ ಸಬ್ಸಿಡಿ ಹಣ ಜಾಸ್ತಿ ಇದೆ. ಈಗ ಸಬ್ಸಿಡಿ ಹಣ ನೀಡಲು ಒದಗಿಸಿರುವ ಹಣ ಏನೇನೂ ಸಾಲುವುದಿಲ್ಲ. ಉದಾರೀಕರಣ, ಡಬ್ಲ್ಯೂ.ಟಿ.ಒ. ಒಪ್ಪಂದ ಇವುಗಳ ಹಿನ್ನೆಲೆಯಲ್ಲಿ ನಮ್ಮ ಸಣ್ಣ ಕೈಗಾರಿಕೆಗಳನ್ನು ನಾವು ಬದುಕಿಸದೇ ಹೋದರೆ ಬಹುಶಃ ಅವುಗಳ ಪರಿಸ್ಥಿತಿ ಬಹಳ ಗಂಭೀರವಾಗಬಹುದು. ಲಕ್ಷಾಂತರ ಯುವಕರು ನಿರುದ್ಯೋಗಿಗಳಾಗಬಹುದು, ಉದ್ದಿಮೆದಾರರು ಆ ವ್ಯವಸ್ಥೆಯಿಂದ ಹೊರಗೆ ಬರಬಹುದು. ಸಮಾಜದಲ್ಲಿ ಅಶಾಂತಿ ಮೂಡುವುದಕ್ಕೆ ಕಾರಣವಾಗಬಹುದು ಎಂದು ನಾನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ೩೦೦ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಸಬ್ಸಿಡಿ ಹಣ ಎಷ್ಟು ಬಾಕಿ ಇದೆ ಅದನ್ನು ತ್ವರಿತ ಗತಿಯಿಂದ ಸಣ್ಣ ಕೈಗಾರಿಕೆಗಳಿಗೆ ಪೇಮೆಂಟ್ ಮಾಡುವ ಸಲುವಾಗಿ ಕ್ರಮ ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ. ಎಸ್.ಎಸ್. ಡಿಸಿಯು ಗದಗ ಸಹಕಾರಿ ನೂಲಿನ ಗಿರಣಿಗೆ ೭೩೪ ಲಕ್ಷ ರೂಪಾಯಿಗಳ ಸಾಲ ಮಂಜೂರಾಗಿತ್ತು ೪೪೮ ಲಕ್ಷ ರೂಪಾಯಿಗಳು ಈಗಾಗಲೇ ಬಿಡುಗಡೆಯಾಗಿದೆ. ಈ ಸಾಲದ ಅಂತಿಮ ಕಂತು ೨೮೮ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲು ಈ ಆಯವ್ಯಯದಲ್ಲಿ ಅವಕಾಶವನ್ನು ಕಲ್ಪಿಸಿಲ್ಲ. ಯಾವಾಗ ಪೂರಕ ಬಜೆಟ್ ಮಂಡನೆಯಾಗುತ್ತದೆ ಆಗ ಗದಗ ನೂಲಿನ ಗಿರಣಿಗೆ ಟೈಮ್ ಇರುತ್ತದೆ; ನೀವು ಬಜೆಟ್‌ನಲ್ಲಿ ಒಂದು ಸಾರಿ ಅನುಕೂಲ ಮಾಡಿ ಕೊಟ್ಟುಬಿಟ್ಟರೆ ಉತ್ತಮ. ಗದಗ್ ನೂಲಿನ ಗಿರಣಿಗೆ ಅನುಕೂಲ ಮಾಡಿಕೊಡುವ ಹಾಗೆ ಕರ್ನಾಟಕ ರಾಜ್ಯದಲ್ಲಿ ಅಂತಹ ಬೇಕಾದಷ್ಟು ಗಿರಣಿಗಳಿವೆ. ಅವುಗಳಿಗೆ ಅನುಕೂಲ ಮಾಡಿಕೊಡುವಂತಹ ವ್ಯವಸ್ಥೆ ಆಗಬೇಕು. ಗದಗ್ ನೂಲಿನ ಗಿರಣಿಗೆ ಮಾತ್ರ ಯಾವಾಗ ಹಣ ಬಿಡುಗಡೆ ಮಾಡುತ್ತೀರೆಂಬುದು ನನಗೆ ಗೊತ್ತಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಹಿಂದೆ ನಾನು ಅಲ್ಲಿ ಇದ್ದಾಗ ಕೂಡ ಈ ವಿಷಯವನ್ನು ಹೇಳಿದ್ದೆನು. ಎಲ್ಲಾ ಮಿಲ್‌ಗಳಿಗೆ ಅನುಕೂಲ ಮಾಡಿ ಕೊಡದೇ ಇದ್ದರೆ ಎಲ್ಲಾ ಮಿಲ್‌ಗಳೂ ಬಂದ್ ಆಗುತ್ತವೆ. ಧಾರವಾಡ ಡಿಸಿಸಿ ಬ್ಯಾಂಕ್‌ಗೆ ಸುಮಾರು ೪೦ ಕೋಟಿ ರೂಪಾಯಿಗಳು ಬರಬೇಕು. ಇದು ಒಂದನ್ನು ಸರಿ ಮಾಡದೇ ಇದ್ದರೆ ಹಣ ಇಲ್ಲದೇ ಮಿಲ್ ಮುಳುಗುತ್ತದೆ. ಧಾರವಾಡ ಡಿಸಿಸಿ ಬ್ಯಾಂಕ್ ಸಹ ಮುಳುಗುತ್ತದೆ. ಇದು ಆಗತಕ್ಕಂತಹ ಸ್ಥಿತಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಡಿಸಿಸಿ ಬ್ಯಾಂಕ್‌ನಲ್ಲಿ ೩೫೦ ಕೋಟಿ ರೂಪಾಯಿಗಳ ಲಾಸ್ ಇದೆ.

ಶ್ರೀ ಎಸ್.ಎಸ್.ಪಾಟೀಲ್: ಒನ್ ಟೈಮ್ - ಸೆಟ್ಲ್‌ಮೆಂಟ್ ಅದು ಆಯಿಲ್ ಮಿಲ್ ಇದೆ; ೫೦ ರಿಂದ ೬೦ ಕೋಟಿ ರೂಪಾಯಿಗಳ ಹಣ ಬರಬೇಕು. ಇದನ್ನು ಕೊಟ್ಟರೆ ಏನೂ ಆಗುವುದಿಲ್ಲ; ಈ ಹಣ ಬಾರದೇ ಇದ್ದರೆ ಮಾತ್ರ ಅದು ಮುಳುಗುತ್ತದೆ.

ಶ್ರೀ ಪಿ.ಹೆಚ್.ಪೂಜಾರ್: ನಮ್ಮ ಬಾಗಲಕೋಟೆ ಸ್ಪಿನ್ನಿಂಗ್ ಮಿಲ್ ಬಂದ್ ಆಗಿ ೧೦ ವರ್ಷಗಳಾಯಿತು. ಅದರ ಬಗ್ಗೆ ಕೂಡ ಯೋಜನೆ ಮಾಡಬೇಕು. ಏನಾದರೂ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ಕೆ.ಶ್ರೀನಿವಾಸ ಗೌಡ: ಈ ಸಹಕಾರಿ ಸ್ಪಿನ್ನಿಂಗ್ ಮಿಲ್‌ಗಳು ಗದಗ್ ಮತ್ತು ಬನಹಟ್ಟಿ ಬಿಟ್ಟರೆ, ಮಹಾರಾಷ್ಟ್ರದಲ್ಲಿ ಇಚ್ಚಿನಕೆರೆ ಎಂದು ಇದೆ, ಈ ಪ್ರದೇಶಧಲ್ಲಿ ಬಿಟ್ಟರೆ ಬೇರೆ ಎಲ್ಲೂ ಸ್ಪಿನ್ನಿಂಗ್ ಮಿಲ್‌ಗಳು ನಡೆಯುತ್ತಿಲ್ಲ. ಅದಕ್ಕಾಗಿ ಹಣವನ್ನು ವಿನಿಯೋಗಿಸುವುದು ತಪ್ಪಾಗುತ್ತದೆ ಎಂದು ನನಗನ್ನಿಸುತ್ತದೆ. ನಾನು ಬಹಳಷ್ಟು ಸ್ಪಿನ್ನಿಂಗ್ ಮಿಲ್‌ಗಳನ್ನು ನೋಡಿದ್ದೇನೆ. ಮಹಾರಾಷ್ಟ್ರದಲ್ಲಿ ಬೆಳಗಾಮ್ ಪಕ್ಕದಲ್ಲಿ ಇಚ್ಚಿನಕೆರೆ ಎಂದು ಒಂದು ಊರಿದೆ ಅಲ್ಲಿ ಮತ್ತು ಬನಹಟ್ಟಿ ಮತ್ತು ಮಾನ್ಯ ಹೆಚ್.ಕೆ.ಪಾಟೀಲರ ಊರಿನಲ್ಲಿ ಇರುವುದನ್ನು ಬಿಟ್ಟರೆ ಬೇರೆ ಎಲ್ಲಾ ಕಡೆ ಅವು ಮುಚ್ಚಿ ಹೋಗಿವೆ.

ಶ್ರೀ ಜಗದೀಶ್ ಶೆಟ್ಟರ್: ಗದಗ್‌ಗೆ ವಿಶೇಷವಾಗಿ ಪೂರಕ ಬಜೆಟ್‌ನಲ್ಲಿ ಅನುದಾನ ಕೊಡುವ ರೀತಿಯಲ್ಲಿ ಕರ್ನಾಟಕದಲ್ಲಿ ಅನೇಕ ಕಡೆ ಏನು ಬೇರೆ ಬೇರೆ ನೂಲಿನ ಗಿರಣಿಗಳಿವೆ ಅಂತಹವುಗಳ ಬಗ್ಗೆ ಕೂಡ ತಮ್ಮ ಕೃಪಾಶೀರ್ವಾದ ಇರಲಿ ಎಂದು ನನ್ನ ಅಭಿಪ್ರಾಯ. ನಿನ್ನೆ ಮಾನ್ಯ ಶ್ರೀನಿವಾಸಗೌಡರ ಸಿಂಗಪುರದ ಪ್ರಶ್ನೆ ಬಂದಾಗ ನಾನು ಈ ವಿಷಯ ಪ್ರಸ್ತಾಪ ಮಾಡಬೇಕೆಂದು ಇದ್ದೆ, ಆದರೆ ವೇಳೆ ಇರಲಿಲ್ಲ. ಪೂರಕ ಬಜೆಟ್‌ನಲ್ಲಿ ೨೮ನೇ ಪುಟದಲ್ಲಿ, ಬೆಂಗಳೂರು ಮಹಾ ನಗರ ಪಾಲಿಕೆಗೆ ಸಾಲವಾಗಿ ಒಂದು ನೂರು ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಸಲುವಾಗಿ ಆಯವ್ಯಯಲ್ಲಿ ಅವಕಾಶ ಮಾಡದೆ ಇರುವುದರಿಂದ ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಲಾಗಿದೆ. ನಿಧಿಗೆ ಇಷ್ಟೇ ಮೊತ್ತದ ಮರುಪಾವತಿ ಅಗತ್ಯವಿರುವುದರಿಂದ ಅಭಿಯಾಚನೆಯಲ್ಲಿ ಸೇರಿಸಲಾಗಿದೆ ಎಂದು ಹೇಳಲಾಗಿದೆ. ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಹೇಳಿದ್ದಾರೆ. ಬೆಂಗಳೂರಿನ ಮೂಲಭೂತ ಸೌಕರ್ಯ ಅಭಿವೃದ್ಧಿ ಸಲುವಾಗಿ ಇರಬೇಕಾದ ಇನ್ನಿತರ ಸೌಂದರ್ಯೀಕರಣ ಇರಬಹುದು, ಬೆಂಗಳೂರನ್ನು ಅಭಿವೃದ್ಧಿ ಪಡಿಸಲು ಸಿಂಗಪುರ ವಿಷನ್ ಇಟ್ಟುಕೊಂಡು, ಸಿಂಗಪುರದ ಮಾದರಿ ಇಟ್ಟುಕೊಂಡು ಕೆಲಸ ಕಾರ್ಯ ಮಾಡುತ್ತಿದ್ದೀರಿ; ಇದು ತಪ್ಪೇನಿಲ್ಲ. ನಮ್ಮ ಬೆಂಗಳೂರು ಒಂದು ಸುಂದರವಾದ ನಗರವಾಗಬೇಕು, ಇಡೀ ನಮ್ಮ ದೇಶದಲ್ಲಿ ಏಕೆ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕೂಡ ಬೆಂಗಳೂರು ಎಂದರೆ ನಂಬರ್ ಒಂದು ಸಿಟಿ ಆಗುವುದಕ್ಕೆ ಎಲ್ಲರೂ ಸೇರಿ ಪ್ರಯತ್ನ ಮಾಡೋಣ. ಮಾನ್ಯ ಮುಖ್ಯ ಮಂತ್ರಿಗಳು ಮುಂದಾಲೋಚನೆ ಮಾಡಿ ಕೆಲವು ಮುಖ್ಯವಾದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಈ ಬೆಂಗಳೂರು ನಗರಕ್ಕೆ ಇನ್ನೂ ಸಾಕಷ್ಟು ಹೆಚ್ಚಿನ

ಹಣ ಬಿಡುಗಡೆ ಮಾಡಿ. ಆದರೆ ಅದೇ ಸಮಯದಲ್ಲಿ ಇಡೀ ರಾಜ್ಯದಲ್ಲಿ ಬೇರೆ ಮಹಾ ನಗರ ಪಾಲಿಕೆಗಳು ಏನಿವೆ ಆ ಮಹಾ ನಗರಪಾಲಿಕೆಗಳ ಮೇಲೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ತಮ್ಮ ಕೃಪಾಶೀರ್ವಾದವನ್ನು ತೋರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹಳ ಹಿಂದೆಯೇ ಡಾ: ನಂಜುಂಡಪ್ಪನವರು ಈ ಪ್ರಾದೇಶಿಕ ಅಸಮಾನತೆಯ ಬಗ್ಗೆ ಒಂದು ಇಂಟರಿಮ್ ರಿಪೋರ್ಟ್ ಕೊಟ್ಟಿದ್ದಾರೆ. ಅದರಲ್ಲಿ ಬೆಳಗಾಂ ಮಹಾ ನಗರಸಭೆ ಮತ್ತು ಗುಲ್ಬರ್ಗ ಮಹಾ ನಗರಸಭೆಗೆ ೧೫ ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ತಕ್ಷಣ ಬಿಡುಗಡೆ ಮಾಡಬೇಕು; ಮೊನ್ನೆ ಬಜೆಟ್‌ನಲ್ಲಿ ಅದನ್ನು ಪ್ರಾವಿಷನ್ ಮಾಡಬೇಕೆಂದು ಅವರು ಒತ್ತು ಕೊಟ್ಟು ಹೇಳಿದರು. ಮೊನ್ನೆ ಬಜೆಟ್‌ನಲ್ಲಿ ಅದಕ್ಕೆ ಏನೂ ಪ್ರಾವಿಜನ್ ಮಾಡಲಿಲ್ಲ. ೧೫ ಕೋಟಿ ರೂಪಾಯಿಗಳು ಎಂದರೂ ಅದು ೨೦ ಕೋಟಿ ರೂಪಾಯಿಗಳು ಆಗಬಹುದು. ಇಂಟರೀಮ್ ರಿಪೋರ್ಟ್‌ನಲ್ಲಿ ಅವರು ರೆಕಮಂಡೇಷನ್ ಮಾಡಿದ್ದಾರೆ. ಅವರು ಬಜೆಟ್ ಮಂಡನೆ ಮಾಡುವುದಕ್ಕೆ ಮುಂಚೆ ವರದಿ ಕೊಟ್ಟಿದ್ದರು. ಅದನ್ನು ತಮ್ಮ ಗಮನಕ್ಕೆ ತಂದಿದ್ದರು. ಅದಕ್ಕೆ ಏಕೆ ಬಜೆಟ್ ಪ್ರಾವಿಷನ್ ಮಾಡಲಿಲ್ಲವೆಂಬುದು ನನ್ನ ಪ್ರಶ್ನೆ ಇದೆ. ಈ ಪೂರಕ ಬಜೆಟ್‌ನಲ್ಲಿ ಆದರೂ ಅದಕ್ಕೆ ವ್ಯವಸ್ಥೆ ಮಾಡಬೇಕಾಗಿತ್ತು. ಯಾವ ರೀತಿ ಬೆಂಗಳೂರು ಮಹಾ ನಗರಕ್ಕೆ ತಮ್ಮ ಕೃಪಾಶೀರ್ವಾದ ಬಿದ್ದಿದೆಯೋ ಅದೇ ರೀತಿಯಲ್ಲಿ ಅದು ಬೇರೆ ಮಹಾ ನಗರಸಭೆಗಳಿಗೆ ಏಕೆ ಬೀಳುತ್ತಿಲ್ಲವೆಂಬುದು ನನ್ನ ಪ್ರಶ್ನೆ. ಬೇರೆ ಬೇರೆ ರಾಜ್ಯಗಳಲ್ಲಿ ಕೇವಲ ಕ್ಯಾಪಿಟಲ್ ಸಿಟಿ ಅಲ್ಲ, ಬೇರೆ ಬೇರೆ ನಗರಗಳೂ ಕೂಡ ಬೆಳೆದಿವೆ. ಇನ್‌ಫ್ರಾಸ್ಟ್ರಕ್ಚರ್ ಬೆಳೆದಿದೆ. ಈಗ ಬೆಂಗಳೂರು ಎಂದರೆ ಎಲ್ಲರೂ ಇಲ್ಲಿಗೆ ಬರುತ್ತಾರೆ. ಇಂಡ್ರಿಸ್ಟಿಯಾಲಿಸ್ಟ್‌ಗಳು ಬೆಂಗಳೂರಿಗೆ ಬರುತ್ತಾರೆ, ಬೇರೆ ಬೇರೆ ಉದ್ದಿಮೆದಾರರೂ ಸಹ ಬರಬೇಕಾದರೆ ಬೆಂಗಳೂರಿಗೇ ಬರುತ್ತಾರೆ. ಯಾವ ನಾಗರೀಕರೂ ವಲಸೆ ಬರಬೇಕಾದರೆ ಬೆಂಗಳೂರಿಗೇ ಬರುತ್ತಾರೆ. ಬೆಂಗಳೂರಿಗೆ ತಮಿಳುನಾಡಿನವರು, ಆಂಧ್ರದವರು ಮತ್ತು ಕರ್ನಾಟಕ ರಾಜ್ಯದ ಬೇರೆ ಬೇರೆ ಭಾಗದವರೂ ಇಲ್ಲಿಗೆ ಬರುತ್ತಾರೆ. ಇಲ್ಲಿ ಕೆಲಸದ ಮೇಲೆ ಕಾನ್‌ಸೆಂಟ್ರೇಷನ್ ಆಗುವುದರಿಂದ ಬೆಂಗಳೂರಿನ ಮೇಲೆ ಹೆಚ್ಚು ಒತ್ತಡ ಬೀಳುತ್ತದೆ. ಅದಕ್ಕಾಗಿ ಬೇರೆ ಬೇರೆ ಮಹಾ ನಗರಸಭೆಗಳಿಗೆ ಹೆಚ್ಚು ಅನುದಾನ ಕೊಟ್ಟು ಮೂಲಭೂತ ಸೌಕರ್ಯಗಳನ್ನು ಹೆಚ್ಚು ಮಾಡಿದರೆ ಅಲ್ಲಿಯ ಜನರಿಗೆ ಉದ್ಯೋಗವಕಾಶ ಸಿಗಬಹುದು, ಮತ್ತು ಬೇರೆ ಬೇರೆ ರೀತಿಯ ಉದ್ದಿಮೆಗಳು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆ ದಿಸೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು; ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆಯ ಮಹಾ ಪೌರರು, ಎಲ್ಲರೂ ಡೆಲಿಗೇಷನ್‌ನಲ್ಲಿ ಬಂದಿದ್ದರು. ೭.೭೦ ಕೋಟಿ ರೂಪಾಯಿಗಳು ಕಾಂಟ್ರಾಕ್ಟರ್ಸ್ ಬಿಲ್ ಪೆಂಡಿಂಗ್ ಇವೆ. ರೆವಿನ್ಯೂ ಕಲೆಕ್ಷನ್ ಅಷ್ಟರ ಮಟ್ಟಿಗೆ ಆಗುತ್ತಿದೆ. ಸ್ವಯಂ ಘೋಷಿತ ತೆರಿಗೆ ಪದ್ಧತಿಯನ್ನು ಜಾರಿ ಮಾಡಿದರೂ ಅದು ಕೋರ್ಟಿಗೆ

ಹೋಗಿ ಸ್ಟೇ ಆಯಿತು. ಒಂದು ಕೇಸ್‌ನಲ್ಲಿ ಕ್ವಾಷ್ ಆಗಿ ಹೋಯಿತು. ಅಲ್ಲಿ ರೆವಿನ್ಯೂ ಎಷ್ಟು ಬರಬೇಕಾಗಿತ್ತು ಅಷ್ಟು ಬರುತ್ತಿಲ್ಲ. ಸರ್ಕಾರದಿಂದ ಎಷ್ಟು ಅನುದಾನ ಬರಬೇಕಾಗಿತ್ತು ಅದೂ ಬರುತ್ತಿಲ್ಲ. ಎಂಟು ಕೋಟಿ ರೂಪಾಯಿಗಳ ಅನುದಾನ ಕೊಡುವುದು ಬಾಕಿ ಇದೆ. ಮೊನ್ನೆ ಅಧಿಕಾರಿಗಳು ಮತ್ತು ಮೇಯರ್‌ರವರು ಬಂದು ನಿಮಗೆ ಮನವಿ ಪತ್ರ ಕೊಟ್ಟಿದ್ದಾರೆ. ಮಹಾ ನಗರ ಸಭೆಗಳಿಗೆ ಕಾನೂನು ಪ್ರಕಾರ ಬರಬೇಕಾದ ಅನುದಾನ ಬರುತ್ತಿಲ್ಲ; ವಿಶೇಷ ಅನುದಾನವೂ ಬರುತ್ತಿಲ್ಲ. ಬೇರೆ ಬೇರೆ ಸ್ಥಳೀಯ ಸಂಸ್ಥೆಗಳು ಬಹಳಷ್ಟು ಆರ್ಥಿಕವಾಗಿ ತೊಂದರೆಯಲ್ಲಿವೆ. ಆದ್ದರಿಂದ ಇದರ ಬಗ್ಗೆ ತಾವು ತೀವ್ರವಾಗಿ ಗಮನ ಹರಿಸಬೇಕೆಂದು ನನ್ನ ಕಳಕಳಿಯ ವಿನಂತಿ. ವರಾಹಿ ಅಣೆಕಟ್ಟು ಮತ್ತು ವರಾಹಿ ಕಾಲುವೆಗಳ ಕಾಮಗಾರಿ ಕೆಲಸಗಳಿಗಾಗಿ ಪೂರಕ ಅಂದಾಜಿನಲ್ಲಿ ಪ್ರಾವಿಜನ್ ಮಾಡಿದ್ದೀರಿ ವರಾಹಿ ಆಣೆಕಟ್ಟು ಕಾಮಗಾರಿ ಬಗ್ಗೆ ಹೇಳಿದ್ದೀರಿ. ಇದರ ಬಗ್ಗೆ ನಾನು ಹೆಚ್ಚಿಗೆ ಡೀಟೇಲಾಗಿ ಮಾತನಾಡುವುದಿಲ್ಲ. ನಮ್ಮ ಕುಂದಾಪುರದ ಶಾಸಕರಾದ ಮಾನ್ಯ ಹಾಲಾಡಿ ಶ್ರೀನವಾಸ ಶೆಟ್ಟರು ಕೆಲವು ವಿಷಯಗಳ ಬಗ್ಗೆ ಬೆಳಕು ಚೆಲ್ಲುತ್ತಾರೆ. ಅದನ್ನು ಪರಿಶೀಲನೆ ಮಾಡಬೇಕೆಂದು ಹೇಳಿ, ನಾನು ಏನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತೀವ್ರತರವಾದ ಗಮನಹರಿಸಬೇಕು, ಪೂರಕ ಬಜೆಟ್‌ನಲ್ಲಿ ಅದಕ್ಕೆ ಪ್ರಾವಿಷನ್ ಮಾಡಬೇಕಾಗಿತ್ತು ಎಂದು ಹೇಳಿ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಅಧ್ಯಕ್ಷರೆ, ವರಾಹಿ ಯೋಜನೆ ಎಂದರೆ ಉಡುಪಿ ಜಿಲ್ಲೆಯ ಪ್ರತಿಷ್ಠಿತ ಯೋಜನೆಗಳಲ್ಲಿ ಒಂದು. ಶ್ರೀಮಾನ್ ಗುಂಡುರಾವ್‌ರವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ಸುಮಾರು ೨೧ ವರ್ಷಗಳ ಹಿಂದೆ ವರಾಹಿ ಯೋಜನೆಯ ಶಂಕುಸ್ಥಾಪನೆ ಆಯಿತು. ಹಾಗೆ ಶಂಕು ಸ್ಥಾಪನೆ ಆದಮೇಲೆ ೨೦ ವರ್ಷಗಳಿಂದ ಅದರ ದಿಕ್ಕು ತಪ್ಪುತ್ತಾ ಹೋಗಿದೆ. ಆ ಯೋಜನೆಯಾಗಿದೆ, ಲಿಫ್ಟ್ ಇರಿಗೇಷನ್ ಪ್ರಾರಂಭ ಮಾಡಿದರೂ ಅದರಲ್ಲಿ ತುಂಡು ಗುತ್ತಿಗೆ ಕೊಟ್ಟರು. ತುಂಡು ಗುತ್ತಿಗೆ ಎಂದರೆ ಐದು ಲಕ್ಷ ರೂಪಾಯಿಗಳ ತುಂಡು ಗುತ್ತಿಗೆ ಅಲ್ಲ, ಕೋಟಿಗಟ್ಟಲೆ ರೂಪಾಯಿಗಳ ತುಂಡು ಗುತ್ತಿಗೆ ಕೊಟ್ಟರು. ತುಂಡು ಗುತ್ತಿಗೆ ಕೊಟ್ಟು ಭ್ರಷ್ಟಾಚಾರ ಆಗುವ ಹಾಗೆ ಮಾಡಿದರು. ಆದರೆ ಕಾಮಗಾರಿಗಳು ನಡೆಯಲಿಲ್ಲ. ಕಾಮಗಾರಿಗಳು ನಡೆಯದೆ ಇದ್ದಾಗ ತುಂಬ ಸ್ಪರ್ಧೆ ನಡೆಯಿತು. ಈಗಿನ ಸರ್ಕಾರ ಐದು ಲಕ್ಷ ರೂಪಾಯಿಗಳ ಅನುದಾನ ಕೊಟ್ಟು ಅದಕ್ಕೆ ಮಹತ್ವವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಮೆಚ್ಚುಗೆ ವ್ಯಕ್ತ ಪಡಿಸುತ್ತಿದ್ದೇನೆ. ಆ ಅನುದಾನದ ಹಣದಲ್ಲಿ ಅಲ್ಲಿ ಕಾರ್ಯಗಳು ಅನುಷ್ಠಾನ ಆಗಬೇಕಾದರೆ ಭ್ರಷ್ಟಾಚಾರ, ಅವ್ಯವಹಾರ, ಅಧಿಕಾರ ದುರುಪಯೋಗವಾಗುತ್ತಿದೆ. ಅಲ್ಲಿ ನಡೆದಿರುವಂತಹ ಅವ್ಯವಹಾರದ ಬಗ್ಗೆ

ಸಮಗ್ರ ತನಿಖೆ ಆಗಬೇಕೆಂದು ಮನವಿ ಮಾಡಿಕೊಂಡಿದ್ದೆ. ನಾನು ತನಿಖೆ ಮಾಡಿಸುತ್ತೇನೆಂದು ನಮ್ಮ ಮಾನ್ಯ ಸಚಿವರು ನಮಗೆ ಆಶ್ವಾಸನೆ ಕೊಟ್ಟಿದ್ದರು. ಈ ತನಕ ಅದರ ಬಗ್ಗೆ ತನಿಖೆ ಆಗಲಿಲ್ಲ. ಈ ಕಾಮಗಾರಿಗೆ ಇನ್ನೂ ಹೆಚ್ಚಿನ ಅನುದಾನ ಕೊಟ್ಟು ಕೂಡಲೇ ಅನುಷ್ಠಾನ ಆಗುವ ಹಾಗೆ ಕ್ರಮ ಕೈಗೊಳ್ಳಬೇಕೆಂದೂ, ಅಲ್ಲಿ ಆಗಿರುವ ಕಳಪೆ ಕಾಮಗಾರಿಗಳು ಹಾಗೂ ಭ್ರಷ್ಟಾಚಾರದ ಬಗ್ಗೆ ಸಮಗ್ರ ತನಿಖೆ ನಡೆಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಪೂರಕ ಅಂದಾಜುಗಳ ಮಂಡನೆ ಮಾಡತಕ್ಕಂಥ ಸನ್ನಿವೇಶದಲ್ಲಿ ಈ ಅಂದಾಜುಗಳ ಪ್ರಕಾರವಾಗಿ ಸರ್ಕಾರ ಏನು ಹಣವನ್ನು ಖರ್ಚು ಮಾಡಿದ್ದಾರೆ ಅದರ ಬಗ್ಗೆ ಮಾತ್ರ ಮಾತನಾಡತಕ್ಕಂಥಾದ್ದು ನಮ್ಮ ಸಂಪ್ರದಾಯ. ಆದರೆ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಈ ವರ್ಷ ಸರ್ಕಾರ ೧೬ನೇ ತಾರೀಖು ಅಧಿವೇಶನ ಕರೆದ ಕಾರಣದಿಂದ ಮತ್ತು ಹಣಕಾಸಿನ ಇಲಾಖೆ ಬಗ್ಗೆ ಅನೇಕ ವಿಚಾರಗಳನ್ನು ನಾವು ಹೇಳಬೇಕು ಎಂದು ಅಂದುಕೊಂಡಿದ್ದರೂ ಕೂಡ ಕಾರಣಾಂತರಗಳಿಂದಾಗಿ ಬೇಡಿಕೆವಾರು ಚರ್ಚೆ ಮಾಡುವುದಕ್ಕೆ ನಮಗೆ ಆಗಲಿಲ್ಲ. ಇನ್ನು ವಿಷಯ ಸಮಿತಿಗಳ ವರದಿ ಬಗ್ಗೆ ಕೂಡ ಸಂಬಂದಪಟ್ಟ ಮಾನ್ಯ ಮಂತ್ರಿಯವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ, ನೀವು ವರದಿಯಲ್ಲಿರುವ ಶಿಫಾರಸ್ಸುಗಳನ್ನು ಎಷ್ಟರಮಟ್ಟಿಗೆ ಒಪ್ಪುತ್ತೀರಾ ಅಥವಾ ಇಲ್ಲ ಎಂಬ ಬಗ್ಗೆ ಖಚಿತವಾದ ಭರವಸೆಯನ್ನು ಸರ್ಕಾರ ಕೊಡಬೇಕು ಎಂದು ಹೇಳಿ ನಾನು ಒತ್ತಾಯ ಮಾಡಿದೆ, ವಿನಂತಿಯನ್ನೂ ಕೂಡ ಮಾಡಿಕೊಂಡೆ. ಆದರೆ ಏಕೋ ಗೊತ್ತಿಲ್ಲ, ಆಗ ಅವರು ಅದಕ್ಕೆ ಉತ್ತರ ಕೊಡುವುದಕ್ಕೆ ಬಯಸಲಿಲ್ಲ. ಈ ಸಂದರ್ಭದಲ್ಲಾದರೂ ಅವರು ಉತ್ತರ ಕೊಡುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈಗ ನಾನು ಕೆಲವು ವಿಚಾರಗಳನ್ನು ಸರ್ಕಾರಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಬಹಳ ಮುಖ್ಯವಾಗಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಶ್ವೇತಪತ್ರವನ್ನು ಮಂಡನೆ ಮಾಡಿದ್ದು, ಅದು ಆದ ಮೇಲೆ ಮುಂದಿನ ನಾಲ್ಕು ವರ್ಷಗಳಲ್ಲಿ ಈ ಸರ್ಕಾರ ಯಾವ ದಾರಿಯಲ್ಲಿ, ಯಾವ ದಿಕ್ಕಿನಲ್ಲಿ ಹೋಗಬೇಕು ಎನ್ನುವ ದೃಷ್ಟಿಯಿಂದ Road Map for the fiscal finances Mangement for the next four years ಅದನ್ನು ಕೂಡ ಈ ಸದನದ ವಿಶ್ವಾಸವನ್ನು ತೆಗೆದುಕೊಂಡು ಮಾನ್ಯ ಮುಖ್ಯಮಂತ್ರಿಗಳು ಇಟ್ಟಿರುವಂಥಾದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಕೆ.ಪಿ.ಟಿ.ಸಿ.ಎಲ್ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕೆಲವು ನಿಲುವುಗಳು ಏನಿದೆ ಅದರ ಬಗ್ಗೆಯೂ ಕೂಡ ರಾಜ್ಯದ ಹಿತದೃಷ್ಟಿಯಿಂದಾಗಿ, ಅದು ಹಣಕಾಸು, ವಿದ್ಯುಚ್ಛಕ್ತಿ ಮತ್ತು ನೀರಾವರಿ ವಿಚಾರಗಳಿಗೆ

ಕೊಟ್ಟಿರುವ ಮಹತ್ವದ ವಿಚಾರಗಳನ್ನು ನಾನು ಒಪ್ಪುತ್ತೇನೆ ಮತ್ತು ನಮ್ಮ ಪಕ್ಷ ಅದನ್ನು ಒಪ್ಪುತ್ತದೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಅನೇಕ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂಬ ಉದ್ದೇಶವಿದ್ದರೂ ಕೂಡ ಆ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದರೂ ಕೂಡ ಅದನ್ನು ಅನೇಕ ಕಾರಣಗಳಿಂದ ಕಾರ್ಯಗತ ಮಾಡುವುದಕ್ಕೆ ಆಗಲಿಲ್ಲ. ಅಂಥವುಗಳನ್ನು ಈ ಸರ್ಕಾರ ಮುಂದುವರೆಸಿರುವುದನ್ನು ಈ ಸಂದರ್ಭದಲ್ಲಿ ನಾವು ಹೇಳದೇ ಹೋದರೆ ನಮ್ಮ ಕರ್ತವ್ಯದಲ್ಲಿ ಚ್ಯುತಿ ಆಗುತ್ತದೆ ಎಂದು ಭಾವಿಸಿಕೊಂಡು, ಇಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಈ ದಿಕ್ಕಿನಲ್ಲಿ ಹೋಗುತ್ತಿರುವಂಥಾದ್ದು ಸರಿಯಾದ ದಾರಿಯಾಗಿದೆ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ನಾವು ಖರ್ಚು ಮಾಡುತ್ತಿರುವ ಹಣದ ಸದುಪಯೋಗ ಎಷ್ಟರಮಟ್ಟಿಗೆ ಆಗುತ್ತಿದೆ ಎಂಬ ಬಗ್ಗೆ ತಿಳಿದುಕೊಳ್ಳಬೇಕಾದ ಅಗತ್ಯವಿದೆ. ನಾನು ಕಳೆದ ಅಧಿವೇಶನದಲ್ಲೂ ಕೂಡ ಇದರ ಬಗ್ಗೆ ಹೇಳಿದ್ದೇನಲ್ಲದೆ ಇಂದೂ ಕೂಡ ಅದರ ಬಗ್ಗೆ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಸರ್ಕಾರ ಅಕೌಂಟಬಿಲಿಟಿ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕು ಎಂಬುದು ನಮ್ಮೆಲ್ಲರ ಆಗ್ರಹವಾಗಿದೆ. ಈಗ ಆಡಳಿತದಲ್ಲಿ ಒಂದು ವ್ಯವಸ್ಥೆ ಬಂದಿದೆ. ಆ ವ್ಯವಸ್ಥೆಯನ್ನು ಬದಲಾವಣೆ ಮಾಡುವುದು ಅಷ್ಟೊಂದು ಸುಲಭವಲ್ಲ ಎನ್ನುವ ಅರಿವು ನಮಗೂ ಇದೆ. ಒಂದು ರಾಜಕೀಯ ಪಕ್ಷ ಆಡಳಿತವನ್ನು ನಡೆಸತಕ್ಕಂಥ ಸಂದರ್ಭದಲ್ಲಿ ವ್ಯವಸ್ಥೆಯ ಬದಲಾವಣೆ ಮಾಡುವುದು ಅಷ್ಟೊಂದು ಸುಲಭವಾದ ಮಾರ್ಗವಲ್ಲ. ಅದು ಬಹಳ ಕಠಿಣವಾಗಿರತಕ್ಕಂಥ ಒಂದು ಮಾರ್ಗ. ಅದಕ್ಕೋಸ್ಕರ ತ್ಯಾಗವನ್ನು ಮಾಡಬೇಕಾಗುತ್ತದೆ. ಇದು ಬಹಳ ಕಷ್ಟದ ಕೆಲಸ. ಮೊನ್ನೆ ದಿನ ಮಾನ್ಯ ಮುಖ್ಯಮಂತ್ರಿಗಳು ಕಾವೇರಿ ಜಲಾನಯನ ಪ್ರದೇಶದ ಶಾಸಕರುಗಳನ್ನು ಮಾತುಕತೆಗೆ ಕರೆಸಿದ್ದಾಗಲೂ ಕೂಡ ಹಣದ ಸದುಪಯೋಗ ಸರಿಯಾಗಿ ಆಗುತ್ತಿಲ್ಲವೆಂದು ನಾನು ಅವರ ಗಮನಕ್ಕೆ ತಂದಿದ್ದೇನೆ. ಈಗ ನೀರಾವರಿ ಯೋಜನೆಗಳಿಗಾಗಿ ಖರ್ಚು ಮಾಡುವ ದೃಷ್ಟಿಯಿಂದ ಇಟ್ಟಿರುವಂತಹ ಹಣ ಏನಿದೆ ಅದರ ಉಪಯೋಗ ಮತ್ತು ಈಗೇನು ನೀರಿದೆ ಅದರ ಬಳಕೆ ಸರಿಯಾಗಿ ಆಗುತ್ತಿದೆಯೇ? ಈಗ ಬಹಳ ದೊಡ್ಡ ಉದ್ದೇಶದಿಂದ ನೀರಾವರಿ ಸೊಸೈಟಿಗಳನ್ನು ಮಾಡುವುದಕ್ಕೆ ತಾವು ಹೊರಟಿದ್ದೀರಿ. ಆದರೆ ಕಳೆದ ಒಂದು ವರ್ಷದಲ್ಲಿ ಇವುಗಳು ಎಷ್ಟರಮಟ್ಟಿಗೆ ಕಾರ್ಯಗತ ಮಾಡುತ್ತಿದೆ ಎಂಬ ಬಗ್ಗೆ ತಾವು ವಿಚಾರವನ್ನು ಮಾಡಬೇಕಾಗುತ್ತದೆ. ಈಗ ಡಿವಿಜನಲ್ ಕಮಿಶನರ್ ಆಫೀಸ್‌ಗಳನ್ನು ಮತ್ತು ಡಿವಿಜಿನಲ್ ಕಮೀಷನರ್ ಪೋಸ್ಟ್‌ಗಳನ್ನು ಅಬಾಲಿಶ್ ಮಾಡಿರುವುದನ್ನು ಬಿಟ್ಟರೆ ಆದನ್ನು ನಿರ್ವಹಣೆ ಮಾಡುವುದಕ್ಕೆ ಎಂದು ಒಬ್ಬ ಆಫೀಸರ್‌ನ್ನು ತಾವು ನೇಮಕ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ಇನ್ನು ಯೋಜನೇತರ ವೆಚ್ಚಗಳನ್ನು ಕಡಿಮೆ ಮಾಡುವುದಕ್ಕೆ ತಾವೇನು ಸ್ಪಷ್ಟವಾದ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಈ ಸದನಕ್ಕೆ ತಿಳಿಸಬೇಕೆಂದು ನಾನು

ಆಗ್ರಹ ಮಾಡುತ್ತೇನೆ. ಇನ್ನು ಇಂಟರ್ನಲ್ ರಿಸೋರ್ಸ್‌ಸ್ ಬಗ್ಗೆ ಕೂಡ ಸರ್ಕಾರ ಅಂಥ ಗಮನಾರ್ಹವಾದ ಕ್ರಮಗಳನ್ನು ತೆಗೆದುಕೊಂಡಿಲ್ಲವೆನ್ನುವುದನ್ನು ನಾನು ಹೇಳಬಯಸುತ್ತೇನೆ. ಇನ್ನು ಪೂರಕ ಅಂದಾಜುಗಳಲ್ಲಿ ಪುಟ ೯೩ರಲ್ಲಿ ಏನು ಹೇಳಿದ್ದಾರೆಂದರೆ ರಾಯಚೂರಿನ ಒಪೆಕ್ ಆಸ್ಪತ್ರೆಗೆ ೪೦ ಲಕ್ಷ ರೂಪಾಯಿಗಳ ಅನುದಾನವನ್ನು ಮಂಜೂರಾತಿ ಮಾಡಿದ್ದೇವೆ ಮತ್ತು ಅನಂತರ ೩೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈ ಹಿಂದೆ ಉತ್ತರ ಕರ್ನಾಟಕದಲ್ಲಿ ಹೈದ್ರಾಬಾದ್ ನಿಜಾಮರು ಆಳಿದಂಥ ಪ್ರದೇಶಗಳಾದ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಜಿಲ್ಲೆಗಳ ಪ್ರದೇಶಗಳೇನಿವೆ ಆ ಪ್ರದೇಶಗಳ ರೋಗಿಗಳಿಗೆ ತಜ್ಞ ವೈದ್ಯರುಗಳ ಅವಶ್ಯಕತೆ ಇದೆ ಮತ್ತು ಚಿಕಿತ್ಸೆಯ ಅವಶ್ಯಕತೆ ಇದೆ ಎನ್ನುವ ಘನವಾದ ಉದ್ದೇಶದಿಂದಲೇ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಸುಮಾರು ೩೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆ ಒಪೆಕ್ ಆಸ್ಪತ್ರೆಯನ್ನು ಪ್ರಾರಂಭ ಮಾಡಿದೆವು. ತಾವು ಅಧಿಕಾರಕ್ಕೆ ಬಂದು ೧೮ ತಿಂಗಳುಗಳಾಗಿದೆ. ಆ ಒಪೆಕ್ ಆಸ್ಪತ್ರೆಯ ಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದರೆ ಜಿಲ್ಲಾ ಆಸ್ಪತ್ರೆಯನ್ನೇ ಆ ಒಪೆಕ್ ಆಸ್ಪತ್ರೆಯಲ್ಲಿ ನಡೆಸುತ್ತಿದ್ದಾರೆ. ಅಂದರೆ ನಾವು ೩೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಿದ್ದರೂ ಅದನ್ನು ಡಿಸ್ಟ್ರಿಕ್ಟ್ ಆಸ್ಪತ್ರೆಯನ್ನಾಗಿ ಡಿಗ್ರೇಡ್ ಮಾಡಿದರೆ ಹೇಗೆ? ತಾವೇನೋ ಈಗ ಆ ಭಾಗದ ಜನಗಳಿಗೆ ಪ್ರೌಢಶಾಲೆಗಳನ್ನು ಕೊಡುವ ಒಳ್ಳೆಯ ಕೆಲಸವನ್ನೇನೋ ಮಾಡಿದ್ದೀರಿ. ಆ ಏಳೆಂಟು ಜಿಲ್ಲೆಗಳಿಗೆ ಇದರಿಂದ ಅನುಕೂಲವಾಗಿದೆ. ಅದೇ ರೀತಿಯ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡೇ ಒಪೆಕ್ ಆಸ್ಪತ್ರೆಯನ್ನು ನಾವು ಪ್ರಾರಂಭ ಮಾಡಿದ್ದು. ಆದರೆ ಇಂದು ನೀವು ಇದರ ಬಗ್ಗೆ ಖಚಿತವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿದೆ; ಇನ್ನು ಎಷ್ಟು ವರ್ಷ ಬೇಕು ನಿಮಗೆ? ಈಗಾಗಲೇ ಎರಡು ವರ್ಷಗಳಾಗಿದೆ. ಉತ್ತರ ಕರ್ನಾಟಕದ ಬಡ ಜನಗಳಿಗೆ ಕೆಟ್ಟ ಖಾಯಿಲೆಗಳು ಬಂದಾಗ ಅವರ ಚಿಕಿತ್ಸೆಯ ಉಪಯೋಗಕ್ಕಾಗಿಯೇ ಒಪೆಕ್ ಆಸ್ಪತ್ರೆಯನ್ನು ಪ್ರಾರಂಭ ಮಾಡಿದ್ದೆವು. ನಾವೆಲ್ಲರೂ ಕೂಡ ಅಲ್ಲಿಗೆ ಹೋಗಿದ್ದೆವು. ನಾನು, ಮಾನ್ಯ ಸೋಮಶೇಖರ್, ಮಾನ್ಯ ಹಂಪನಗೌಡರು, ರಾಜ್ಯಸಭಾ ಸದಸ್ಯರಾದ ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಸೇರಿದಂತೆ ನಾವೆಲ್ಲರೂ ಆಸ್ಪತ್ರೆಯನ್ನು ನೋಡುವುದಕ್ಕೆ ಹೋಗಿದ್ದೆವು. ಇದು ಜಿಲ್ಲಾ ಆಸ್ಪತ್ರೆಯಂತೆ ನಡೆಯುತ್ತಿದೆ. ಈ ರೀತಿ ಡಿಗ್ರೇಡ್ ಮಾಡುವುದೇ ಆದರೆ ೩೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುವ ಅವಶ್ಯಕತೆಯಾದರೂ ಏನಿತ್ತು? ಇದರಿಂದ ಉತ್ತರ ಕರ್ನಾಟಕದ ಜನಗಳಿಗೆ ಯಾವ ರೀತಿ ಉಪಯೋಗವಾಗುತ್ತದೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕು. ಈ ಒಪೆಕ್ ಆಸ್ಪತ್ರೆಗೆ ಏನಾದರೂ ಒಂದು ಗತಿ ಕಾಣಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಅದನ್ನು

ಖಾಸಗಿಯವರಿಗೆ ವಹಿಸಿಕೊಡಬೇಕೆಂದಿದ್ದರೆ ಕೊಡಿ, ನಮ್ಮದೇನೂ ತಕರಾರಿಲ್ಲ. ಆದರೆ ಅಲ್ಲಿಗೆ ಸ್ಪೆಷಲಿಸ್ಟ್‌ಗಳು ಬರಬೇಕು. ಇದಕ್ಕಾಗಿ ತಾವು ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಬೇಕು. ಈಗ ಹುಬ್ಬಳ್ಳಿಯಲ್ಲಿರುವ ಆಸ್ಪತ್ರೆಗೆ, ಬಳ್ಳಾರಿ ಆಸ್ಪತ್ರೆಗೆ ಎರಡ್ಮೂರು ಕೋಟಿ ರೂಪಾಯಿಗಳ ಹೆಚ್ಚುವರಿ ದುಡ್ಡನ್ನು ಹೇಗೆ ಕೊಟ್ಟಿದ್ದೀರೋ ಅದೇ ರೀತಿಯಲ್ಲಿ ಈ ಒಪೆಕ್ಸ್ ಆಸ್ಪತ್ರೆಗೂ ಕೊಡಬೇಕು. ಸರ್ಕಾರದವರೇ ನಡೆಸುವುದಕ್ಕಾದರೆ ನಡೆಸಲಿ. ಒಂದು ವೇಳೆ ಸರ್ಕಾರ ನಡೆಸುವುದಕ್ಕೆ ಆಗಲಿಲ್ಲ ಎಂದರೆ ಬೇರೆ ಯಾರಿಗಾದರೂ ಟೆಂಡರ್ ಕರೆದು ವಹಿಸತಕ್ಕಂಥ ಕೆಲಸವನ್ನು ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಈ ಕೆಲಸವನ್ನು ಇನ್ನು ಎರಡ್ಮೂರು ತಿಂಗಳೊಳಗೆ ನಿರ್ದಿಷ್ಟವಾಗಿ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಲುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಎರಡನೆಯದಾಗಿ ಬಳ್ಳಾರಿ ಪ್ಯಾಕೇಜ್ ಅಡಿಯಲ್ಲಿ ಅಭಿವೃದ್ಧಿಗಾಗಿ ೫೦೦ ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಹೇಳಿದ್ದೀರಿ. ಇದು ರೋಡ್ ಮತ್ತು ಆಸ್ಪತ್ರೆ ಬಾಬ್ತು ಎಂದಿದ್ದೀರಿ. ಅಲ್ಲಿರುವ ಆಸ್ಪತ್ರೆಗೆ ೫ ಕೋಟಿ ರೂಪಾಯಿಗಳ ಹೆಚ್ಚು ಕೊಟ್ಟಿದ್ದೀರಿ ಎಂದು ನಾನು ತಿಳಿದು ಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೆ, ನಾನಾದರೂ ಹೇಳುವುದೇನೆಂದರೆ ಬಳ್ಳಾರಿ ಪ್ಯಾಕೇಜ್ ಏನಿದೆ ಇದನ್ನು ಪೀಸ್‌ಮೀಲ್ ಮಾಡುವುದಕ್ಕೆ ಹೋಗಬೇಡಿ. ಈಗ ಸರಿಯೋ, ತಪ್ಪೋ ಈಗಾಗಲೇ ೩೩೦೦ ಕೋಟಿ ರೂಪಾಯಿಗಳ ಪ್ಯಾಕೇಜ್‌ನ್ನು ನೀವು ಅನೌನ್ಸ್ ಮಾಡಿದ್ದೀರಿ. ಇದರಲ್ಲಿ ೨೫೦೦ ಕೋಟಿ ರೂಪಾಯಿಗಳನ್ನು ಪವರ್ ಪ್ರೊಡಕ್ಷನ್‌ಗಾಗಿ ಎಂದು ಹೇಳಿದ್ದೀರಿ. ಈ ರೀತಿ ಪೀಸ್ ಮೀಲ್ ಮಾಡಿ ಒಂದೊಂದಾಗಿ ಕೊಡುವುದರ ಬದಲು ಮುಂದಿನ ಮೂರು ವರ್ಷಗಳಲ್ಲಿ ಇನ್ನು ೮೦೦ ಕೋಟಿ ರೂಪಾಯಿಗಳೇನಿದೆ ಅದರಲ್ಲಿ ಯಾವ ಯಾವ ಬಾಬ್ತುಗಳಿಗೆ ಕೊಟ್ಟು ಅದನ್ನು ಫುಲ್‌ಫಿಲ್ ಮಾಡುತ್ತೀರಾ ಎಂಬ ಬಗ್ಗೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯವನ್ನು ಮಾಡುತ್ತಿದ್ದೇನೆ.

೧೧.೧೦ ಎ.ಎಮ್

ಪೇಜ್ ನಂಬರ್ ೭೫ರಲ್ಲಿ 'ವಿಶ್ವಬ್ಯಾಂಕಿನ ನೆರವಿನ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ದ್ವಿತೀಯ ಯೋಜನೆಯ ಸಿದ್ಧತೆಗಾಗಿ ಅನುದಾನ ಒದಗಿಸದೇ ಇರುವುದರಿಂದ ೫೦ ಲಕ್ಷ ರೂಪಾಯಿಗಳನ್ನು ಹೆಚ್ಚುವರಿಯಾಗಿ ಒದಗಿಸುವಂತೆ ಅಭಿಯಾಚನೆಯಲ್ಲಿ ಸೇರಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಅನ್ನು ರಿವ್ಯೂ ಮಾಡತಕ್ಕಂಥ ಸನ್ನಿವೇಶದಲ್ಲಿ ಈ ಸದನದ ಆಳುವ ಪಕ್ಷದ ಮತ್ತು ವಿರೋಧ ಪಕ್ಷದ ಸದಸ್ಯರುಗಳು, ಈ ವರ್ಲ್ಡ್ ಬ್ಯಾಂಕ್ ಡ್ರಿಂಕಿಂಗ್ ವಾಟರ್ ಸ್ಕೀಂ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ

ಎನ್ನುವುದರ ಬಗ್ಗೆ ರಿವ್ಯೂ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಕಳೆದ ಎಂಟುಹತ್ತು ವರ್ಷಗಳಿಂದ ಎಕ್ಸ್‌ಟರ್‌ನಲ್ ಏಡೆಡ್ ಡ್ರಿಂಕಿಂಗ್ ವಾಟರ್ ಪ್ರಾಜೆಕ್ಟ್ ಕರ್ನಾಟಕದಲ್ಲಿ ಏನಿದೆ, ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನೀವು ಧಾರವಾಡದಲ್ಲೇ ತೆಗೆದುಕೊಳ್ಳಿ, ರಾಜೀವ್‌ಗಾಂಧಿ ಟೆಕ್ನಲಾಜಿಕಲ್ ಮಿಷನ್ ಹೆಸರಿನಲ್ಲಿ ಕೊಟ್ಟಿರತಕ್ಕಂಥ ಹಣವಿರಬಹುದು, ಬೇರೆ ಬೇರೆ ದೇಶಗಳಿಂದ ಬಂದಿರತಕ್ಕಂಥ ಏಡೆಡ್ ಪ್ರಾಜೆಕ್ಟ್ ಇರಬಹುದು, ಇವುಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಏಕೆ ಆಗಿಲ್ಲ? ಈ ಸಂದರ್ಭದಲ್ಲೇ ನಾವು ಬಹಳ ಪ್ರಯತ್ನವನ್ನು ಮಾಡಿದ್ದೇವೆ; ಏನಾಗಿದೆ ಎಂದರೆ ಟ್ಯಾಂಕ್ ಕಟ್ಟಿರುತ್ತಾರೆ, ಆದರೆ ನೀರು ಸಪ್ಲೈ ಆಗುತ್ತಿಲ್ಲ. ಒಂದು ಕಡೆ ವರ್ಲ್ಡ್ ಬ್ಯಾಂಕ್‌ನಿಂದ ನಾವು ಸಾಲವನ್ನು ತೆಗೆದುಕೊಂಡು ಬರುತ್ತಿದ್ದೇವೆ. ಇದು ಸಾಲ, ಏಡ್ ಅಲ್ಲ. ಏಡ್ ಆದರೆ ಪರವಾಗಿಲ್ಲ, ಹಾಳಾಗಿ ಹೋಗಲಿ, ಏನೋ ಮಧ್ಯಸ್ಥರು ತಿಂದುಕೊಂಡು ಹೋಗಿದ್ದಾರೆಂದು ಹೇಳಬಹುದು. ಈ ಕಡೆ ಊರಿನವರಿಗೆ ಕುಡಿಯುವ ನೀರು ಇಲ್ಲ; ಮತ್ತೊಂದು ಕಡೆ ಈ ಪ್ರಾಜೆಕ್ಟ್‌ಗಳನ್ನು ನೀವು ಕಂಪ್ಲೀಟ್ ಮಾಡುತ್ತಿಲ್ಲ. ಅದಕ್ಕೋಸ್ಕರ ನೀವು ಮಾತಕ್ಕಂಥ ಎಕ್ಸ್‌ಪೆಂಡಿಚರ್ ಅಕೌಂಟಬಿಲಿಟಿ ಇದರಲ್ಲಿ ಬಂದಿಲ್ಲ ಎಂದು ನಾವು ಹೇಳುವುದು. ಈ ವರ್ಲ್ಡ್ ಬ್ಯಾಂಕ್ ಏಡನಿಂದ ಎಕ್ಸ್‌ಟರ್ನಲಿ ಇನ್ನೊಂದು ಮಾಡುವುದಕ್ಕೆ ಹೊರಟಿದ್ದೀರಿ; ಸಂತೋಷ, ಮಾಡಿ. ವರ್ಲ್ಡ್ ಬ್ಯಾಂಕ್‌ನವರು ಕುಡಿಯುವ ನೀರಿಗೆ ಸಾಲ ಕೊಡುವುದಾದರೆ ನೀವು ಮಾಡಿ. ಆದರೆ ಕಳೆದ ಹತ್ತು ವರ್ಷಗಳಲ್ಲಿ ಏನಾಗಿದೆ ಅವುಗಳ ಸ್ಥಿತಿಗತಿಗಳನ್ನು ನೋಡಿಕೊಂಡು ರಾಜ್ಯಸರ್ಕಾರ ಅದಕ್ಕೆ ಹಣ ಕೊಟ್ಟು ಆದಷ್ಟು ಬೇಗ ಪೂರ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಬಹಳ ಮುಖ್ಯವಾಗಿ ಜಯದೇವ ಆಸ್ಪತ್ರೆ ವಿಚಾರ, ಪೇಜ್ ನಂಬರ್ ೯೧, ಅದರಲ್ಲೇ ಒಂದು ಸಾರಿ ೧೫೩ ಲಕ್ಷ ರೂಪಾಯಿಗಳನ್ನು ಆ ಆಸ್ಪತ್ರೆ ಪೂರ್ತಿ ಮಾಡುವುದಕ್ಕೆಂದು ಅಭಿಯಾಚನೆಯಲ್ಲೇ ಸೇರಿಸಿದ್ದೇನೆಂದು ಹೇಳಿದ್ದೀರಿ. ಜಯದೇವ ಆಸ್ಪತ್ರೆಯ ಗೌವರ್ನಿಂಗ್ ಕೌನ್ಸಿಲ್ ಚೇರ್‌ಮನ್ ತಾವಾಗಿದ್ದೀರಿ. ನನಗೆ ಗೊತ್ತಿರುವ ಹಾಗೆ ಏಳೆಂಟು ತಿಂಗಳಿನಿಂದ ಅದರ ಸಭೆ ನಡೆದಿಲ್ಲ. ಅದಕ್ಕೆ ಅಧ್ಯಕ್ಷರು ತಾವೇ. ಯಾವ ಕಾರಣದಿಂದ ಸಭೆ ನಡೆಸಿಲ್ಲವೆಂದು ನನಗೆ ಗೊತ್ತಿಲ್ಲ. ಆದರೆ ತಾವು ಆ ಸಭೆಯನ್ನು ನಡೆಸಬೇಕು. ಅದರ ಜೊತೆಗೆ ಅಲ್ಲಿ ಕೊಡುತ್ತಿರತಕ್ಕಂಥ ಚಿಕಿತ್ಸೆ ಬಗ್ಗೆ ಸಹ ಜನರಲ್ಲಿ ಬಹಳ ಅಸಮಾಧಾನ ಇದೆ. ಚಿಕಿತ್ಸೆ ಗುಣಮಟ್ಟ ಸರಿಯಿಲ್ಲವೆನ್ನುವ ಅನುಮಾನ ವ್ಯಕ್ತಪಡಿಸುವುದರ ಜೊತೆಗೆ, ನಾವು ಬಹಳ ದೊಡ್ಡದಾದ ಉದ್ದೇಶವನ್ನು ಇಟ್ಟುಕೊಂಡು ಆ ಆಸ್ಪತ್ರೆಯನ್ನು ಪ್ರಾರಂಭ ಮಾಡಿದೆವು. ಮಾನ್ಯ ದಿವಂಗತ ದೇವರಾಜು ಅರಸುರುವರು ಮುಖ್ಯಮಂತ್ರಿಗಳಾಗಿದ್ದಾಗ ಅದನ್ನು ಮಾಡಬೇಕೆಂದು ಹೇಳಿದರು, ಆದರೆ ಅದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಪ್ರಾರಂಭ ಮಾಡಿದರು. ಮೊದಲು ಅದು ವಿಕ್ಟೋರಿಯಾ ಆಸ್ಪತ್ರೆ ಕಾರ್ಡಿಯಾಲಾಜಿ

ಡಿಪಾರ್ಟ್‌ಮೆಂಟ್ ಆಗಿತ್ತು. ಈಗಾಗಲೇ ಸಾಲವನ್ನು ತೆಗೆದುಕೊಂಡು ಸುಮಾರು ಐದು ವರ್ಷಗಳಾಗಿದೆ. ಆ ಕಟ್ಟಡವನ್ನು ಕಟ್ಟಿ ನಿಲ್ಲಿಸಿದ್ದೇವೆ. ಅದರಲ್ಲಿ ಬಿರುಕು ಬರುವುದಕ್ಕೆ ಮುಂಚೆ ಒಂದು ಪ್ರೋಗ್ರಾಂ ಹಾಕಿಕೊಳ್ಳಿ. ಒಂದೆರಡು ಅಥವಾ ಮೂರು ತಿಂಗಳಲ್ಲಿ ಅದನ್ನು ಪೂರ್ತಿ ಮಾಡುವಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಮತ್ತು ಈಗಿರತಕ್ಕಂಥ ಜಯದೇವ ಆಸ್ಪತ್ರೆಯನ್ನು ಹೊಸ ಬಿಲ್ಡಿಂಗ್‌ಗೆ ಶಿಫ್ಟ್ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಆ ಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕು. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದರ ಕಡೆಗೆ ಹೆಚ್ಚಿನ ಗಮನವನ್ನು ಕೊಡುವಂತಹ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ; ಇಲ್ಲದೇ ಹೋದರೆ ನಾವು ಯಾವ ಉದ್ದೇಶ ಇಟ್ಟುಕೊಂಡು ಆಸ್ಪತ್ರೆ ಪ್ರಾರಂಭ ಮಾಡಿದೆವೋ ಆ ಉದ್ದೇಶ ಈಡೇರುವುದಿಲ್ಲ. ಇನ್ನು ಒಐಸಿಎಫ್ ಪ್ರಾಜೆಕ್ಟ್ ಫಾರೆಸ್ಟ್ ಡೆವಲಪ್‌ಮೆಂಟ್ ದೃಷ್ಟಿಯಿಂದಾಗಿ ಈ ಯೋಜನೆ ಅಡಿಯಲ್ಲಿ ೨೫೦೦ ಲಕ್ಷ ರೂಪಾಯಿಗಳನ್ನು ಅಭಿಯಾಚನೆಯಲ್ಲಿ ಸೇರಿಸಿದ್ದೇವೆಂದು ಹೇಳಿದ್ದಾರೆ. ನಾನಾದರೂ ಹೇಳುವುದೇನೆಂದರೆ, ಇದರ ಬಗ್ಗೆ ರಿವ್ಯೂ ಮಾಡಬೇಕು. ಇದು ಕೋಲಾರ ಜಿಲ್ಲೆ, ಬೆಂಗಳೂರು ಜಿಲ್ಲೆ - ಹೀಗೆ ಸುಮಾರು ಏಳೆಂಟು ಜಿಲ್ಲೆಗಳು ಈ ಒಂದು ಪ್ರಾಜೆಕ್ಟ್‌ನಲ್ಲಿ ಕವರ್ ಆಗಿದೆ. ಆದರೆ ವಾಸ್ತವಾಂಶದಲ್ಲಿ ಸಸಿಗಳನ್ನು ನೆಡೆತಕ್ಕಂಥ ಕಾರ್ಯಕ್ರಮ ಮತ್ತು ಇದರಲ್ಲಿ ಹೆಚ್ಚಿನ ಹಣ ದುರುಪಯೋಗವಾಗಿದೆ. ಇದು ನಮ್ಮ, ನಿಮ್ಮ ಸರ್ಕಾರ ಇದ್ದಾಗ ಎನ್ನುವ ಪ್ರಶ್ನೆ ಇಲ್ಲ. ನಾವು ಸಾಲವನ್ನು ತೆಗೆದುಕೊಂಡು ಬಡ್ಡಿ ಕಟ್ಟಿ ಇಲ್ಲಿ ಬಂದಿರುವುದರಿಂದ ಹಣದ ದುರುಪಯೋಗವಾಗಿದೆ ಎನ್ನುವುದಕ್ಕೆ ಸ್ಪಷ್ಟವಾದ ಉದಾಹರಣೆ ಎಂದರೆ ಈ ಅರಣ್ಯ ಇಲಾಖೆಯಲ್ಲಿ ಆಗಿರುವ ಈ ಯೋಚನೆ. ಇದರ ಹಣವನ್ನು ಅಧಿಕಾರಿಗಳು ತಿಂದುಕೊಂಡು ಕುಳಿತಿದ್ದಾರೆಂದು ಸ್ಪಷ್ಟವಾಗಿ ಹೇಳಬಹುದು. ಇದನ್ನು ಬಿಗಿ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತಾ, ಮಾನ್ಯ ಮುಖ್ಯಮಂತ್ರಿಗಳ ಈ ಪೂರಕ ಅಂದಾಜುಗಳಿಗೆ ನಮ್ಮ ಒಪ್ಪಿಗೆಯನ್ನು ಕೊಡುವುದಕ್ಕೆ ಮುನ್ನ ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡುತ್ತಿದ್ದೇನೆ. ತಾವು ಕಳೆದ ಚುನಾವಣೆಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಸಂಭಾವನೆಯನ್ನು ಜಾಸ್ತಿ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದೀರಿ. 'ಸ್ತ್ರೀ ಶಕ್ತಿ' ಕಾರ್ಯಕ್ರಮ ಪ್ರಾರಂಭವಾಗಿದೆ. 'ಸ್ತ್ರೀ ಶಕ್ತಿ'ಯನ್ನು ಆರ್ಗನೈಜ್ ಮಾಡುತ್ತಿರುವವರಲ್ಲಿ ಒಂದು ಭಾಗ ಅಂಗನವಾಡಿ ಕಾರ್ಯಕರ್ತೆಯರು ಎಂದು ತಾವೂ ಕೂಡ ಒಪ್ಪಿದ್ದೀರಿ. ಇನ್ನು ಸ್ತ್ರೀಶಕ್ತಿ ಕಾರ್ಯಕ್ರಮ ಚೆನ್ನಾಗಿ ನಡೆಯಬೇಕೆಂದು ನಮ್ಮೆಲ್ಲರ ಆಸೆ. ಅದರಿಂದಾಗಿ ಯಾವುದಾದರೂ ಒಂದು ಯೋಜನೆಯಿಂದ ಈ ಅಂಗನವಾಡಿ ಕಾರ್ಯಕರ್ತೆಯರ ಸಂಭಾವನೆಯನ್ನು ಹೆಚ್ಚು ಮಾಡುವುದಕ್ಕೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಇನ್ನು ಎರಡನೆಯದಾಗಿ ಒಎಫ್ ಹಣವನ್ನು

ನೂರರಿಂದ ನೂರೈವತ್ತು ರೂಪಾಯಿಗಳಿಗೆ ಹೆಚ್ಚು ಮಾಡುತ್ತೇವೆಂದು ಒಂದು ಭರವಸೆಯನ್ನು ನಿಮ್ಮ ಮ್ಯಾನಿಫೆಸ್ಟೋದಲ್ಲಿ ಹೇಳಿದ್ದೀರಿ. ನಾನು ಕಳೆದ ಸಾರಿ ಬಜೆಟ್‌ನಲ್ಲಿ ಕೇಳಿದಾಗ ತಾವು ಏನು ಹೇಳಿದಿರಿ, ಇನ್ನು ನಾಲ್ಕು ಬಜೆಟ್ ಇದೆಯಲ್ಲ ಸಿಂಧ್ಯರವರೆ, ನಮ್ಮ ಸರ್ಕಾರ ಮುಗಿದುಹೋಯಿತಾ? ಇನ್ನು ನಾಲ್ಕು ಬಜೆಟ್ ಪ್ರೆಸಂಟ್ ಮಾಡುತ್ತೇವಲ್ಲಾ ಆಗ ಮಾಡುತ್ತೇನೆಂದು ಹೇಳಿದಿರಿ. ಆದರೆ ಅದನ್ನು ಮಾಡಿಲ್ಲ. ಅದನ್ನು ಮಾಡಬೇಕು. ಅದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ಉತ್ತರ ಕೊಡತಕ್ಕಂಥ ಸನ್ನಿವೇಶದಲ್ಲಿ ಒಂದು ಮಾತನ್ನು ಕೊಟ್ಟಿದ್ದಾರೆ. ಉಪ ಖಜಾನೆಗಳಲ್ಲಿ ಅವ್ಯವಹಾರ ನಡೆಯುತ್ತಿದೆಯೇ ಎಂದರೆ ನಡೆಯುತ್ತಿದೆ, ಎಷ್ಟು ದುರುಪಯೋಗವಾಗಿದೆ ಎಂದರೆ ೬, ೩೨, ೧೦, ೫೫೦ ರೂಪಾಯಿಗಳು ದುರಪಯೋಗವಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಇದು ಹೊಸದೆಂದು ನಾನು ಹೇಳುತ್ತಿಲ್ಲ. ಉಪ ಖಜಾನೆಗಳಲ್ಲಿ ಇದು ನಡೆಯುತ್ತಿರುವುದು ಸತ್ಯವಾದ ಮಾತು. ಆದರೆ ಅದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು. ಅದರ ಜೊತೆಗೆ ಓಎಪಿ ಹಣ ನಾಲ್ಕೈದು ತಿಂಗಳಿಗೆ ಒಂದು ಸಾರಿ ಬಿಡುಗಡೆಯಾಗುತ್ತದೆ. ಬಡವರು ಪಾಪ ಶಾಪ ಹಾಕುತ್ತಿದ್ದಾರೆ. ಅದು ಏನಾಗುತ್ತದೆ ಎಂದರೆ ಪೋಸ್ಟ್‌ಮ್ಯಾನ್ ಇರುತ್ತಾನಲ್ಲಾ, ೪-೫ ತಿಂಗಳಿಗೆ ಒಂದು ಸಾರಿ ಕೊಡಬೇಕಾದರೆ ೪೦೦ ಅಥವಾ ೫೦೦ ರೂಪಾಯಿಗಳಿಗೆ ಸೈನ್ ಹಾಕಿಸಿಕೊಂಡು ನೂರು ರೂಪಾಯಿಗಳನ್ನು ಅವನೇ ಇಟ್ಟುಕೊಂಡು ಬಿಡುತ್ತಾನೆ. ಇದು ಎಲ್ಲಾ ಕಡೆ ಇರತಕ್ಕಂಥಾದ್ದು ಹಾಗೂ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಗೊತ್ತಿರತಕ್ಕಂಥಾದ್ದು. ಇದನ್ನು ಮಾನಿಟರ್ ಮಾಡುವುದಕ್ಕೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತೇನೆ. ಇನ್ನು ಆಶ್ರಯ ಮನೆಗಳು; ೧೯೯೪ರ ಹೊಸದರಲ್ಲಿ ನಾವು ಅಧಿಕಾರಕ್ಕೆ ಬಂದಾಗ ಒಂದು ಯುನಿಟ್‌ಗೆ ಹನ್ನೆರಡು ಸಾವಿರ ರೂಪಾಯಿಗಳು ಇತ್ತು. ಅದನ್ನು ನಾವು ಇಪ್ಪತ್ತು ಸಾವಿರ ರೂಪಾಯಿಗಳಿಗೆ ಹೆಚ್ಚುತ ಮಾಡಿದೆವು. ಆದರೆ ಅದು ಸಾಕಾಗುವುದಿಲ್ಲ. ಆ ಇಪ್ಪತ್ತು ಸಾವಿರ ರೂಪಾಯಿಗಳನ್ನು ತಮಗೆ ಗೊತ್ತಿರುವ ಹಾಗೆ ನಾಲ್ಕೈದು ಹಂತದಲ್ಲಿ ದುಡ್ಡನ್ನು ಕೊಡುತ್ತಿದ್ದೇವೆ. ಅದನ್ನು ಚೆಕ್‌ಗಳಲ್ಲಿ ಕೊಟ್ಟರೂ, ಸ್ವತಃ ನಾವೇ ಎಂ.ಎಲ್.ಎಗಳು ಹೋಗಿ ಡಿಸ್ಟ್ರಿಬ್ಯೂಟ್ ಮಾಡಿದರೂ ಸಹ ಎಲ್ಲೋ ಒಂದು ಕಡೆ ಎರಡು ಸಾವಿರ ರೂಪಾಯಿಗಳಷ್ಟು ಬೇರೆಯವರಿಗೆ ಹೊರಟು ಹೋಗಿಬಿಡುತ್ತದೆ. ಹಾಗಾಗಿ ಹದಿನೆಂಟು ಸಾವಿರ ರೂಪಾಯಿಗಳಷ್ಟೇ ಅವರ ಕೈಗೆ ಸಿಕ್ಕುತ್ತಿರುವುದು; ತಾವು ದಯವಿಟ್ಟು ಆ ಸಿಸ್ಟಂ ಅನ್ನು ಬದಲಾವಣೆ ಮಾಡಬೇಕು. ಅದನ್ನು ಮಾಡಿದರೆ ಬಹಳ ಒಳ್ಳೆಯ ಕೆಲಸವಾಗುತ್ತದೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನಾನು ಪ್ರಾರಂಭದಲ್ಲೇ ಹೇಳಿದೆ; ಆ ಆಶ್ರಯ ಯೋಜನೆಯಡಿಯಲ್ಲಿ ಏನು ಪ್ರತಿವರ್ಷ ಎರಡು ಲಕ್ಷ ಮನೆಗಳನ್ನು ಕಟ್ಟಬೇಕೆಂದು ಹೊರಟಿದ್ದೀರಿ, ಇದು

ಒಂದು ಒಳ್ಳೆಯ ಕೆಲಸ, ಮುಂದುವರೆಸಿ ಎಂದು ನಾವು ಹೇಳಿದ್ದೇವೆ. ಆದರೆ ಒಂದು ಯುನಿಟ್ ಕಾಸ್ಟ್ ೨೦ರಿಂದ ೩೦ ಸಾವಿರ ರೂಪಾಯಿಗಳವರೆಗೆ ಮಾಡಬೇಕು; ಇದೊಂದು ನನ್ನ ಒತ್ತಾಯ. ಇನ್ನು ಎರಡನೆಯದಾಗಿ ಬಡವರು ಎರಡು-ಮೂರು ಸಾವಿರ ರೂಪಾಯಿಗಳಿಗೆ ಒಂದು ಕಲ್ಲು, ಸಿಮೆಂಟ್ ಹಾಕಿ ಜೋಡಿಸಿ ಪಾಯ ಹಾಕಿದಮೇಲೆ ಮೊದಲನೆ ಬಿಲ್ಲು ಕೊಡಬೇಕು ಎಂದು ಸರ್ಕ್ಯುಲರ್ ಹೋಗಿದೆ. ಅದು ಆಗುತ್ತಿಲ್ಲ. ಇದು ಏನಾಗಿದೆ ಎಂದರೆ ಅದಕ್ಕೆ ಶಕ್ತಿ ಇರುವಂತಹವರನ್ನೇ ಫಲಾನುಭವಿಗಳನ್ನಾಗಿ ಸೆಲೆಕ್ಟ್ ಮಾಡಿಕೊಳ್ಳಬೇಕೇ ಹೊರತು ತೀರಾ ಬಡವರು ಯಾರಿಗೆ ಅರ್ಹತೆ ಇದೆ ಅಂತಹವರಿಗೆ ಮುಂದೆ ಬರುವುದಕ್ಕೆ ಆಗುತ್ತಿಲ್ಲ. ಅದಕ್ಕೆ ಯಾವರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒಂದು ಸಿಸ್ಟಂ ಅನ್ನು ಎವಾಲ್ವ್ ಮಾಡಬೇಕಾಗುತ್ತದೆ. ಅಡ್ವಾನ್ಸ್ ಆಗಿ ಮೆಟರೀಯಲ್ಸ್ ಆದರೂ ಕೊಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಿ. ಒಂದು ನಾಲ್ಕು ಚೀಲ ಸಿಮೆಂಟ್, ಅಥವಾ ಒಂದ್ಹತ್ತು ಕಲ್ಲುಗಳನ್ನು ಕೊಡತಕ್ಕಂಥ ಕ್ರಮ ತೆಗೆದುಕೊಂಡರೆ ನಿಜವಾಗಿ ಬಡವರು ಫೌಂಡೇಷನ್ ಹಾಕಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಂತರ ನೀವು ಎರಡು ಮೂರು ಸ್ಟೇಜ್‌ಗಳಲ್ಲಿ ಚೆಕ್ ಅನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ಎರಡು ವಿಚಾರಗಳನ್ನು ಹೇಳಬಯಸುತ್ತೇನೆ; ಅದು ಏನೆಂದರೆ ಗುಜರಾತ್ ಹಾಗೂ ಒರಿಸ್ಸಾ ರಾಜ್ಯಗಳಲ್ಲಿ, ಗುಜರಾತ್‌ನಲ್ಲಿ ಭೂಕಂಪವಾದಾಗ ಪರಿಹಾರ ನಿಧಿಯನ್ನು ಮಾಡಿ ಹಣ ಕಳುಹಿಸಿದ್ದೀರಿ, ಅದೇ ರೀತಿಯಲ್ಲಿ ಒರಿಸ್ಸಾದಲ್ಲಿ ಚಂಡಮಾರುತವಾದಂತಹ ಸಂದರ್ಭದಲ್ಲಿ ಕೂಡ ಪರಿಹಾರನಿಧಿ ಎಂದು ಮಾಡಿ ಹಣವನ್ನು ಕಳುಹಿಸಿದ್ದೀರಿ. ಅದು ಯಾವ ರೀತಿಯಲ್ಲಿ ಉಪಯೋಗವಾಗಿದೆ ಅಥವಾ ದುರುಪಯೋಗವಾಗಿದೆಯಾ ಎಂಬ ಬಗ್ಗೆ ಏನಾದರೂ ಅಕೌಂಟೆಬಲಿಟಿ ಇದೆಯಾ? ಇದರ ಬಗ್ಗೆ ಯಾರಾದರೂ ಒಬ್ಬ ಅಧಿಕಾರಿಯನ್ನು ನಿಯೋಜಿಸಿದ್ದಿರಾ? ಈ ಹಣ ಸದುಪಯೋಗವಾಗಿದೆಯಾ ಎಂಬುದು ಈ ಸದನ ಹಾಗೂ ಜನರು ತಿಳಿದುಕೊಳ್ಳಲು ಬಯಸುತ್ತಾರೆ. ಆದುದರಿಂದ ಇದರ ಬಗ್ಗೆ ಸರ್ಕಾರ ವಿವರಗಳನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ. ನಮ್ಮ ರಾಜ್ಯ ಬರಗಾಲದಲ್ಲಿದೆ ಎಂಬುದನ್ನು ನಾವು ಹೇಳಿಕೊಂಡು ಬರುತ್ತಿದ್ದೇವೆ, ಮಾನ್ಯ ಮುಖ್ಯಮಂತ್ರಿಯವರೂ ಸಹ ಸಂಸತ್ ಸದಸ್ಯರುಗಳನ್ನು, ವಿರೋಧಪಕ್ಷದ ನಾಯಕರುಗಳ ನಿಯೋಗವನ್ನು ಮಂಗಳವಾರ ದೆಹಲಿಗೆ ಕರೆದುಕೊಂಡು ಹೋಗುತ್ತಿದ್ದಾರೆ. ಈ ಮಧ್ಯದಲ್ಲಿ ತಾವು ಆವರ್ತ ನಿಧಿಗೆ ೪೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ತಾವು ಕಳೆದ ಬಜೆಟ್‌ನಲ್ಲಿ ಕೂಡ ಅವಕಾಶನ್ನು ಮಾಡಿಕೊಂಡಿಲ್ಲ, ಅಂದಮೇಲೆ ಯಾವ ರೀತಿಯಾಗಿ ಈ ೪೦೦ ಕೋಟಿ ರೂಪಾಯಿಗಳನ್ನು ಮೊಬೆಲೈಜ್ ಮಾಡಿಕೊಳ್ಳುತ್ತೀರೆಂಬುದನ್ನು ಹೇಳಿಲ್ಲ. ಈಗ ನೀವು ಅವಶ್ಯಕತೆ ಇದ್ದಾಗ ನಾವು ಮಾಡುತ್ತೇವೆಂದು ಹೇಳಬಹುದು,

ಆದರೂ ನಾನು ಒತ್ತಾಯ ಮಾಡುವುದೇನೆಂದರೆ ಯಾವ್ಯಾವ ರಿಸೋರ್ಸ್‌ನಿಂದ ಈ ೪೦೦ ಕೋಟಿ ರೂಪಾಯಿಗಳನ್ನು ಮೊಬಲೈಜ್ ಮಾಡುತ್ತೀರೆನ್ನುವುದನ್ನು ತಿಳಿಸಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಈಗ ಇನ್ನೊಂದು ಕಾಂಟ್ರೋವರ್ಸಿ ಪ್ರಾರಂಭವಾಗಿದೆ, ಈಗ ಲೋಕಾಯುಕ್ತ ಆ್ಯಕ್ಟ್‌ಗೆ ಅಮೆಂಡ್‌ಮೆಂಟ್ ತರಬೇಕೆಂಬ ವಿಚಾರವಿದೆ. ತಾವು ನಿನ್ನೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ, ಒಂದು ಅಕೌಂಟೆಬಿಲಿಟಿ ಬರಬೇಕೆಂದರೆ ಯಾವ ಆಫೀಸರ್ ರಿಸೋರ್ಸಸ್ ಮೊಬಲೈಜ್ ಮಾಡುವುದಿಲ್ಲವೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ, ಅವರನ್ನೇ ಜವಾಬ್ದಾರರನ್ನಾಗಿ ಮಾಡುತ್ತೇವೆನ್ನುವ ಮಾತನ್ನು ಹೇಳಿದ್ದೀರಿ. ಲೋಕಾಯುಕ್ತದವರು ಆ್ಯಕ್ಟಿವ್ ಆಗಿ ಇದ್ದಾರೆ. I have welcomed that move. ಲೋಕಾಯುಕ್ತ ಆ್ಯಕ್ಟ್‌ನಲ್ಲಿ ಪ್ರಾವಿಷನ್ ಇದೆಯೋ, ಇಲ್ಲವೋ, ಆದರೆ ಇವರು ಆಸ್ಪತ್ರೆಗಳಿಗೆ, ಹಾಸ್ಟೆಲ್‌ಗಳಿಗೆ ಭೇಟಿ ಕೊಟ್ಟಿರುವಂಥಾದ್ದು ಇದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡುತ್ತದೆ. ಈಗಾಗಲೇ ಇದರ ಬಗ್ಗೆ ಸದನದ ಒಳಗಡೆ, ಹೊರಗಡೆ ಚಿಂತನೆ ಪ್ರಾರಂಭವಾಗಿದೆ. ಇದು ಒಂದು ರೀತಿಯಲ್ಲಿ ಒಳ್ಳೆಯದು ಆಗಿದೆ. ಆದರೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುವಂಥಾದ್ದು ಏನೆಂದರೆ, in order to strengthen the hands of LokAyuktha ತಾವು ಇದೇ ಸದನದಲ್ಲಿ ಸಾಧ್ಯವಾದರೆ ಅಮೆಂಡ್‌ಮೆಂಟ್ ತರುತ್ತೇವೆಂಬುದನ್ನು ಹೇಳಿದ್ದೀರಿ; ಈಗ ಕೆ.ಪಿ.ಟಿ.ಸಿ.ಎಲ್ ಬಗ್ಗೆ ವಿದ್ಯುತ್ ಕಳ್ಳತನ ಹಿಡಿಯುವುದರ ಬಗ್ಗೆ ಅಮೆಂಡ್‌ಮೆಂಟ್ ತಂದಿದ್ದೀರಿ, ಅದನ್ನು ನಾವು ಸ್ವಾಗತ ಮಾಡಿದ್ದೇವೆ. ಅದೇ ರೀತಿಯಲ್ಲಿ ಈ ಲೋಕಾಯುಕ್ತ ಆ್ಯಕ್ಟ್ ಅನ್ನು ಶಕ್ತಿಯುತವನ್ನಾಗಿ ಮಾಡುವುದಕ್ಕೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಈಗ ಸದನವೂ ನಾಳೆ ಮುಕ್ತಾಯವಾಗುತ್ತಿದೆ ಎಂದು ನಾವು ತಿಳಿದುಕೊಂಡಿದ್ದೇವೆ. ಆದರೂ ತಾವು ಒಂದು ಆರ್ಡಿನೆನ್ಸ್ ಫಾರಂನಲ್ಲಿ ತೆಗೆದುಕೊಂಡು ಬನ್ನಿ, ಅದರಿಂದ ಏನೂ ತೊಂದರೆ ಇಲ್ಲ. ಇದು ಮುಖ್ಯವಾಗಿ ಆಗಬೇಕು, ಏಕೆ ಆಗಬೇಕೆಂದರೆ ಮಾನ್ಯ ಕೆ.ಬಿ.ಮಲ್ಲಿಕಾರ್ಜುನರವರು ಸದನದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಎಲ್.ಓ.ಸಿ ರಿಲೀಜ್ ಮಾಡುವಂತಹ ಸಂದರ್ಭದಲ್ಲಿ ಏನೇನು ಆಗುತ್ತದೆಂಬುದನ್ನು ಮಾನ್ಯ ಹಣಕಾಸಿನ ಮಂತ್ರಿಯವರಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದಾರೆ. ಇದಕ್ಕೆ ತಾವು ಯಾವ ರೀತಿಯಾಗಿ ಸ್ಟ್ರೀಮ್‌ಲೈನ್ ಮಾಡುತ್ತೇವೆಂಬ ಬಗ್ಗೆ ಭರವಸೆಯನ್ನು ಕೊಟ್ಟಿದ್ದೀರಿ, ಅದು ಒಂದು ಭಾಗವಾಗಿದೆ. ಆದರೆ ಅದಕ್ಕಿಂತ ಮುಖ್ಯವಾಗಿ ಈ ಲೋಕಾಯುಕ್ತ ಆ್ಯಕ್ಟ್ ಅನ್ನು ಅಮೆಂಡ್‌ಮೆಂಟ್ ಮಾಡುವ ಮೂಲಕ ನಾವು ಏನು ಈ ಪೂರಕ ಅಂದಾಜುಗಳ ಮೂಲಕ ಹಣವನ್ನು ಕೊಡುತ್ತೇವೆ, ಅದರ ಹಣ ಸರಿಯಾದಂತಹ ರೀತಿಯಲ್ಲಿ ಉಪಯೋಗವಾಗುತ್ತದೆ, ಒಳ್ಳೆಯ ಫಲಿತಾಂಶ ಬರುತ್ತದೆ, ಈ ಕಾರಣದಿಂದ ಇದನ್ನು ತಕ್ಷಣ ಮಾಡಬೇಕೆಂದು ನಾನು ಅಗ್ರಹ

ಮಾಡುತ್ತೇನೆ. ಇನ್ನು ವರಾಹಿ ಯೋಜನೆಯ ಬಗ್ಗೆ ಮಾನ್ಯ ಶ್ರೀನಿವಾಸ ಶೆಟ್ಟಿಯವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ವರಾಹಿ ಯೋಜನೆಯಲ್ಲಿ ೪-೫ ಕಿ.ಮೀ.ನಲ್ಲಿ ಕೆಲವು ವರ್ಕ್‌ಗಳನ್ನು ಒಬ್ಬ ಪರ್ಟಿಕ್ಯುಲರ್ ಕಂಟ್ರಾಕ್ಟ್‌ದಾರನಿಗೆ ಕೊಟ್ಟಿದ್ದಾರೆ, ಅದಾದನಂತರ ಅದನ್ನು ಯಾವ ಒತ್ತಡದಿಂದಲೋ ಇದನ್ನು ಮುಂದುವರೆಸಿಕೊಂಡು ಹೋಗಿ ಎಂದು ಹೇಳಿದ್ದಾರೆ. ಮತ್ತೆ ಇದನ್ನು ಯಾವ ಒತ್ತಡಕ್ಕೆ ಬದಲಾವಣೆ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಇಲ್ಲಿ ಪಾರದರ್ಶಕತೆಯಿಂದ ನಡೆಯಬೇಕೆಂದು ನಮ್ಮ ಆಗ್ರಹವಾಗಿದೆ. ನನ್ನ ಅಭಿಪ್ರಾಯವೇನೆಂದರೆ, ಈ ವರಾಹಿ ಯೋಜನೆಯ ಕೆಲಸಗಳಿಗೆ ಹಣವನ್ನು ಮಂಜೂರು ಮಾಡುವುದಕ್ಕೆ ಮುಂಚೆ ಮಾನ್ಯ ಮುಖ್ಯಮಂತ್ರಿಯವರು ಒಂದು ದಿವಸ ರಿವ್ಯೂ ಮಾಡಿ ಸುಮಾರು ೧೫ ಕೋಟಿ ರೂಪಾಯಿಗಳಲ್ಲಿ ಆಗುವಂತಹ ಕೆಲಸವನ್ನು ಸುಮಾರು ೪೦-೫೦ಕೋಟಿ ರೂಪಾಯಿಗಳವರೆಗೆ ತೆಗೆದುಕೊಂಡು ಹೋಗುವಂತಹ ಸಂದರ್ಭಗಳು ಇದೆ, ಇದುವರೆಗೂ ಕೆಲಸವಾಗಿಲ್ಲ. ಗೌರ್ವನ್‌ಮೆಂಟ್ ಆಫ್ ಇಂಡಿಯಾದವರು Environmental clearance ಕೊಟ್ಟಿಲ್ಲವೆಂದು ಆಯಿತು. ಈಗ ಕ್ಲಿಯರ್‌ನ್ಸ್ ಬಂದಿದೆ, ಇದು ಬಂದಂತಹ ಸನ್ನಿವೇಶದಲ್ಲಿ ಆದಷ್ಟು ಬೇಗ ಅದನ್ನು ಪೂರೈಸಬೇಕಾದರೆ ಕೆಲವು bottlenecks and vested interests ಏನು ಇವೆ. ಆ ಪ್ರೆಷರ್‌ಗೆ yield ಆಗದ ಹಾಗೆ ಆ bottlenecksಗಳನ್ನು ರಿಮೂವ್ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಆ ಪೂರಕ ಅಂದಾಜುಗಳ ಪದ್ಧತಿ ಸರಿಯಿಲ್ಲದೇ ಇರುವಂತಹ ಪದ್ಧತಿಯಾಗಿದೆ, ಏಕೆಂದರೆ ನಾವು ಪ್ಲಾನಿಂಗ್ ಕಮಿಷನ್, ಪ್ಲಾನಿಂಗ್ ಬೋರ್ಡ್, ಮತ್ತೊಂದು, ಮಗದೊಂದು ಎಂದು ಎಲ್ಲವನ್ನು ಇಟ್ಟುಕೊಂಡರೂ ಸಹಿತ ಎಲ್ಲಾ ಸರ್ಕಾರಗಳಲ್ಲೂ ಎಲ್ಲಾ ಫೈನಾನ್ಸ್ ಮಿನಿಸ್ಟರ್‌ಗಳು ಸಹಿತ ಈ ಪೂರಕ ಅಂದಾಜುಗಳ, ಸಪ್ಲಿಮೆಂಟರಿ ಡಿಮಾಂಡ್ಸ್‌ನ ಮೊದಲನೇ ಕಂತನ್ನು ಈಗ ಪಾಸ್ ಮಾಡಿಕೊಂಡು ಮತ್ತೆ ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಇನ್ನೊಂದು ಸಾರಿ ಸಭೆ ಸೇರಿದಾಗ ಸಪ್ಲಿಮೆಂಟರಿ ಡಿಮಾಂಡ್ಸ್ ಎರಡನೆಯ ಕಂತನ್ನು ಈ ಸದನದಲ್ಲಿ ತೆಗೆದುಕೊಂಡೇ ಬರುತ್ತೇವೆ. ಆದರೆ ಒಂದು ವಿಷಯವೇನೆಂದರೆ ಆದಷ್ಟು ಇದನ್ನು ಕಡಿಮೆ ಮಾಡಿ. ಹಿಂದಿನ ಕಾಲದಲ್ಲಿ ಮಹಾರಾಜರು ಪ್ರವಾಸ ಹೋದಂತಹ ಸನ್ನಿವೇಶದಲ್ಲಿ ಹೋದ ಕಡೆಯಲ್ಲೆಲ್ಲಾ ಅವರನ್ನು ಮಹಾಸ್ವಾಮಿ ಎಂದು ಹೊಗಳಿ ಅರ್ಜಿಯನ್ನು ಕೊಟ್ಟು, ನಮಗೆ ಇಷ್ಟು ದುಡ್ಡನ್ನು ಕೊಡಿ ಎಂದು ಕೇಳುತ್ತಿದ್ದರು, ಆಗ ಮಹಾರಾಜರು ಆಯಿತು, ತೆಗೆದುಕೊಳ್ಳಿ ತಥಾಸ್ತು ಎಂದು ಕೊಡುತ್ತಿದ್ದರು. ಈ ರೀತಿ ಪೂರಕ ಅಂದಾಜು ಸ್ವಲ್ಪಮಟ್ಟಿಗೆ ಹಾಗೆ ಆಗಿರುವಂಥಾದ್ದು. ಇದನ್ನು ನಾವು ಏನು ಮಾಡುವುದಕ್ಕಾಗುವುದಿಲ್ಲ, ಅನಿವಾರ್ಯವಾಗಿದೆ. ಮನಸ್ಸು ಇಲ್ಲದೇ ಇದ್ದರೂ ಇದಕ್ಕೆ ಒಪ್ಪಿಗೆ ಕೊಡಬೇಕಾಗುತ್ತದೆ. ಆದುದರಿಂದ ನಾನು ಇದಕ್ಕೆ ಒಪ್ಪಿಗೆಯನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೇ, ನಾನು ಕೇವಲ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಅದು ಕುದುರೆಮುಖ ರಕ್ಷಿತ ಅರಣ್ಯದ ಅಭಿವೃದ್ಧಿಗಾಗಿ ಕುದುರೆಮುಖ ಕಬ್ಬಿಣ ಅದಿರು ಕಂಪನಿ ಇನ್ನೂರು ಲಕ್ಷ ರೂಪಾಯಿಗಳನ್ನು ಸರ್ಕಾರದ ಸಂಚಿತ ನಿಧಿಗೆ ಜಮಾ ಮಾಡಿದೆ. ಈ ಬಾಬ್ತಿನಲ್ಲಿ ಆಯವ್ಯಯದಲ್ಲೂ ಸಾಕಷ್ಟು ಅವಕಾಶ ಇಲ್ಲದ ಕಾರಣ ೧೯೯ ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಅಭಿಯಾಚನೆಯಲ್ಲಿ ಸೇರಿಸಲಾಗಿದೆ, ಅಂದರೆ ಈಗಾಗಲೇ ಸಾಕಷ್ಟು ಗೊಂದಲಮಯವಾದ ವಾತಾವರಣ ನಿರ್ಮಾಣವಾಗಿದೆ. ಈಗ ಡೀ-ನೋಟಿಫೈ ಮಾಡಬೇಕೆಂದು ಹೇಳುವಂಥಾದ್ದು ಮತ್ತು ಸ್ವಲ್ಪ ಅರಣ್ಯ ಭಾಗವನ್ನು ನಾಶ ಮಾಡಬರದೆಂದು ಹೇಳುವಂಥಾದ್ದೆಲ್ಲಾ ಆಗಿದೆ. ಈ ಹಿನ್ನಲೆಯಲ್ಲಿ ಇದನ್ನು ಸೇರಿಸುವಂತಹ ಅವಶ್ಯಕತೆ ಇತ್ತೆ ಎಂಬುದನ್ನು ತಾವು ಕ್ಲಾರಿಫೈ ಮಾಡಬೇಕೆಂದು ಕೇಳುತ್ತೇನೆ.

+ ಶ್ರೀ ಕೆ.ಶ್ರೀನಿವಾಸಗೌಡ (ಕೋಲಾರ): ಮಾನ್ಯ ಅಧ್ಯಕ್ಷರೇ, ಇವತ್ತು ಈ ಸಭೆಯಲ್ಲಿ ಪೂರಕ ಅಂದಾಜುಗಳನ್ನು ಸರ್ಕಾರ ನಮ್ಮ ಮುಂದೆ ಇಟ್ಟಿದೆ. ನಾನು ಇದರ ಬಗ್ಗೆ ಮೊದಲನೆಯದಾಗಿ ಹೇಳಬೇಕೆಂದರೆ ಬಿಹಾರ, ಆಂಧ್ರಪ್ರದೇಶದಂತಹ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯ ಇದನ್ನು ಸರಿಯಾದಂತಹ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದೆ. ಸುಮಾರು ೧೦-೧೫ ವರ್ಷಗಳಿಂದಲೂ ನಮ್ಮ ರಾಜ್ಯದಲ್ಲಿ ಹಣಕಾಸಿನ ತೊಂದರೆ ಎಷ್ಟೇ ಇದ್ದರೂ ಕೂಡ ಇದನ್ನು ಸಮರ್ಪಕವಾಗಿ ತೆಗೆದುಕೊಂಡು ಹೋಗುತ್ತಿದೆ ಎನ್ನತಕ್ಕ ವಿಚಾರವನ್ನು ಹೇಳಬಯಸುತ್ತೇನೆ. ಇವತ್ತು ನಾನು ಹನಿ ನೀರಾವರಿಯ ಬಗ್ಗೆ ಹೇಳುವುದಾದರೆ, ಇದಕ್ಕೆ ಕೇವಲ ೮೮೮-೮೯೦ ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಈಗ ಬರಗಾಲದ ಪರಿಸ್ಥಿತಿಯ ಹಿನ್ನಲೆಯಲ್ಲಿ ವಾಟರ್ ಮ್ಯಾನೇಜ್‌ಮೆಂಟ್‌ಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನ್ನು ಎರಡನೆಯದಾಗಿ ತಾಳೆ ಎಣ್ಣೆಯ ಬಗ್ಗೆ ಹೇಳುವುದಾದರೆ, ೧೦ವರ್ಷಗಳ ಹಿಂದೆ ಶಿವಮೊಗ್ಗ ಜಿಲ್ಲೆಯ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರಿಗೂ ಗೊತ್ತಿದೆ, ಇದಕ್ಕಾಗಿ ಬಹಳಷ್ಟು ಎನ್‌ಕರೇಜ್‌ಮೆಂಟ್ ಮಾಡಿದರು, ಈ ಸೀಡ್ ತೆಗೆಯುತ್ತಿದ್ದಂತೆ ೨೪ ಗಂಟೆಯೊಳಗೆ ಫ್ಯಾಕ್ಟರಿಗಳಿಗೆ ಇದು ಹೋಗದೇ ಇದ್ದರೆ, ಈ ಬೀಜವನ್ನು ತಾಳೆ ಎಣ್ಣೆಯಾಗಿ ಕನ್‌ವರ್ಟ್ ಮಾಡುವುದಕ್ಕಾಗುವುದಿಲ್ಲ. ಈಗ ಅಲ್ಲಿ ರೈತರು ತಾಳೆ ಮರಗಳನ್ನು ಕೀಳುವಂತಹ ಪರಿಸ್ಥಿತಿಗೆ ಬಂದಿದ್ದಾರೆ. ಇದಕ್ಕೆ ಕಾರಣ ಸರ್ಕಾರಗಳು ಒಂದು ಕಡೆ ಇದಕ್ಕೆ ಸಾಕಷ್ಟು ಒತ್ತನ್ನು ಕೊಟ್ಟರೂ ಕೂಡ ರೈತರು ಇದನ್ನು ೧೦-೧೫ ವರ್ಷಗಳಿಂದ ಇದನ್ನು ಬೆಳೆದರೂ, ಇವತ್ತು ಈ ರೈತರು ಈ ೧೦-೧೫ ವರ್ಷಗಳ ನಂತರ ಈ ಮರಗಳನ್ನು ಕೀಳಬೇಕೆಂದರೆ ಅವರುಗಳಿಗೆ ಆಗುವಂತಹ ನೋವನ್ನು

ನಾವು ಗ್ರಹಿಸಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಏನಾದರೂ ಯೋಜನೆಯನ್ನು ಮಾಡುವ ಬಗ್ಗೆ ಚಿಂತನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಸರ್ಕಾರದವರು ವಾಣಿಜ್ಯ ವರದಿಯನ್ನು ತಯಾರು ಮಾಡಿದ್ದೇವೆಂದು ಹೇಳಿದ್ದಾರೆ. ಇದರ ಬಗ್ಗೆ ತಾವು ಹೊರ ತಂದಿರುವ ಪುಸ್ತಕವನ್ನು ನಾನು ನೋಡಿಲ್ಲ. ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಅದನ್ನು ಜಾರಿ ಮಾಡಬೇಕೆಂದು ಹೇಳಲಿಚ್ಛಿಸುತ್ತೇನೆ. ಇನ್ನು ಈ ಸ್ವಯಂ ನಿವೃತ್ತಿ ಯೋಜನೆಯ ಬಗ್ಗೆ ಹೇಳುವುದಾದರೆ, ಇವತ್ತು ಎಂ.ಇ.ಐ ಅಂತಹ ಒಂದೊಂದು ಸಂಸ್ಥೆಯವರೂ ಸಹ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೆ ತಂದರು. ಇದು ಕೇವಲ ಇಂಡಸ್ಟ್ರೀಗಳಿಗೆ ಮಾತ್ರ ಅನ್ವಯವಾಗುವುದು ಬೇಡ. ಎಲ್ಲಾ ಸರ್ಕಾರದ ನೌಕರರಿಗೂ ಕೂಡ ಅನ್ವಯವಾಗುವಂತೆ ಇದನ್ನು ಜಾರಿ ಮಾಡಬೇಕು. ಈ ರೀತಿ ಮಾಡಿದ್ದೇ ಆದರೆ, ಸರ್ಕಾರಕ್ಕೆ ಬರುವ ರಿಸೋರ್ಸ್‌ಸ್‌ನ ಶೇ.೬೦ರಷ್ಟು ಸಂಬಳ, ಟಿಎ, ಡಿಎಗಳಿಗೆ ಹೋಗುವುದನ್ನು ನಿಲ್ಲಿಸಬೇಕೆಂದಾದರೆ ಈ ಸ್ವಯಂ ನಿವೃತ್ತಿಯನ್ನು ಜಾರಿಗೆ ತರಬೇಕು, ಇದಕ್ಕೆ ಹೆಚ್ಚು ಹಣವನ್ನು ಒದಗಿಸುವಂತಹ ಅಗತ್ಯವೂ ಇದೆ ಎನ್ನುವ ಮಾತನ್ನು ನಾನು ಈ ಸಮಯದಲ್ಲಿ ಹೇಳಲಿಚ್ಛಿಸುತ್ತೇನೆ. ಎನ್‌ಸಿಡಿಸಿಯಿಂದ ಮತ್ತು ಬೇರೆ ಬೇರೆ ಸೋರ್ಸ್‌ಗಳಿಂದ ಹಣ ಬಂದಾಗ ಈಗ ಷುಗರ್ ಫ್ಯಾಕ್ಟರಿಗೆ ಏನು ಮಾಡುತ್ತಾರೆ ಎಂದರೆ ನೇರವಾಗಿ ಅಪೆಕ್ಸ್ ಬ್ಯಾಂಕ್ ಅಕೌಂಟಿಗೆ ಹೋಗುತ್ತದೆ; ಬೇರೆಯದರಲ್ಲಿ ಬಂದಾಗ ಅದನ್ನು ತಿರುಗಿ ಮತ್ತೆ ಇಲ್ಲಿಗೆ ತಂದು ನಮ್ಮ ಆರ್ಥಿಕ ಇಲಾಖೆಯವರು ಇವತ್ತು ಆರು ತಿಂಗಳು, ಐದು ತಿಂಗಳು ಈ ತರಹ ಹಣ ಕೊಡುವುದು ಡಿಲೇ ಆಗುತ್ತದೆ. ಎನ್‌ಸಿಡಿಸಿ-ಯಿಂದ ಬರುವಂತಹ ಹಣ ಹೇಗೆ ನೇರವಾಗಿ ಅಪೆಕ್ಸ್ ಬ್ಯಾಂಕ್‌ಗೆ ಹೋಗುತ್ತದೆ, ಅದು ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳುವಂತಹ ತೀರ್ಮಾನ; ಅದನ್ನು ತೆಗೆದುಕೊಂಡು ಮೊದಲೇ ಅಂದಾಜನ್ನು ಒಪ್ಪಿರುತ್ತೀರಿ. ಅದು ಎಲ್ಲಾ ಅಂದಾಜನ್ನು ಒಪ್ಪಿ ಆದ ಮೇಲೆ ಮತ್ತೆ ಇಲ್ಲಿಗೆ ಬಂದು ನಾಲ್ಕು ತಿಂಗಳು, ಐದು ತಿಂಗಳು, ಆರು ತಿಂಗಳು ವಿಧಾನಸೌಧಕ್ಕೆ ಅಲೆದಾಡುವುದನ್ನು ಕಡಿಮೆ ಮಾಡುವುದಕ್ಕೋಸ್ಕರ ಆ ಹಣವನ್ನು ನೇರವಾಗಿ ಅಪೆಕ್ಸ್ ಬ್ಯಾಂಕಿಗೆ ಕೊಟ್ಟಿದ್ದೇ ಆದರೆ ಆ ಸಂಸ್ಥೆಗೆ ಅನುಕೂಲ ಆಗುತ್ತದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ನೋಡಬೇಕು ಹಾಗೂ ಪರಿಶೀಲನೆ ಮಾಡಬೇಕು ಎನ್ನುವುದನ್ನು ಕೂಡ ನಾನು ಹೇಳುತ್ತಿದ್ದೇನೆ. ಇವತ್ತು ಶೌಚಾಲಯಗಳನ್ನು ನಿರ್ಮಿಸುವ ವಿಚಾರ ಹೇಳಿದ್ದೀರಿ. ಇವತ್ತು ನಾವು ೫೦ ಭಾಗದಷ್ಟು ಮೇಡಮ್‌ಗಳನ್ನು ಹಳ್ಳಿಗಳಲ್ಲಿ ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಎಲ್ಲಾ ಹಳ್ಳಿಗಳಲ್ಲಿ ಶೌಚಾಲಯಗಳು ಇಲ್ಲದಿದ್ದರೆ ತೊಂದರೆ ಆಗುತ್ತದೆ. ಪ್ರೈಮರಿ ಸ್ಕೂಲಗಳಲ್ಲಿ ಕೂಡ ಈಗ ಶೌಚಾಲಯಗಳನ್ನು ನಿರ್ಮಾಣ ಮಾಡುವಂತಹ ಪರಿಸ್ಥಿತಿ ಬಂದಿದೆ. ಹೆಣ್ಣು ಮಕ್ಕಳು ಚೆಂಬು ಹಿಡಿದುಕೊಂಡು ಆಚೆ ಕಡೆಗೆ ಹೋಗುವ ಪರಿಸ್ಥಿತಿ ಇವತ್ತು ಕಡಿಮೆ ಆಗಬೇಕಾದರೆ ಶೌಚಾಲಯಗಳು ಆಗಬೇಕು. ಯಾವುದೋ ಊರಿನಲ್ಲಿ

ಹೋಗಿ ಟೀಚರ್ ಆಗಿ ಕೆಲಸ ಮಾಡುವಂತಹವರಿಗೆ ಇವತ್ತು ಈ ಶೌಚಾಲಯಗಳನ್ನು ಪ್ರೈಮರಿ ಸ್ಕೂಲ್‌ಗಳಲ್ಲಿ ಕೂಡ ಕಟ್ಟಬೇಕು ಎನ್ನುವುದನ್ನು ನಾನು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ. ಇವತ್ತು ಕ್ರೀಡೆಗೆ ಬಹಳಷ್ಟು ಪ್ರೋತ್ಸಾಹ ಇದೆ. ಆದರೆ ನಮ್ಮ ದೇಶದಲ್ಲಿ ಒಂದು ಕಂಚಿನ ಪ್ರಶಸ್ತಿ ಬಿಟ್ಟರೆ ಬೇರೆ ಪ್ರಶಸ್ತಿ ಸಿಗಲಿಲ್ಲ. ಅದೂ ಮಲ್ಲೇಶ್ವರಿ ಎಂಬುವರು ಕಂಚಿನ ಪದಕ ಪಡೆದುಕೊಂಡಿದ್ದಾರೆ. ಇವತ್ತು ಕೋಲಾರದಲ್ಲಿ ಇನ್‌ಡೋರ್ ಸ್ಟೇಡಿಯಂಗೆ ಸುಮಾರು ೬೬ ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಟ್ಟಿದ್ದಾರೆ. ಅದಕ್ಕೆ ಮ್ಯಾಚಿಂಗ್ ಗ್ರಾಂಟನ್ನು ಇವತ್ತು ನಮ್ಮ ರಾಜ್ಯ ಸರ್ಕಾರದಿಂದ ಕೊಡಬೇಕು ಎಂದು ಅವರು ಒಂದು ಕಂಡೀಷನ್ ಹಾಕಿ ಕಳುಹಿಸಿದ್ದಾರೆ. ನಾನು ಬರೀ ಕೋಲಾರದ ಉದಾಹರಣೆ ಏಕೆ ಕೊಟ್ಟೆ ಎಂದರೆ, ಅದು ನನಗೆ ಗೊತ್ತಿರುವುದರಿಂದ ಹೇಳಿದೆ. ಈ ತರಹ ರಾಜ್ಯದಲ್ಲಿ ಯಾವುದಾದರೂ ಕೇಂದ್ರ ಸರ್ಕಾರದವರು ಅನುದಾನ ಕೊಡುವಂತಹ ಪರಿಸ್ಥಿತಿಯಲ್ಲಿ ೫೦ ಭಾಗವನ್ನು ರಾಜ್ಯ ಸರ್ಕಾರದವರು ಭರಿಸಿಕೊಡಬೇಕು ಎನ್ನುವುದನ್ನು ನಾನು ಈ ಸಮಯದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮೊರಾರ್ಜಿ ದೇಸಾಯಿ ಸ್ಕೂಲ್ ಬಿಲ್ಡಿಂಗ್‌ಗಳಿಗೆ ಹಣವನ್ನು ಕೊಡುತ್ತಿದ್ದೀರಿ. ಇವತ್ತು ಸುಭಾಷ್‌ಚಂದ್ರಬೋಸ್ ಸ್ಕೂಲುಗಳನ್ನು ಪ್ರತಿ ಕ್ಷೇತ್ರಕ್ಕೂ ಒಂದೊಂದು ಸ್ಕೂಲನ್ನು ಸುಮಾರು ನಾಲ್ಕೈದು ವರ್ಷಗಳಿಂದ ಕೊಟ್ಟರು. ಇದುವರೆಗೂ ಕೂಡ ಆ ಸ್ಕೂಲಿನ ಕಟ್ಟಡ ಪೂರ್ತಿ ಆಗಿಲ್ಲ. ಹಿಂದೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ ಇದನ್ನು ನಾನೇ ಎತ್ತಿ ಹೇಳಿದ್ದೆ. ಪ್ರತಿ ಕ್ಷೇತ್ರದಲ್ಲಿ ಒಂದೊಂದು ಹೈಸ್ಕೂಲು ಕೊಟ್ಟಿದ್ದೀರಿ, ಅದು ಕಂಪ್ಲೀಟ್ ಆಗಿಲ್ಲ. ಸುಮಾರು ಈಗ ೧೦ ಲಕ್ಷ ರೂಪಾಯಿಗಳನ್ನೋ, ೧೧ ಲಕ್ಷ ರೂಪಾಯಿಗಳನ್ನೋ ಕೊಟ್ಟು, ಇನ್ನು ಕೇವಲ ೩-೪ ಲಕ್ಷ ರೂಪಾಯಿಗಳನ್ನು ಕೊಡುವುದರಲ್ಲಿ ಬಹಳಷ್ಟು ನಿಧಾನವಾಗಿ ಪ್ರತಿ ಕ್ಷೇತ್ರದಲ್ಲಿಯೂ ಹೈಸ್ಕೂಲಿನ ಕಟ್ಟಡವನ್ನು ಕಟ್ಟಲಿಕ್ಕೆ ನಿಧಾನ ಆಗುತ್ತಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಡಬೇಕು. ಈಗ್ಗೆ ನಾಲ್ಕು ವರ್ಷಗಳ ಹಿಂದೆಯಿಂದ ಕೂಡ ಗೋಡೆಗಳನ್ನು ಕಟ್ಟಿ ಮೇಲೆ ಛಾವಣಿ ಹಾಕಿ ಪೂರ್ತಿ ಮಾಡದೇ ನಿಲ್ಲಿಸಿದ್ದಾರೆ. ಇದಕ್ಕೆ ಯಾವ ತರಹ ಹಣವನ್ನು ಒದಗಿಸಬೇಕು ಎನ್ನುವುದನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳು ಚಿಂತಿಸಬೇಕು ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ರಾಜ್ಯದಲ್ಲಿ ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ಸಹಾಯಧನವಾಗಿ ೧೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಅವರಿಗೆ ಅದು ಏನೇನೂ ಸಾಲದು. ಅದರಲ್ಲಿ ಈ ಸಣ್ಣ ಪತ್ರಿಕೆಗಳಿಗೂ ಕೂಡ ಆದ್ಯತೆಯನ್ನು ಕೊಡಬೇಕಾಗುತ್ತದೆ. ಪಾಪ, ಅವರಿಗೆ ಕಂಪನಿಗಳವರು ಎಷ್ಟೆಷ್ಟು ಹಣ ಕೊಡುತ್ತಾರೋ ಗೊತ್ತಿಲ್ಲ. ಆದರೆ ಈ ಸಣ್ಣ ಪತ್ರಿಕೆಗಳನ್ನು ನಡೆಸುವಂಥವರಿಗಂತೂ ಇರತಕ್ಕಂಥ ಕಷ್ಟ ಅಷ್ಟಿಷ್ಟಲ್ಲ. ಇದಕ್ಕೂ ಕೂಡ ಹೆಚ್ಚಿನ ಹಣವನ್ನು ಒದಗಿಸಬೇಕು. ಇದಕ್ಕೂ ಕೂಡ ಕೊಡುತ್ತಿರುವ ಹಣ ಏನೇನೂ ಸಾಲದು. ಇದಕ್ಕೆ ಹಣ ಜಾಸ್ತಿ ಇಡಬೇಕು ಎಂದು

ನಾನು ತಮ್ಮನ್ನು ಕೋರುತ್ತೇನೆ. ಇದಕ್ಕೆ ಒಂದು ಕೋಟಿ ಹಣವನ್ನಾದರೂ ಇಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಕೇವಲ ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ನೀವು ಸಹಾಯಧನವಾಗಿ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಮಂಜೂರು ಮಾಡಿದ್ದೀರಿ. ಇದನ್ನು ಏತಕ್ಕೆ ಇಟ್ಟಿದ್ದೀರಿ? ಅಥವಾ ಸಂಕಷ್ಟದಲ್ಲಿ ಇರುವವರು ಏನಾದರೂ ಅರ್ಜಿ ಹಾಕಿಕೊಳ್ಳಬೇಕಾ? ಏನು ಎನ್ನುವುದನ್ನು ಕೂಡ ತಾವು ತಿಳಿಸಬೇಕು. ಈ ಹಣವನ್ನು ಹೆಚ್ಚಿಗೆ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಒತ್ತಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಹೊಸ ಕೆರೆಗಳ ನಿರ್ಮಾಣಕ್ಕೆ ನೀವು ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಅದನ್ನು ನೀವು ಬೇಗನೇ ಮಾಡಬೇಕು ಎನ್ನುವುದನ್ನು ಕೂಡ ಹೇಳುತ್ತೇನೆ. ಇವತ್ತು ವಿಧಾನಸಭಾ ಸದಸ್ಯರಿಗೆ ಗಣಕ ಯಂತ್ರಗಳನ್ನು ಒದಗಿಸಲು ೧೧೨ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಇದುವರೆಗೆ ಯಾವುದೇ ವಿಧಾನಸಭಾ ಸದಸ್ಯರಿಗೂ ಗಣಕ ಯಂತ್ರಗಳು ಬಂದಿಲ್ಲ. ನನಗಂತೂ ಬಂದಿಲ್ಲ.

ಅಧ್ಯಕ್ಷರು: ರಾಜ್ಯದಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರಿರುವುದರಿಂದ ಒಂದೆರಡು ತಿಂಗಳು ಸ್ವಲ್ಪ ಮುಂದಕ್ಕೆ ಹಾಕಿದ್ದೇವೆ. ನಾವು ಖಂಡಿತವಾಗಿ ಗಣಕ ಯಂತ್ರಗಳನ್ನು ಕೊಡುತ್ತೇವೆ.

ಶ್ರೀ ಕೆ.ಶ್ರೀನಿವಾಸ ಗೌಡ: ಕ್ಷಾಮ ಪರಿಸ್ಥಿತಿ ಬಂದಿದ್ದರೂ ಸಹ ಹಣವನ್ನು ಬಿಡುಗಡೆ ಮಾಡಿದ್ದೀರಲ್ಲಾ!

ಅಧ್ಯಕ್ಷ: ಅದಕ್ಕೆ ಹಣ ಬಿಡುಗಡೆ ಆಗಿಲ್ಲ, ಅಲ್ಲಿ ಸುಮ್ಮನೇ ತೋರಿಸಿದ್ದಾರೆ.

ಶ್ರೀ ಕೆ.ಶ್ರೀನಿವಾಸ ಗೌಡ: ಪುಟ ೬೩ರಲ್ಲಿ ವಿಧಾನಸಭಾ ಸದಸ್ಯರಿಗೆ ಗಣಕ ಯಂತ್ರಗಳನ್ನು ಒದಗಿಸಲು ೧೧೨ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು...

ಅಧ್ಯಕ್ಷರು: ಹಣ ಬಿಡುಗಡೆ ಆಗಿಲ್ಲ. ಪುಸ್ತಕದಲ್ಲಿ ತೋರಿಸಿದ್ದಾರೆ ಅಷ್ಟೆ. ಮುಂದೆ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಅಂದರೆ ಫೆಬ್ರವರಿಯಲ್ಲಿ ತಾನೇ....

ಶ್ರೀ ಕೆ.ಶ್ರೀನಿವಾಸಗೌಡ: ಅದನ್ನು ಹೇಳಿದ್ದೀರಿ; ಬೇಗನೇ ಕೊಡುವಂತಹ ಕೆಲಸವನ್ನು ಕೂಡ ಮಾಡಬೇಕೆಂದು ನಾನು ಹೇಳುತ್ತೇನೆ. ಹಳ್ಳಿಗಳಲ್ಲಿ ಎಲ್ಲಾದರೂ ಮನೆಗಳು ಸುಟ್ಟು ಹೋದರೆ, ಹುಲ್ಲು ಬಣವೆಗಳು ಸುಟ್ಟು ಹೋದರೆ ಅಂತಹವರಿಗೆ ಪರಿಹಾರ ಕೊಡಲು ತಹಶೀಲ್ದಾರ್‌ರವರಿಗೆ ಬರೀ ಐನೂರು ರೂಪಾಯಿಗಳನ್ನು ಕೊಡಲು ಮಾತ್ರ ಅಧಿಕಾರ ಇದೆ ಡಿಸಿ-ಗೆ ಇರುವುದು ಒಂದು ಸಾವಿರ ರೂಪಾಯಿಗಳನ್ನು ಕೊಡಲು ಮಾತ್ರ. ಒಂದು ಮನೆ ಕಟ್ಟಿ ಅವನ ಆಸ್ತಿಯೆಲ್ಲಾ

ಹಾಳಾಗಿದ್ದರೂ ಕೂಡ ಅವನಿಗೆ ಪರಿಹಾರ ಕೊಡಲು ಅಧಿಕಾರ ಇರುವುದು ತಹಶೀಲ್ದಾರ್‌ರವರಿಗೆ ೫೦೦ ರೂಪಾಯಿಗಳು ಡೆಪ್ಯುಟಿ ಕಮೀಷನರ್‌ರವರಿಗೆ ಒಂದು ಸಾವಿರ ರೂಪಾಯಿಗಳು! ಇದನ್ನು ನೀವು ವೈಜ್ಞಾನಿಕವಾಗಿ ಚಿಂತನೆ ಮಾಡಬೇಕಾಗುತ್ತದೆ. ಒಬ್ಬ ಬಡವನಿಗೆ ಹುಲ್ಲು ಮನೆ ಇದ್ದರೆ ಅದು ಸುಟ್ಟು ಹೋದಾಗ ಕೇವಲ ೫೦೦ ರೂಪಾಯಿಗಳನ್ನು ಕೊಟ್ಟರೆ ಆತ ಹೇಗೆ ಜೀವನ ಮಾಡಬೇಕು ಎನ್ನುವುದನ್ನೂ ಕೂಡ ಇದರಲ್ಲಿ ಯೋಚನೆ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ.

ಅಧ್ಯಕ್ಷರು: ಪ್ರತಿ ಒಂದು ಐಟಂ ಮೇಲೂ ಮಾತನಾಡುತ್ತಿದ್ದೀರಿ; ನೀವು ಮಾತನಾಡಕೂಡದು ಎಂದೇನಿಲ್ಲ ಆದರೆ ಸಮಯ ಸ್ವಲ್ಪ ಕಡಿಮೆ ಇದೆ ಎಂದು ಹೇಳಿದೆ ಅಷ್ಟೆ.

ಶ್ರೀ ಕೆ.ಶ್ರೀನಿವಾಸ ಗೌಡ: ಇನ್ನೂ ಎರಡು ವಿಷಯಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಜಯದೇವ ಹೃದ್ರೋಗ ಆಸ್ಪತ್ರೆಗೆ ನಾನು ಹೋಗಿದ್ದೇನೆ. ಮೊನ್ನೆ ಸಾಯಿಬಾಬ ಆಸ್ಪತ್ರೆಗೂ ಸಹ ಹೋಗುವಂತಹ ಅವಕಾಶ ನನಗೆ ಇತ್ತು. ಅಲ್ಲಿಗೆ ನಾನು ಹೋಗಿದ್ದೆ. ದೇವಲೋಕ ಎಲ್ಲಾದರೂ ಇದ್ದರೆ ನಾವು ದೇವರನ್ನು ನೋಡಿ ಕೇಳಿಕೊಳ್ಳುವುದಿಲ್ಲ; ಅಲ್ಲಿ ಸಾಯಿಬಾಬ ಆಸ್ಪತ್ರೆಗೆ ಹೋಗಿ ನೋಡಿದಾಗ ಹಾಗೆ ಅನ್ನಿಸುತ್ತದೆ. ನರಕ ಎಂದು ಎಲ್ಲಾದರೂ ಇದ್ದರೆ ಜಯದೇಶ ಆಸ್ಪತ್ರೆಗೆ ಬರಬೇಕು. ಇದು ಇರತಕ್ಕಂಥಹ ವ್ಯತ್ಯಾಸ. ಒಂದೇ ಊರಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಈ ಎರಡೂ ವ್ಯತ್ಯಾಸಗಳನ್ನು ನೋಡಿದರೆ ನಮಗೆ ಏನು ಅನ್ನಿಸುತ್ತದೆ ಎಂದರೆ, ದೇವಲೋಕ ಇಲ್ಲೇ ಒಂದಿದೆ, ನರಕವೂ ಇಲ್ಲೇ ಒಂದಿದೆ ಎಂದು ಅನ್ನಿಸುತ್ತದೆ. ಆ ಮಟ್ಟಕ್ಕೆ ತೆಗೆದುಕೊಂಡು ಹೋಗುವಂತಹ ಕೆಲಸ ಆಗಬಾರದು. ಏಕೆಂದರೆ ಬಡಬಗ್ಗರಿಗೆ ಅನುಕೂಲ ಆಗಬೇಕಾದರೆ ಜಯದೇವ ಆಸ್ಪತ್ರೆಯನ್ನು ಆ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು ಎನ್ನುವುದನ್ನು ಕೂಡ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೇಳುತ್ತೇನೆ. ಇವತ್ತು ಆವರ್ತನಿಧಿ ವಿಚಾರ ತೆಗೆದುಕೊಂಡರೆ, ಆವರ್ತ ನಿಧಿಗೆ ಹಿಂದೆ ೧೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದರು; ೪೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದರು. ಇವತ್ತು ಈ ನಿಧಿಗೆ ಎನ್.ಸಿ.ಡಿ.ಸಿ ಯಿಂದ ಹಣವನ್ನು ಕೊಡುತ್ತಾರೆ. ಇದನ್ನು ನೀವು ಸಾಲದ ರೂಪದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ನೀವು ಎನ್‌ಸಿಡಿಸಿಯಿಂದ ೪೦೦ ಕೋಟಿ ರೂಪಾಯಿಗಳನ್ನು ಬೇಕಾದರೂ ಕೊಡುವಷ್ಟು ಮುಂದಾಗುತ್ತಾರೆ. ಏಕೆ ಅದನ್ನು ನೀವು ತೆಗೆದುಕೊಳ್ಳಬಾರದು ಎನ್ನುವುದನ್ನು ಕೂಡ ನಾನು ಈ ಸಮಯದಲ್ಲಿ ಹೇಳುತ್ತೇನೆ. ಇನ್ನು ಬಹಳ ಮುಖ್ಯವಾದಂತಹ ವಿಷಯ ಎಂದರೆ ಈ ಓಎಪಿ ಪೆನ್‌ಷನ್ಸ್ ವಿಚಾರ.

ನನ್ನ ಕ್ಷೇತ್ರವಾದ ಕೋಲಾರದಲ್ಲಿ ನಿನ್ನೆ ಇದೊಂದು ಜಾಲ ಹುಟ್ಟಿಕೊಂಡಿದೆ; ಅದೇನೆಂದರೆ ಇನ್‌ಸ್ಯೂರೆನ್ಸ್ ಮಾಡುವುದು. ಈ ಓಎಪಿ ಪಾಪ ಬಡವರಿಗೆ ಬರುವುದು ೧೦೦ ರೂಪಾಯಿಗಳು. ಆ ನೂರು ರೂಪಾಯಿಗಳಲ್ಲಿ ಇನ್‌ಸ್ಯೂರೆನ್ಸ್ ಮಾಡಿ ಅವನ ಹಣ ಹೋಗದ ಹಾಗೆ ಸೈನ್ ಮಾಡಿಸಿಕೊಂಡು ಮಾಡುತ್ತಿರುವ ಇದೊಂದು ಜಾಲ ಆಗಿದೆ. ಇದು ನಿಲ್ಲಬೇಕಾಗುತ್ತದೆ. ಇವತ್ತು ಓಎಪಿಯನ್ನು ಕೋಲಾರದಲ್ಲಿ ನನ್ನ ಕ್ಷೇತ್ರದಲ್ಲಿ ಇನ್‌ಸ್ಯೂರೆನ್ಸ್ ಮಾಡಿದ್ದಾರೆ. ಇದು ಇನ್‌ಸ್ಯೂರೆನ್ಸ್ ಏಜೆಂಟ್‌ಗಳ ಕೆಲಸವೋ ಇನ್ನೊಂದೋ, ಮತ್ತೊಂದೋ ಆ ಬಗ್ಗೆ ನಾನು ಹೇಳುವುದಕ್ಕೆ ಇಚ್ಛಿಸುವುದಿಲ್ಲ. ಆದರೆ ಇದರ ಹಿನ್ನೆಲೆ ಏನು? ಇದರ ಹಿಂದೆ ಒಂದು ದೊಡ್ಡ ಜಾಲ ಇದೆ. ಪಾಪ ಬಡವರಿಗೆ ಬರುವಂತಹ ೧೦೦ ರೂಪಾಯಿಗಳಲ್ಲಿ ಅದರಲ್ಲಿ ೧೫ರೂಪಾಯಿ ಅಥವಾ ೨೦ ರೂಪಾಯಿ ಹೋಗುತ್ತದೆ. ಏಕೆಂದರೆ ಸರ್ಕಾರದಿಂದ ಪ್ರತಿ ತಿಂಗಳೂ ಬರುತ್ತದೆ. ಅಥವಾ ಎರಡು ತಿಂಗಳು, ಮೂರು ತಿಂಗಳಾದ ಮೇಲೆ ಬರುತ್ತದೆ. ಇದರ ಬಗ್ಗೆ ಸರ್ಕಾರಕ್ಕೆ ಇಷ್ಟ ಇದ್ದರೆ ಅವರಿಗೆ ಇನ್‌ಸ್ಯೂರೆನ್ಸ್ ಕಟ್ಟಬೇಕಾದರೆ ಸರ್ಕಾರದ ಹಣದಿಂದಲೇ ಕಟ್ಟಲಿ. ಅದನ್ನು ಬಿಟ್ಟು ಅವರನ್ನು ಪ್ರೈವೇಟ್ ಇನ್‌ಸ್ಯೂರೆನ್ಸ್‌ಗೆ ಹಾಕಿ ಆ ಬಡವರನ್ನು ಶೋಷಣೆ ಮಾಡುವಂತಹದನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ. ಮತ್ತೊಂದು ಈ ಎರಡು ಆವರ್ತ ನಿಧಿಗೆ ಹೆಚ್ಚಿಗೆ ಒತ್ತು ಕೊಡಬೇಕಾಗುತ್ತದೆ. ಇವತ್ತು ಇನ್‌ಪುಟ್ಸ್, ಔಟ್‌ಪುಟ್ಸ್‌ಗೂ ಕೂಡ ನಾವು ಮುಂದೆ ನಮ್ಮ ರಾಜ್ಯದಲ್ಲಿ ಹಣ ಕೊಡಬೇಕಾಗುತ್ತದೆ. ಎನ್‌ಸಿಡಿಸಿಯಿಂದ ಹಣವನ್ನು ತೆಗೆದುಕೊಂಡು, ಅವರು ಎಷ್ಟು ಬೇಕಾದರೂ ಹಣ ಕೊಡುತ್ತಾರೆ. ಅದಕ್ಕೆ ಒಂದು ಪೂರಕವಾದಂತಹ ಅಂದಾಜು ಪಟ್ಟಿಯನ್ನು ಕಳಿಸಿ ಅದನ್ನು ಮಾಡಿಸಬಹುದು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ): ಸಾರ್, ನಾನು ಮಾತನಾಡುವುದಿಲ್ಲ. ಅವರು ಶಾಲಾ ಕಟ್ಟಡದ ಬಗ್ಗೆ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಚಾರ ತರುತ್ತೇನೆ.

ಅಧ್ಯಕ್ಷರು: ಇದು ಜೀರೋ ಹವರ್ ಅಲ್ಲ.

ಶ್ರೀ ಬಿ.ಬಿ.ಶಿವಪ್ಪ: ನಾನು ಜೀರೋ ಹವರ್‌ನಲ್ಲಿ ಮಾತನಾಡುತ್ತಿಲ್ಲ. ಈ ಶಾಲಾ ಕಟ್ಟಡ ವಿಚಾರ ಬಂತಲ್ಲಾ; ಕೊಡಗು ಜಿಲ್ಲೆ ಕೊಡಲೀಪೇಟೆಯಲ್ಲಿ ಶಾಲಾ ಮಂಜೂರಾಗಿ ೧೪ ರೂಮುಗಳ ಕಟ್ಟಡವನ್ನು ಕಟ್ಟಿ ೨೪ ವರ್ಷಗಳಾಯಿತು. ೭ ಎಕರೆ ಜಾಗವನ್ನು ಸರ್ಕಾರ ಮಂಜೂರು ಮಾಡಿದೆ. ಆದರೆ ಇವತ್ತಿನವರೆಗೂ ಖಾತೆಯನ್ನು ಮಾಡಿಕೊಡಲಿಲ್ಲ. ಇವರು ಹೇಳುತ್ತಾರೆ, ಹಣ ಕೊಡಲಿಲ್ಲ ಜಾಗ ಕೊಟ್ಟರು ಎಂದು.

ಶಾಲಾ ಕಟ್ಟಡ ಕಟ್ಟ ಶಾಲೆ ನಡೆಯುತ್ತಿದೆ, ೨೪ ವರ್ಷಗಳಾದರೂ ಖಾತೆ ಆಗಲಿಲ್ಲ.

೧೧.೪೫ ಎ.ಎಂ

+ ಶ್ರೀ ವೈ.ಕೆ.ರಾಮಯ್ಯ (ಹುಲಿಯೂರು ದುರ್ಗ): ಸನ್ಮಾನ್ಯ ಅಧ್ಯಕ್ಷರೆ ಸರ್ಕಾರದವರು ಈ ಸದನದ ಮುಂದಿಟ್ಟಿರುವ ಪೂರಕ ಅಂದಾಜನ್ನು ನಾನು ಸ್ವಾಗತಿಸುತ್ತೇನೆ. ಪೂರಕ ಅಂದಾಜನ್ನು ತರುವಂತಹ ಪದ್ಧತಿ ಒಳ್ಳೆಯದೋ, ಕೆಟ್ಟದ್ದೋ ಎನ್ನುವ ವಿಚಾರಕ್ಕೆ ನಾನು ಹೋಗುವುದಿಲ್ಲ. ಅದು ಯಾವುದೇ ಪಕ್ಷಗಳಾಗಿರಲಿ, ರಾಷ್ಟ್ರ ರಾಜ್ಯ ಸರ್ಕಾರಗಳಿಗೂ ಇದೊಂದು ಅನಿವಾರ್ಯವಾದ ಪದ್ಧತಿಯನ್ನು ನಾವು ಅಳವಡಿಸಿಕೊಂಡು ಬಂದಿದ್ದೇವೆ. ಜೊತೆಗೆ, ಸಂವಿಧಾನದ ೨೦೫ನೇ ಆರ್ಟಿಕಲ್‌ನಲ್ಲಿ ಇದಕ್ಕೆ ಸಂವಿಧಾನಾತ್ಮಕವಾಗಿ ಸ್ಯಾಂಕ್ಷನ್ ಕೂಡ ಇದೆ ಎನ್ನುವ ಮಾತನ್ನು ಹೇಳುತ್ತೇನೆ. ಪೂರಕ ಅಂದಾಜು, ರೆಗ್ಯುಲರ್ ಅಂದಾಜು ಇವೆಲ್ಲವುಗಳನ್ನೂ ಒಟ್ಟಾರೆ ವೀಕ್ಷಿಸಿದಾಗ, ಇವೆಲ್ಲವುಗಳ ಪ್ರತಿಫಲ ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಅವಲಂಬನೆಯಾಗಿರುತ್ತದೆನ್ನುವ ಮಾತನ್ನು ಮಾತ್ರ ನಾನಿಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. ಬೇಡಿಕೆಗಳು, ಆಯವ್ಯಯ, ಪೂರಕ ಬೇಡಿಕೆಗಳೆಲ್ಲವೂ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನವಲಂಬಿಸಿರುತ್ತದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಏನಿದೆ ಎನ್ನುವ ವಿಷಯವನ್ನು ಪ್ರಸ್ತಾಪಿಸುತ್ತಾ, ನಾನು ಯಾರನ್ನೂ ದೂಷಿಸುವುದಕ್ಕೆ ಇಷ್ಟಪಡುತ್ತಿಲ್ಲ. ಈ ರಾಜ್ಯದಲ್ಲಿ ಅನೇಕ ಸಾರಿ ಆರ್ಥಿಕ ಮಂತ್ರಿಗಳು ನಮ್ಮ ಆರ್ಥಿಕ ಪರಿಸ್ಥಿತಿ ಸದೃಢವಾಗಿದೆ ಎಂದು ಒಂದು ಕಡೆ ಸ್ಟೇಟ್‌ಮೆಂಟ್ ಕೊಡುವುದು, ಮತ್ತೊಂದೆಡೆ ಸಂಬಳ ಕೊಡಲಾಗದಿರುವ ಪರಿಸ್ಥಿತಿಯನ್ನೂ ನಾನು ಗಮನಿಸಿದ್ದೇನೆ. ಈ ಹಂತದಲ್ಲಿ ಈ ವಿಷಯದಲ್ಲಿ ನಾನು ಸರ್ಕಾರವನ್ನು ಅದರಲ್ಲಿಯೂ ಆರ್ಥಿಕ ಇಲಾಖೆಯನ್ನು ಹೊಂದಿರುವ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ; ರಾಜ್ಯದ ಅಭಿವೃದ್ಧಿಗಾಗಿ ಹಣದ ಕೋಡಿಯನ್ನೇ ಹರಿಸಿದ್ದಾರೆನ್ನುವ ಕಾರಣಕ್ಕಲ್ಲ, ಆರ್ಥಿಕ ಪರಿಸ್ಥಿತಿಯ ನೈಜ ಚಿತ್ರವನ್ನು ಈ ಸದನದ ಮೂಲಕ ರಾಜ್ಯದ ಜನೆಗೆ ತೆರೆದಿಟ್ಟಿದ್ದಾರೆ. ಈ ರಾಜ್ಯದಲ್ಲಿ ಅಷ್ಟೇಕೆ ಈ ರಾಷ್ಟ್ರದಲ್ಲಿ ಆದಾಯ ಅನೇಕ ಮೂಲಗಳು ಬತ್ತಿ ಹೋಗುತ್ತಿದೆ. ನಮಗೆ ಬೇಕೋ ಬೇಡವೋ ಕೆಲವು ನೈಜ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಂಡು ಅದರ ಬಗ್ಗೆ ಚರ್ಚಿಸಿ, ಪರಿಹಾರವನ್ನು ಕಂಡುಕೊಳ್ಳದಿದ್ದರೆ, ಅತ್ಯಂತ ಕೆಟ್ಟ ಪರಿಸ್ಥಿತಿಯನ್ನು ಅನುಭವಿಸಬೇಕಾಗುತ್ತದೆ ಎನ್ನುವ ಮಾತನ್ನು ಮಾತ್ರ ನಾನು ಇಲ್ಲಿ ಹೇಳಲಿಷ್ಟಪಡುತ್ತಿದ್ದೇನೆ. ನಮ್ಮ ಆದಾಯದ ಮೂಲಗಳು ಎಷ್ಟು ಬತ್ತಿ ಹೋಗಿವೆಯೆಂದರೆ, ಬಹುತೇಕ ಅಭಿವೃದ್ಧಿ ಕೆಲಸಗಳನ್ನು ಸಾಲ ತಂದು ಮಾಡುವಂತಹ ಹಂತಕ್ಕೆ ನಾವು ತಲುಪಿದ್ದೇವೆ. ಎನ್‌ಡಿಡಿಬಿ, ವರ್ಲ್ಡ್‌ಬ್ಯಾಂಕ್, ಎಡಿಬಿ, ಹುಡ್ಕೋ, ನಬಾರ್ಡ್ ಸಾಲಗಳು, ಹೀಗೆ ಸಾಲ ತಂದೇ ಅಭಿವೃದ್ಧಿ ಮಾಡುವ ಪರಿಸ್ಥಿತಿಗೆ ಕೇವಲ

ಕರ್ನಾಟಕ ಸರ್ಕಾರ ಮಾತ್ರವಲ್ಲ, ರಾಷ್ಟ್ರವ್ಯಾಪಿಯಾಗಿ ಎಲ್ಲಾ ರಾಜ್ಯಗಳೂ ಈ ಪರಿಸ್ಥಿತಿಯನ್ನು ಕಾಣುವ ಹಂತಕ್ಕೆ ನಾವು ಬಂದಿದ್ದೇವೆ. ಅಂಥ ಪರಿಸ್ಥಿತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷ ಶ್ವೇತಪತ್ರವನ್ನು ಮಂಡಿಸುವ ಮೂಲಕ, ಈ ವರ್ಷ ಮಧ್ಯಂತರ ಆರ್ಥಿಕ ನೀತಿ ಯೋಜನೆಯನ್ನು ಈ ಸದನದ ಮುಂದೆ ಮಂಡಿಸುವ ಮೂಲಕ ಆರ್ಥಿಕ ಪರಿಸ್ಥಿತಿಯನ್ನು ಈ ರಾಜ್ಯದ ಜನತೆಯ ಗಮನಕ್ಕೆ ತಂದಿದ್ದಾರೆ. ಇದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಮಧ್ಯಂತರ ಆರ್ಥಿಕ ಪರಿಸ್ಥಿತಿ ಯೋಜನೆಯನ್ನು ಸಿದ್ದಪಡಿಸಿದ ಅಧಿಕಾರಿಗಳು ಸಾಕಷ್ಟು ಎಕ್ಸರ್‌ಸೈಜ್ ಮಾಡಿದ್ದಾರೆ. ಇದನ್ನು ನೋಡಿದರೆ ನಾನು ಅವರನ್ನೂ ಸಹ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಹಂತದಲ್ಲಿ ಪಕ್ಷಾತೀತವಾಗಿ ಒಂದು ಮಾತನ್ನು ಹೇಳಬಯಸುತ್ತೇನೆ, ಇಂಥ ಒಂದು ಪರಿಸ್ಥಿತಿ ರಾಷ್ಟ್ರಕ್ಕೆ, ರಾಜ್ಯಕ್ಕೆ ಬಂದಿರುವಾಗ, ಆ ಪರಿಸ್ಥಿತಿಯನ್ನು ನಿಭಾಯಿಸಲು, ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಯಾರಾದರೊಬ್ಬರು ಗಂಟೆ ಬಾರಿಸಬೇಕಾಗುತ್ತದೆ. ಎಲ್ಲಾ ಕ್ಷೇತ್ರದಲ್ಲಿಯೂ ಟ್ರೆಂಡ್ ಸೆಟ್ಟರ್ಸ್ ಇರುತ್ತಾರೆ. ಈ ಒಂದು ಪರಿಸ್ಥಿತಿ ನಿಭಾಯಿಸಲು, ಈ ಪರಿಸ್ಥಿತಿಗೆ ಪರಿಹಾರವನ್ನು ಕಂಡುಹಿಡಿಯಲು ರಾಜ್ಯ ಮಟ್ಟದಿಂದ ಪ್ರಾರಂಭಿಸಿ, ರಾಷ್ಟ್ರಮಟ್ಟದವರೆಗೆ, ಅವರು ಯಾವ ಪಕ್ಷದವರಿರಬಹುದು, ಯಾವ ರಾಜ್ಯದಲ್ಲಿಯೂ ಆಗಿರಬಹುದು, ಯಾವ ಹಂತದವರೂ ಆಗಿರಬಹುದು, ಆ ಟ್ರೆಂಡ್‌ಸೆಟ್ಟರ್ಸ್ ಯಾರಾದರೂ ಹುಟ್ಟಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ, ರಾಷ್ಟ್ರ, ರಾಜ್ಯ ಮುಂದೆ ಅತ್ಯಂತ ಆರ್ಥಿಕ ಸಂಕಷ್ಟದ ದಿನಗಳನ್ನು ನೋಡಬೇಕಾಗುತ್ತದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತಿದ್ದೇನೆ, ಅವರೇ ಈ ಕೆಲಸವನ್ನು ಮಾಡಲು ಸೂಕ್ತ, ಅದನ್ನು ಕರ್ನಾಟಕ ರಾಜ್ಯದಿಂದಲೇ ಪ್ರಾರಂಭವಾಗಲಿ ಎಂದು ಹೇಳುತ್ತೇನೆ. I must congratulate the Government again for the open exposure. ಆರ್ಥಿಕ ಪರಿಸ್ಥಿತಿ ಇಳಿಮುಖವಾಗಿ, ಅಸ್ಥಿರತೆ, ಬಿಕ್ಕಟ್ಟು ಅಡಿಸ್ತು ಇದೆ. ಇದನ್ನು ಅವರ ಪುಸ್ತಕದಲ್ಲಿಯೇ ಹೇಳಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ತೀವ್ರವಾಗಿ ಇಳಿಮುಖವಾಗಿರುವುದರಿಂದ, ಈ ಸವಾಲು ಇನ್ನಷ್ಟು ಕಠಿಣವಾಗಿದೆ ಎಂದು ಹೇಳಿದ್ದಾರೆ. ಮೂಲ ಸೌಲಭ್ಯಗಳನ್ನು ಸೃಷ್ಟಿಸಲು ದಕ್ಷ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಾಗಿದೆ. ಆರ್ಥಿಕ ಕುಸಿತದ ದಿನಗಳು ದೂರವೇನಿಲ್ಲವೆಂದಿದ್ದಾರೆ. This is where I am also rather distressed. ಈ ಶ್ವೇತಪತ್ರವು ರಾಜ್ಯದ ರಾಜಸ್ವ ಮೂಲಗಳು ಮತ್ತು ಅವುಗಳ ಸ್ಥಗಿತದ ಕಾರಣಗಳನ್ನು ಗುರುತಿಸುತ್ತದೆ. ಅಂದರೆ, ಆರ್ಥಿಕ ಪರಿಸ್ಥಿತಿ ಕೆಟ್ಟಿದೆ ಎನ್ನುವುದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಪ್ಯಾರಾ ಸಂಖ್ಯೆ:೩, ೭, ೮ ಮತ್ತು ೧೫ರಲ್ಲಿ ಅಕೌಂಟ್ಸ್ ಗ್ಲಾನ್ಸ್‌ನಲ್ಲಿ ಅವರು ಕರ್ನಾಟಕ ರಾಜ್ಯದ ಆರ್ಥಿಕ ಆರೋಗ್ಯ, ಆರ್ಥಿಕ ಪರಿಸ್ಥಿತಿ ಕುಸಿಯುತ್ತಿದೆ, ಇಳಿಮುಖವಾಗುತ್ತಿದೆ, ಅಸ್ಥಿರವಾಗಿದೆ, ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ರಾಮಯ್ಯನವರು ಆಡಳಿತ ಪಕ್ಷದಲ್ಲಿದ್ದುಕೊಂಡು, ಈ ಮಾತನ್ನು ಏಕೆ ಹೀಗೆ ಹೇಳುತ್ತಿದ್ದಾರೆಂದು ಯಾರಾದರೂ ಕೊಂಡಕು ಹುಡುಕಲು ಪ್ರಯತ್ನಿಸಿದರೆ, ನಾನು ಅವರಿಗೆ ಈ ವಿಷಯವನ್ನು ಹೇಳಲು ಇಷ್ಟಪಡುತ್ತೇನೆ. ಪ್ಯಾರಾ-೩ ರಲ್ಲಿ ಹೇಳಿರುವಂತೆ, ರಾಜ್ಯದಲ್ಲಿರುವ ಆರ್ಥಿಕ ಪರಿಸ್ಥಿತಿ ಇಳಿಮುಖತೆಗೆ ಕೇವಲ ಈ ಒಂದೆರಡು ವರ್ಷಗಳು ಕಾರಣವಲ್ಲ, ಹತ್ತಾರು ವರ್ಷಗಳ ಸಮಸ್ಯೆಗಳ ಒಟ್ಟಾರೆ ವೈಫಲ್ಯದಿಂದ ಇದಾಗಿದೆ. I think I am saved from the criticism. ರಾಜ್ಯದ ಆರ್ಥಿಕ ಪರಿಸ್ಥಿತಿ ಕೆಟ್ಟಿದೆ ಎಂದು ಹೇಳುವ ಧೈರ್ಯವನ್ನು ರಾಮಯ್ಯನವರು ಮಾಡುತ್ತಿದ್ದಾರೆಂದು ಯಾರಾದರೂ ಹೇಳಿದರೆ, ಪ್ರಿಕಾಷನರಿ ಮೆಷರ್ಸ್ ಎಂಬ ಮಾತನ್ನು ನಾನು ಹೇಳುತ್ತಿದ್ದೇನೆ. This is the cumulative effect of the bad financial management for many years. It is not today or yesterday, one year or two years. This is the cumulative effect of the bad financial management or indisciplined management of the finance in the State. ಆದುದರಿಂದ, ಈ ವಿಫಲತೆಗೆ, ಈ ಪರಿಸ್ಥಿತಿಗೆ ಕೇವಲ ಈ ಸರ್ಕಾರ, ಆ ಸರ್ಕಾರ, ಆ ಪಕ್ಷ, ಈ ಪಕ್ಷ ಕಾರಣ ಎಂದು ಹೇಳದೆ, ಸಪ್ಲಿಮೆಂಟರಿ ಬಡ್ಜೆಟ್ ಮೂಲಕ ನಾವು ಕೆಲವು ಸೇವೆಗಳಿಗಾಗಿ ಹಣವನ್ನು ಒದಗಿಸುವಂತಹ ಪರಿಸ್ಥಿತಿ ಏಕೆ ಬಂತು? ಇದೇ ಅದಕ್ಕೆಲ್ಲಾ ಮೂಲ ಕಾರಣವೆಂದು ಹೇಳಬಯಸುತ್ತೇನೆ. ಆದುದರಿಂದ, ಈ ಪರಿಸ್ಥಿತಿಗೆ ಒಂದು ಕಾರಣವಲ್ಲ. ಈ ಪರಿಸ್ಥಿತಿಗೆ ಕಾರಣವೇನು? ಎಲ್ಲಾ ಆರ್ಥಿಕ ಸಮೀಕ್ಷೆಯಿಂದ ಹಿಡಿದು, Accounts at Glance ಶ್ವೇತಪತ್ರ ಮತ್ತು ಮಿಡ್ ಟರ್ಮ್ ಪ್ಲಾನ್ ಓದಿದ ಮೇಲೆ, ಕ್ರೋಢೀಕರಿಸಿದ ಕಾರಣಗಳೆಂದರೆ, ಸಾರ್ವಜನಿಕ ಉದ್ಯಮಗಳಲ್ಲಿ ನಷ್ಟ ಅನುಭವಿಸುತ್ತಿರುವುದು ಬಹಳ ಪ್ರಮುಖ ಕಾರಣವೆಂಬುದು ತಿಳಿಯುತ್ತದೆ. ಹತ್ತಾರು ವರ್ಷಗಳಿಂದ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ನಷ್ಟವಾಗುತ್ತಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮನಸ್ಸು ಮಾಡಿದ್ದಾರೆ, ಸರ್ಕಾರ ಮನಸ್ಸು ಮಾಡಿದೆ. ಯಾರು ಏನೇ ಹೇಳಲಿ, ಈ ಸಾರ್ವಜನಿಕ ಉದ್ದಿಮೆಗಳಲ್ಲಿ ಆಗಿರತಕ್ಕಂಥ ನಷ್ಟದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ, ಈ ಬಿಳಿಯಾನೆಗಳನ್ನು ಸಾಕಲು, ಬಡ ಬೋರೇಗೌಡನ ಬೊಕ್ಕಸದ ಹಣವನ್ನು ಖರ್ಚು ಮಾಡದೆ ಅವುಗಳನ್ನು ಮುಚ್ಚಿ ಇಲ್ಲವಾದಲ್ಲಿ ಪ್ರೈವೆಟೈಜ್ ಮಾಡಿ. ಏನಾದರೂ ಮಾಡಿ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಪ್ಯಾರಾ ಸಂಖ್ಯೆ: ೯, ೧೦, ೧೧, ೧೨ ಮತ್ತು ೨೨ರಲ್ಲಿ ಹೇಳಿರುವಂತೆ, ಅಲ್ಲದೆ, ಪ್ಯಾರಾ ಸಂ.೮ರ ಅಕೌಂಟ್ಸ್ ಗ್ಲಾನ್ಸ್‌ನಲ್ಲಿ ಈ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಅಥವಾ ಸಾರ್ವಜನಿಕ ಉದ್ದಿಮೆಗಳಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹೊರೆಯಾಗಿದೆ, ನಷ್ಟವಾಗುತ್ತಿದೆ, ತೊಂದರೆಯಾಗುತ್ತಿದೆ, and to what extent these public undertaking are contributings for the ill-health of the financial position of the karnataka.

ಅದರೊಳಗೆ ಸ್ಪಷ್ಟವಾಗಿ ಗುರುತು ಮಾಡಿದ್ದಾರೆ. ಅದನ್ನು ನ್ಯಾಷನಲೈಜ್ ಮಾಡುವುದಕ್ಕೆ ಬದಲಾಗಿ ಪ್ರೈವೆಟೈಜ್ ಮಾಡಿ, ಅವುಗಳನ್ನು ಮುಚ್ಚಬೇಕೆಂದು ನಾನು ಸರ್ಕಾರದಲ್ಲಿ ವಿನಂತಿಸುತ್ತೇನೆ. ಆರ್ಥಿಕ ಬಿಕ್ಕಟ್ಟಿಗೆ ಪ್ರಮುಖ ಕಾರಣವೆಂದರೆ ನಮ್ಮ ಸಾಮಾಜಿಕ ಹೊಣೆಗಾರಿಕೆ. ಸಾಮಾಜಿಕ ಹೊಣೆಗಾರಿಕೆಯಿಂದಾಗಿ ಮೂಲಭೂತ ಸೌಲಭ್ಯಗಳನ್ನೊದಗಿಸುವುದಕ್ಕೆ ಹಣದ ಕೊರತೆಯ ಪರಿಸ್ಥಿತಿಗೆ ನಾವು ತಲುಪಬೇಕಾಗಿದೆ. ಬಸ್‌ಪಾಸ್ ಕೊಡುವುದರಿಂದ, ತಾಳಿ, ಸೀರೆ ಕೊಡುತ್ತೇವೆ, ಗಂಡು ಮಗು ಹುಟ್ಟಿದರೆ ಹಣ ಕೊಡುತ್ತೇವೆ ಎನ್ನುವವರೆಗೂ ಇದೆ. ಎ-ಗ್ರೂಪ್‌ನವರಿಗೆ ಹಿರಿಯ ಮಗಳಿಗೆ ಮದುವೆಯಾದರೆ ೫೦೦ರೂ.ನ ಚೆಕ್ ಕೊಡುತ್ತಾರೆ. ಎಲ್ಲಿಂದ ಬಂತು ಈ ಯೋಜನೆಗಳು? ಕಾಲುವೆಯ ಸಿಲ್ಟ್ ತೆಗೆಯುವುದಕ್ಕೆ ೫೦೦-೧೦೦೦ ಸಾವಿರ ರೂಪಾಯಿಗಳನ್ನು ಕೊಡಿ ಎಂದು ವರ್ಷವೆಲ್ಲಾ ಬಜೆಟ್ ಹುಡುಕಿದರೂ ಒಂದು ರೂಪಾಯಿ ಹಣವಿರುವುದಿಲ್ಲ. ಇಂಥ ಸಾಮಾಜಿಕ ಹೊಣೆಗಾರಿಕೆಯ ನೆಪದಲ್ಲಿ ಜನ ಮೆಚ್ಚುಗೆಯ ಕಾರ್ಯಕ್ರಮಗಳನ್ನು ಮಾಡುವಂತಹ, ಆಧುನಿಕ ರಾಜ್ಯಗಳ ತಪ್ಪು ನಿರ್ಧಾರದಿಂದಾಗಿ ಇವತ್ತು ಮೂಲಭೂತ ಸೌಲಭ್ಯಗಳನ್ನೊದಗಿಸುವಂತಹ ಯೋಜನೆಗೆ ಹಣದ ಕೊರತೆಯಾಗಿ ನಾವು ಈ ಬೇಡಿಕೆಗಳು, ಪೂರಕ ಬೇಡಿಕೆಗಳಿಗೆ ಕೈ ಹಾಕುವಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ I humbly pray this Government to cry a halt for the populist programmes and take up permanent development programmes. ನಮ್ಮ ಆರ್ಥಿಕ ಅನಾರೋಗ್ಯಕ್ಕೆ ಮುಂದಿನ ಕಾರಣ ಸೋರಿಕೆ. ಇದರ ಬಗ್ಗೆ ದಿನವೆಲ್ಲಾ ಹೇಳಬಹುದು, ಪುಸ್ತಕ ಬರೆಯಬಹುದು. ನನಗೆ ಪ್ರಾಮಾಣಿಕವಾಗಿ ಅನ್ನಿಸುವ ಹಾಗೆ, ಆಡಳಿತದಲ್ಲಿ ಎಲ್ಲಿ ಬಿಗಿ ಇರುವುದಿಲ್ಲವೋ, ಎಲ್ಲಿ ಸ್ಟ್ರಿಂಜೆಂಟ್ ಆಕ್ಷನ್ ಇರುವುದಿಲ್ಲವೋ ಅಂಥ ಕಡೆ ಸೋರಿಕೆ ಜಾಸ್ತಿಯಾಗುತ್ತದೆ. ಆಡಳಿತದಲ್ಲಿ ಬಿಗಿ ತಂದು, ಅಭಿವೃದ್ಧಿ ಕೆಲಸಗಳಿಗೆ ಒದಗಿಸುವಂತಹ ಹಣ ಸೋರಿಕೆಯಾಗದಂತೆ ನೋಡಿಕೊಳ್ಳಬೇಕೆಂದು ನಾನು ಸರ್ಕಾರವನ್ನು ವಿನಂತಿಸುತ್ತೇನೆ. ಜೊತೆಗೆ, ಮತ್ತೊಂದು ಕಾರಣವೆಂದರೆ, ಆಡಳಿತಾತ್ಮಕವಾದಂತಹ ವೈಫಲ್ಯಗಳು. ಮತ್ತೊಂದನ್ನು ಹೇಳಿದರೆ ನನಗೆ ಸ್ನೇಹಿತರು ಬೆಚ್ಚಿ ಬೀಳುವುದೂ ಬೇಡ ಅಥವಾ ಅಪಾರ್ಥ ಮಾಡಿಕೊಳ್ಳುವುದೂ ಬೇಡ. ಕೇಂದ್ರಸರ್ಕಾರದ ತೆರಿಗೆ ವಿತರಣೆಯ ನೀತಿಯಲ್ಲಾಗುತ್ತಿರುವ ತಾರತಮ್ಯ ಕೂಡ ಇದಕ್ಕೊಂದು ಕಾರಣವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸಮಯ ಕೊಟ್ಟರೆ, ಅದು ಯಾವ್ಯಾವ ರೀತಿ ಎನ್ನುವುದನ್ನು ಬೇಕಾದರೆ ಹೇಳುತ್ತೇನೆ. ಆದರೆ, ಈಗ ಆ ವಿಷಯಕ್ಕೆ ಹೋಗುವುದಿಲ್ಲ. ತೆರಿಗೆ ನೀತಿಯನ್ನು ವಿತರಿಸುವಾಗ ಕೇಂದ್ರಸರ್ಕಾರ ಮಾಡುತ್ತಿರುವ ಮಲತಾಯಿ ಧೋರಣೆ ಇದಕ್ಕೊಂದು ಕಾರಣವೆಂದು ಹೇಳಲು ಇಷ್ಟಪಡುತ್ತೇನೆ. ಇದಾದಮೇಲೆ ಮತ್ತೊಂದು ಪ್ರಮುಖ ಕಾರಣವೆಂದರೆ, ಯೋಜನೇತರ ವೆಚ್ಚಗಳು. This is most alarming. ಅಭಿವೃದ್ಧಿ

ಯೋಜನೆಗಳಿಗಿಂತ ಹೆಚ್ಚಾಗಿ ಅಭಿವೃದ್ಧಿಯೇತರ ಯೋಜನೆಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡುವಂತಹ ಪರಿಸ್ಥಿತಿ ನಮಗೆ ಒದಗಿ ಬಂದಿದೆ. ಅದನ್ನು ಪುಟ-೩ರಲ್ಲಿ ಬಹಳ ಸ್ಪಷ್ಟವಾಗಿ, ಹೇಗೆ ಈ ಯೋಜನೇತರ ವೆಚ್ಚಗಳು ನಮ್ಮ ಈ ಆರ್ಥಿಕ ಸಂಕಷ್ಟಕ್ಕೆ ಕಾರಣವಾಗಿದೆ ಎಂಬುದನ್ನು ಹೇಳಲಾಗಿದೆ. ಇದಾದಮೇಲೆ, ಅನುದಾನಗಳು, ನಾನು ಆಗಲೇ ಹೇಳಿದ್ದೇನೆ. ಸರ್ಕಾರದ ಬೊಕ್ಕಸದಿಂದ ಅನೇಕ ರೂಪದಲ್ಲಿ ಕೊಡುತ್ತಿರುವ ಅನುದಾನಗಳು ನಮಗೆ ಈ ಒಂದು ತೊಂದರೆಯನ್ನು ಕೊಡುತ್ತಿವೆ. ಇದರ ಜೊತೆಗೆ, ನಮ್ಮ ಸಾಲಗಳು, ನಾನು ಆಗಲೇ ಹೇಳಿದ್ದೇನೆ. ಎಲ್ಲಾ ಅಭಿವೃದ್ಧಿ ಕೆಲಸಗಳಿಗೂ ಸಾಲ ತಂದೇ ನಾವು ಮಾಡುತ್ತಿದ್ದೇವೆ. The worst part of it is that the 1/3 of the money that we are borrowing, paying the interest is being spent for the revenue expenditure. ಇದೇ ಪರಿಸ್ಥಿತಿ ಮುಂದುವರಿದರೆ, ಇದಕ್ಕಿಂತ ಕೆಟ್ಟ ಪರಿಸ್ಥಿತಿಯನ್ನು ಈ ರಾಜ್ಯ ಮುಂದೆ ಅನುಭವಿಸಬೇಕಾಗುತ್ತದೆ. ಹೊರಗಡೆಯಿಂದ ತಂದಂತಹ ಸಾಲದಲ್ಲಿ ೩ನೇ ೧ ಭಾಗವನ್ನು ಸಂಬಳ-ಸಾರಿಗೆ, ಟಿಎ:ಡಿಎ ಲೆಜಿಸ್ಲೇಟರ್ಸ್‌ಗೆ, ಅವರಿಗೆ ಟಿ.ವಿ. ಕೊಡಲು, ಅವರಿಗೆ ಟೇಬಲ್, ಕುರ್ಚಿಕೊಡಲು ಖರ್ಚು ಮಾಡುವ ಕೆಟ್ಟ ಪರಿಸ್ಥಿತಿಯು ಮುಂದುವರಿದರೆ This is the cumulative effect of the bad financial Management for many years. ಯಾರ ಬಗ್ಗೆಯೂ ಬೆರಳು ಮಾಡಿ ತೋರುವ ಹಾಗಿಲ್ಲ. I request the Government in this behalf. ನಾನು ಗಂಭೀರವಾಗಿ ಪ್ರಾರ್ಥಿಸುತ್ತಿದ್ದೇನೆ, ಇನ್ನು ಮುಂದಾದರೂ, ಕನಿಷ್ಟ ಪಕ್ಷ ಸಾಲ ತಂದ ಹಣದಲ್ಲಾದರೂ ರೆವಿನ್ಯೂ ಎಕ್ಸ್‌ಪೆಂಡಿಚರ್‌ನ ಯೋಜನೇತರ ವೆಚ್ಚಕ್ಕೆ ಉಪಯೋಗಿಸುವುದನ್ನು ಈವತ್ತಿನಿಂದಲೇ ನಿಲ್ಲಿಸಬೇಕು. ಇದಕ್ಕೆ ನನ್ನ ಎಲ್ಲಾ ಸ್ನೇಹಿತರೂ ಒಪ್ಪಿಕೊಳ್ಳಬಹುದು. ನಮ್ಮ ಹಣವನ್ನು ಯಾವುದಕ್ಕಾದರೂ ಕೊಡಲಿ. ಆದರೆ, ಹೊರಗಡೆಯಿಂದ, ನೀರಾವರಿಗೆ, ವಿದ್ಯುಚ್ಛಕ್ತಿಗೆ, ಆರೋಗ್ಯ, ಶಿಕ್ಷಣಕ್ಕೆಂದು ಮೂಲಭೂತ ಸೌಲಭ್ಯಗಳನ್ನು ರಾಜ್ಯದ ಜನತೆಗೆ ಒದಗಿಸುತ್ತೇವೆಂದು ಹೇಳಿ ತಂದ ಸಾಲದ ಹಣದಲ್ಲಿ ೩ನೇ ೧ಭಾಗವನ್ನು ರೆವಿನ್ಯೂ ಎಕ್ಸ್‌ಪೆಂಡಿಚರ್‌ಗೆ ಖರ್ಚು ಮಾಡುವುದು ಯಾವ ಪಕ್ಷದ, ರಾಜ್ಯ, ಕೇಂದ್ರ ಸರ್ಕಾರದ ಆರ್ಥಿಕ ಪರಿಸ್ಥಿತಿಗೆ ಉತ್ತಮವಾದದ್ದಲ್ಲ. ಈ ಒಂದು ಪದ್ಧತಿಯನ್ನು ಆದಷ್ಟು ಬೇಗ ನಿಲ್ಲಿಸುವಂತೆ ನಾನು ಪ್ರಾರ್ಥಿಸುತ್ತೇನೆ. ಈ ಸಾಲ ತರುವಾಗ ಕೂಡ, ಕೆಬಿಜೆಎಲ್‌ಎನ್‌ಗೆ ನಾವು ತರುವ ಸಾಲವಿರಲಿ, ಕೆಎನ್‌ಎನ್‌ಎಲ್‌ಗೆ ತಂದ ಸಾಲವಿರಲಿ, ಅದಕ್ಕೆಲ್ಲಾ ನಾವು ಕೊಡುತ್ತಿರುವ ಬಡ್ಡಿದರ ಜಾಸ್ತಿ ಇದೆ. ಇನ್ನು ಮುಂದೆ, ಅವರೇ ಒಪ್ಪಿಕೊಂಡ ಹಾಗೆ, ಅಲ್ಪ ದರದಲ್ಲಿ ಬಡ್ಡಿಗೆ ಸಿಗುವಂತಹ ಸಾಲಗಳನ್ನು ತರಲು ಪ್ರಯತ್ನಿಸಬೇಕು. ಈಗ ಬಡ್ಡಿದರ ಕಡಿಮೆಯಾಗಿದೆ. ಈ ಕಡೆಗೆ ಸರ್ಕಾರ ಗಂಭೀರವಾಗಿ ಯೋಚಿಸಬೇಕೆಂದು ನಾನು ವಿನಂತಿಸುತ್ತೇನೆ. ರಾಜ್ಯದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎನ್ನುವ ಸಂಸ್ಥೆ ಇದೆ. ಆ ಸಂಸ್ಥೆಯಲ್ಲಿ ೧೨

ಕೋಟಿ ರೂಪಾಯಿಗಳ ವೆಚ್ಚದಲ್ಲಿ ಗೊಬ್ಬರವನ್ನು ಕೊಂಡುಕೊಳ್ಳಬೇಕೆಂದು ತೀರ್ಮಾನಿಸಿದರು. ಮೆ.ಭವಾನಿ ಎಂಬ ಕಂಪನಿಯಿಂದ ೧೨ ಕೋಟಿ ರೂಪಾಯಿಗಳ ಗೊಬ್ಬರ ಕೊಳ್ಳಲು ವ್ಯವಹರಿಸಿದರು. ಆ ೧೨ ಕೋಟಿ ರೂಪಾಯಿಗಳನ್ನು ಬ್ಯಾಂಕಿಗೆ ಕಟ್ಟುತ್ತಾರೆ. ಆದರೆ, ಆ ಹಂತದಲ್ಲಿ ಯಾರೋ ಪುಣ್ಯಾತ್ಮರು ಇಂಟರವೀನ್ ಆಗಿ, ಆ ಹಣವನ್ನು ಸದ್ಯಕ್ಕೆ ಮೆ.ಭವಾನಿ ಕಂಪನಿಗೆ ಟ್ರಾನ್ಸ್‌ಫರ್ ಆಗದ ಹಾಗೆ ತಡೆಯುತ್ತಾರೆ. ಅದು ಏನೋ ನಿಜ. ಆದರೆ ಬ್ಯಾಂಕಿನವರು ೧೭ ಲಕ್ಷ ರೂಪಾಯಿಗಳ ಫೀಸ್ ಅನ್ನು ಇವರ ಹತ್ತಿರ ವಸೂಲು ಮಾಡಿಕೊಂಡಿದ್ದಾರೆ. ಮೆ.ಭವಾನಿ ಎನ್ನುವ ಕಂಪನಿಯೇ ಇಲ್ಲ, ಅಲ್ಲಿ ಅಧಿಕಾರಿ ಇಲ್ಲ, ಅದಕ್ಕೆ ಅಡ್ರೆಸ್ ಇಲ್ಲ, ಅದಕ್ಕೆ ಫೋನ್ ಇಲ್ಲ. It is not in existence at all. I would like to know as to how the Government kept quiet for such a long time when such a transaction was taken place by the Managing Director of the Agro Industries Coporation. It is fictitious. ಅಸ್ತಿತ್ವದಲ್ಲಿಲ್ಲದ ಸಂಸ್ಥೆಗೆ ೧೨ ಕೋಟಿ ರೂಪಾಯಿಗಳನ್ನು ಕೊಟ್ಟರು. ಆ ೧೨ ಕೋಟಿ ರೂಪಾಯಿಗಳು ವಾಪಸ್ಸು ಬಂತು. ಆದರೆ, ಬೊಕ್ಕಸಕ್ಕೆ ೧೭ ಲಕ್ಷ ರೂಪಾಯಿಗಳ ನಷ್ಟವಾಗಿದೆ. ಈ ಅವ್ಯವಹಾರವನ್ನು ಪತ್ತೆಹಚ್ಚಲು ಮೆ.ಭವಾನಿ ಎನ್ನುವ ಕಂಪನಿಯ ಮೇಲೆ ಪೋಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಪೋಲೀಸರು ರಿಪೋರ್ಟ್ ಹಾಕುತ್ತಾರೆ. there is no company at all in existence ಎಂದು. ನಾನು ನೇರವಾಗಿ ಒಂದು ಪ್ರಶ್ನೆ ಕೇಳಲಿಚ್ಛಿಸುತ್ತೇನೆ, ಯಾರ್‍ಯಾರು ಆ ಇಲಾಖೆಯ ಅಧಿಕಾರಿಗಳಿದ್ದರು ಎನ್ನುವ ಪಟ್ಟಿ ಇದೆ. ಶ್ರೀ ಸಂಜಯ್‌ದಾಸ್‌ಗುಪ್ತಾ ಎನ್ನುವ ಐ.ಎ.ಎಸ್. ಅಧಿಕಾರಿಯಿಂದ ಹಿಡಿದು, ಅನೇಕ ಜನ ಅಧಿಕಾರಿಗಳು ಆ ದುರ್ವ್ಯವಹಾರದಲ್ಲಿ ಭಾಗಸ್ಥರಾಗಿದ್ದಾರೆ. ಇವತ್ತಿನವರೆಗೂ ಸಂಬಂಧಪಟ್ಟ ಅಧಿಕಾರಿ ಮೇಲೆ ಪೋಲೀಸರಿಗೆ ದೂರು ಕೊಡದಿರಲು ಕಾರಣವೇನು? ಇದು ಬಹಳ ಸ್ವಾರಸ್ಯಕರವಾಗಿದೆ. ಈ ರಾಷ್ಟದಲ್ಲಿ ಒಬ್ಬ ಮಾಜಿ ಪ್ರಧಾನ ಮಂತ್ರಿ ಅಥವಾ ರಾಜ್ಯ ಮಾಜಿ ಮುಖ್ಯಮಂತ್ರಿಯವರನ್ನು ಇವತ್ತಿನ ದಿವಸ ಕಟಕಟೆಯಲ್ಲಿ ನಿಲ್ಲಿಸುತ್ತಾರೆ. ಆದರೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಕಟಕಟೆಯ ಮೇಲೆ ನಿಲ್ಲಿಸದೇ ಇರುವುದಕ್ಕೆ ಎಷ್ಟು ಜನರ ರಕ್ಷಣೆ ಈ ದೇಶದಲ್ಲಿದೆ? What prevented this Government from filling criminal complaint against these people? ಇವತ್ತಿನವರೆಗೆ ಇದನ್ನು ಮಾಡಿಲ್ಲ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದಿಂದ ನೇರವಾದಂಥ ಉತ್ತರವನ್ನು ಬಯಸುತ್ತೇನೆ. ಇದು ಯಾವುದೇ ಸರ್ಕಾರಕ್ಕೆ ತರವಲ್ಲ. ''ತರವಲ್ಲ ಮಗಳೇ ನಿನಗಿದು ತರವಲ್ಲ'' ಎನ್ನುವ ಹಾಗೆ ಇದು ಯಾವ ಸರ್ಕಾರಕ್ಕೂ ಕೂಡ ಗೌರವವನ್ನು ತಂದುಕೊಂಡತಕ್ಕಂಥ ವಿಷಯವಲ್ಲ. ಈ ಹಂತದಲ್ಲಿ ಈ ವಿಷಯವನ್ನು ಗಂಭೀರವಾಗಿ ಕೈಗೆತ್ತಿಕೊಂಡು ಯಾರ್‍ಯಾರು ಈ ದುರ್ವ್ಯವಹಾರದಲ್ಲಿ ಭಾಗಿಯಾಗಿದ್ದು ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಿದ್ದಾರೆ

ಎಂಬುದು ತಿಳಿಯಬೇಕು. ಇವರು ಐ.ಎ.ಎಸ್. ಅಥವಾ ಕೆ.ಎ.ಎಸ್., ಐ.ಎಫ್.ಸಿ ಆಗಿರಲಿ ಅಥವಾ ಯಾರಿಗಾದರೂ ಅಳಿಯನಾಗಿರಲಿ ಅಥವಾ ಮಗನಾಗಿರಲಿ I request the Government to show the courage to take action against these people. ವಿಷಯ ಸಮಿತಿಯಲ್ಲಿ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆ ಸಂದರ್ಭದಲ್ಲಿ ನಾನೇನೂ ತಪ್ಪು ಮಾತನಾಡಿಲ್ಲ. ಆದರೆ, ಸಂಬಂಧಪಟ್ಟ ಅಧಿಕಾರಿಗಳ ಹೆಸರು ಕೈಬಿಟ್ಟು ಹೋಗಿದೆ. ಇದರಹಿನ್ನಲೆ ಏನು ಎಂಬುದು ನನಗಂತೂ ಗೊತ್ತಿಲ್ಲ. ಈತನಿಗೆ ಯಾರು ರಕ್ಷಣೆ ಕೊಡುತ್ತಿದ್ದಾರೆಯೋ ಅದೂ ಸಹ ನನಗೆ ಗೊತ್ತಿಲ್ಲ. ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿಯ ದುಸ್ಥಿತಿಗೆ, ಇಳಿಮುಖಕ್ಕೆ ಮತ್ತು ಬಿಕ್ಕಟಿಗೆ ಸೋರಿಕೆ ಅತಿ ಮುಖ್ಯವಾದಂಥ ಒಂದು ಕಾರಣವಾಗಿದೆ. ಇದಕ್ಕೆ ಸಂಬಧಪಟ್ಟಂತೆ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತಂದಿದ್ದೇನೆ. ಇದೇ ರೀತಿಯಾದಂಥ ೧೦೮ ಪ್ರಕರಣಗಳು ನಮ್ಮಲ್ಲಿ ಸಿಗುತ್ತವೆ. ಆದ್ದರಿಂದ ಈ ಸೋರುವಿಕೆಯನ್ನು ದಯಮಾಡಿ ನಿಲ್ಲಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ಕೆಟ್ಟ ಪರಿಸ್ಥಿತಿಗೆ ಕಾರಣಗಳನ್ನು ಮತ್ತು ಪರಿಹಾರವನ್ನು ಸೂಚಿಸುತ್ತಾ ಕುಳಿತರೆ, ಇದು ಕೇವಲ ವೇದಿಕೆಯ ಭಾಷಣವಾಗುತ್ತದೆಯೇ ಹೊರತು ಇದರ ಬಗ್ಗೆ ಗಂಭೀರವಾದಂಥ ಚಿಂತನೆಯಾಗುವುದಿಲ್ಲ. ಅದಕ್ಕಾಗಿ ನನ್ನ ಅಭಿಪ್ರಾಯದ ಪ್ರಕಾರ ಮತ್ತು ಸರ್ಕಾರವೇ ಹೊರಡಿಸತಕ್ಕಂಥ ಶ್ವೇತಪತ್ರ ಮತ್ತು ಆರ್ಥಿಕ ನೀತಿಯ ಪ್ರಕಾರ ವಸತಿ ವೆಚ್ಚದ ಮೇಲೆ ಕರ ವಸೂಲಾತಿ ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ. ಆದ್ದರಿಂದ ಕರ ವಸೂಲು ಮಾಡತಕ್ಕಂಥ ಪ್ರಯತ್ನವನ್ನು ಮಾಡಬೇಕು. ಹಾಗೆಯೇ ಯೋಜನಾ ವೆಚ್ಚವನ್ನು ಹೆಚ್ಚು ಮಾಡಬೇಕು. ತೆರಿಗೆಯೇತರ ರಾಜಸ್ವವನ್ನು ಜಾಸ್ತಿ ಮಾಡಿಕೊಳ್ಳಬೇಕಾಗುತ್ತದೆ. ಇನ್ನು ಸಂಬಳ ಸಾರಿಗೆಗಳು ಬಹುಶಃ ನಮ್ಮ ದೊಡ್ಡ ತಲೆನೋವಿಗೆ ಹೆಚ್ಚಿನ ಮೂಲ ಕಾರಣವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಎರಡು ಪರ್ಸೆಂಟ್ ಕಟ್ ಮಾಡಬೇಕೆಂದು ಕೇಂದ್ರಸರ್ಕಾರ ಒಂದು ಒಳ್ಳೆಯ ತೀರ್ಮಾನವನ್ನು ಮೊನ್ನೆದಿವಸ ತೆಗೆದುಕೊಂಡಿದೆ. ಆದ್ದರಿಂದ ರಾಜ್ಯ ಸರ್ಕಾರ ಕೂಡ ಸಂಬಳ ಬಾಬ್ತುಗಳಲ್ಲಿ ಆಗತಕ್ಕಂಥ ವೆಚ್ಚವನ್ನು ಕಡಿಮೆ ಮಾಡಿಕೊಳ್ಳಬೇಕು. ಇವತ್ತಿನ ದಿವಸ ಸಂಬಳ ಸಾರಿಗೆ ವೆಚ್ಚಕ್ಕೆ ಕಾರಣಕರ್ತರಾಗಿರತಕ್ಕಂಥ ನೌಕರರ ಸಂಖ್ಯೆಯನ್ನು ನಾವು ಕಡಿಮೆ ಮಾಡತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಈಗಾಗಲೇ ಹೇಳಿದ ಪ್ರಕಾರ ಮತ್ತೊಂದು ಪರಿಹಾರ ಏನೆಂದರೆ, ಅಲ್ಪ ವೆಚ್ಚದ ಸಾಲವನ್ನು ತರುವಂಥ ಪ್ರಯತ್ನವನ್ನು ಸರ್ಕಾರದವರು ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಮಾಹಿತಿಗಳು ನನ್ನ ಹತ್ತಿರ ಇದೆ. ಆದರೆ ಇವೆಲ್ಲವನ್ನೂ ಕೂಡ ವಿಸ್ತಾರವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಅಲ್ಪ ವೆಚ್ಚದ ಸಾಲವನ್ನು ತೆಗೆದುಕೊಳ್ಳುವುದಕ್ಕೆ ರಾಜ್ಯಸರ್ಕಾರ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಾರ್ವಜನಿಕ ವೆಚ್ಚದ ಕಡಿತದ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಜಲ ಸಂವರ್ಧನೆ ಸಂಘಟನೆ ಮಾಡತಕ್ಕಂತ ಎಂ.ಡಿ.ಯವರು ೮೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ತಮ್ಮ ಛೇಂಬರ್ ಶೃಂಗಾರ ಮಾಡಿಕೊಂಡಿದ್ದಾರೆ. ಇದು ನಿಜವೋ ಅಥವಾ ಸುಳ್ಳೋ ಎಂಬುದನ್ನು ಪರಿಶೀಲನೆ ಮಾಡಬೇಕು. ಅಲ್ಲಿ ಯಾರು ಎಂ.ಡಿಯಾಗಿದ್ದಾರೆಂಬುದು ನನಗೆ ಗೊತ್ತಿಲ್ಲ. ಆದರೆ ಅದು ನಿಜವೇ ಆಗಿದ್ದರೆ, ಇದು ಸರಿಯಲ್ಲ ಎನ್ನತಕ್ಕಂಥಾದ್ದು ನನ್ನ ಭಾವನೆಯಾಗಿದೆ. ಇವತ್ತಿನ ದಿವಸ ಜಲ ಸಂವರ್ಧನೆಯನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಎಲ್ಲಿಂದಲೋ ಸಾಲ ಮಾಡಿಕೊಂಡು ಹಣವನ್ನು ತಂದಿರುತ್ತೇವೆ. ಆದರೆ ಇವರು ೮೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ತಮ್ಮ ಛೇಂಬರನ್ನು ಅಲಂಕಾರ ಮಾಡುವುದಕ್ಕೆ ಈ ಹಣವನ್ನು ಉಪಯೋಗಿಸುವಂಥ ಪಾಪದ ಕೆಲಸ ಬೇರೊಂದು ಇಲ್ಲ. ಇವತ್ತಿನ ದಿವಸ ನಮಗೆ ಎಲ್.ಎಚ್.ನಲ್ಲಿ ಕೊಡತಕ್ಕಂಥ ಸೌಲಭ್ಯಗಳನ್ನು ಮತ್ತು ಅಧಿಕಾರಿಗಳಿಗೆ ಕೊಡತಕ್ಕಂಥ ಸೌಲಭ್ಯಗಳನ್ನು ಕಡಿತ ಮಾಡಬೇಕಾಗುತ್ತದೆ. ಇದರಿಂದ ಸಾಕಷ್ಟು ಸಾರ್ವಜನಿಕ ವೆಚ್ಚ ಕಡಿಮೆಯಾಗುತ್ತದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಸರ್ಕಾರಿ ವಾಹನಗಳು ಪ್ರಪಂಚದಲ್ಲಿರತಕ್ಕಂಥ ಯಾವುದೇ ರಾಜ್ಯಗಳಲ್ಲಿಯೂ ಕೂಡ ಇಲ್ಲ. ಬೆಳಿಗ್ಗೆಯಿಂದ ಸಂಜೆಯವರೆಗೆ ಹಳ್ಳಿಗಳ ಕಡೆಗೆ ಈ ಸರ್ಕಾರಿ ವಾಹನಗಳು ಎಷ್ಟು ಬರುತ್ತವೆ ಎನ್ನತಕ್ಕಂಥಾದ್ದನ್ನು ನೋಡಿದರೆ ಇವುಗಳ ಲೆಕ್ಕ ಸಿಗುತ್ತದೆ. ಹೆಚ್ಚಿನ ಸಮಯ ಇಲ್ಲದೇ ಇರುವುದರಿಂದ ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಸಾರ್ವಜನಿಕ ವೆಚ್ಚದ ಕಡತವನ್ನು ಕಡಿಮೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಈ ಸಹಾಯಧನ ಕೊಡುವಂಥಾದ್ದನ್ನು ಕೂಡ ಸ್ವಲ್ಪ ಕಡಿಮೆ ಮಾಡಬೇಕು. ಇದರ ಬಗ್ಗೆಯೂ ಕೂಡ ಸಾಕಷ್ಟು ಹೇಳುವುದಿದೆ. ಆದರೆ ಕಾಲಾವಕಾಶ ಇಲ್ಲ. ಇನ್ನು ವಿದ್ಯುತ್‌ಗೆ ಸಂಬಂಧಪಟ್ಟಂತೆ ಮೂಲಭೂತವಾದಂಥ ಪ್ರಶ್ನೆ ನಮ್ಮನ್ನೆಲ್ಲಾ ಕಾಡುತ್ತದೆ. ಇವತ್ತಿನ ದಿವಸ ವಿದ್ಯುತ್‌ಗೆ, ನೀರಾವರಿಗೆ ಮತ್ತು ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಗಳಿಗೆ ಹೆಚ್ಚಿನ ಹಣವನ್ನು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೋಸ್ಕರ ಖರ್ಚು ಮಾಡುತ್ತಿದ್ದೇವೆ. It is true that we are spending major portion of the plan amount to these schemes. ಈ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುತ್ತಿದ್ದರೂ ಕೂಡ ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತಿಲ್ಲ. ಬಹುಶಃ ಎಲ್ಲಾ ಆಡಳಿತ ಪಕ್ಷದವರೂ ಕೂಡ ಕೆಲವು ಅನಿವಾರ್ಯತೆಗಳಿಂದ ಇದನ್ನು ವಸೂಲ್ಮಾಡುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಇನ್ನು ತತ್ಕಾಲ್ ಯೋಜನೆಯನ್ನು ಮೊನ್ನೆ ದಿವಸ ಸನ್ಮಾನ್ಯ ಮುಖ್ಯಮಂತ್ರಿಯವರು ವಿಧಿ ಇಲ್ಲದೇ ಇದನ್ನು ರದ್ದು ಮಾಡಿದ್ದಾರೆಂದು ನನ್ನ ಭಾವನೆಯಾಗಿದೆ. ಡಿಸಿಪ್ಲಿನ್ ತರಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ಆಸೆ ಇದೆ. ಆದರೆ, ವಿಧಿ ಇಲ್ಲದೇ ಸದರಿ ಯೋಜನೆಯನ್ನು ರದ್ದು ಮಾಡಿದ್ದಾರೆ. ಇವತ್ತಿನ

ದಿವಸ ನೀರಾವರಿಗೆ ಎಷ್ಟೇ ಹಾಕಿದರೂ ಕೂಡ ಏನೂ ಬರುವುದಿಲ್ಲವೆಂದು ತಾವು ಹೇಳಿದ್ದೀರಿ. ಆದ್ದರಿಂದ ರಸ್ತೆ ಮಾಡುವುದಕ್ಕೆ ಹಣ ತೊಡಗಿಸಿ. ''ಏಕೆಂದರೆ, ರಸ್ತೆಯ ಮೇಲೆ ಓಡಾಡತಕ್ಕಂಥ ಬಸ್ಸು ಮತ್ತು ಕಾರು ಹಾಗೂ ಮೋಟಾರ್ ಸೈಕಲ್ ಇಟ್ಟುಕೊಂಡಿರತಕ್ಕಂಥ ಶ್ರೀಮಂತರಿಗೆ ಮೊದಲು ಕೊಡಿ, ಅನಂತರ ನೀರಾವರಿಗೆ ಮಾಡಿ ಎಂದು ಮೊನ್ನೆದಿವಸ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಹೇಳಿದ್ದೇನೆ. ಎಲ್ಲಾ ಎಕ್ಸ್‌ಪೆರಿಮೆಂಟ್‌ನ್ನು ಇವತ್ತಿನ ದಿವಸ ರೈತರ ಮೇಲೆ ಏತಕ್ಕೆ ಮಾಡುತ್ತಿದ್ದೀರಿ? ವಂತಿಗೆ ಹಾಕತಕ್ಕಂಥಾದ್ದನ್ನು ನಾನು ಸ್ವಾಗತಿಸುತ್ತೇನೆ. ಇದೇ ಸಂದರ್ಭದಲ್ಲಿ ಐಶ್ವರ್ಯವಂತರು ಮತ್ತು ಅನುಕೂಲಸ್ಥರು ಉಪಯೋಗಿಸುವಂಥ ರಸ್ತೆಯ ಮೇಲೂ ಕೂಡ ಕರವನ್ನು ಹಾಕಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಆಸ್ಪತ್ರೆಯಲ್ಲಿಯೂ ಕೂಡ ಕರವನ್ನು ವಸೂಲ್ಮಾಡಬೇಕು. ಏಕೆಂದರೆ, ಖಾಸಗಿ ಡಾಕ್ಟರ್‌ಗಳಿಗೆ ಪೇಮೆಂಟ್ ಮಾಡುವುದಾದರೆ ಸರ್ಕಾರ ಡಾಕ್ಟರ್‌ಗಳಿಗೂ ಇದನ್ನು ಕೊಟ್ಟರೆ ಒಳ್ಳೆಯ ಸೌಲಭ್ಯ ಸಿಗುತ್ತದೆ. ಮೂಲಭೂತ ಸೌಲಭ್ಯಗಳಿಗೆ ಕರವನ್ನು ವಸೂಲ್ಮಾಡುವಾಗ, ಈ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಇರುವಂಥ ನ್ಯೂನ್ಯತೆಗಳನ್ನು ಮೊದಲು ತೊಲಗಿಸಬೇಕಾಗುತ್ತದೆ. ಮೂಲಭೂತ ಸೌಲಭ್ಯಗಳನ್ನು ಒದಗಿಸುವಂಥ ಸಂದರ್ಭದಲ್ಲಿ ಗುಣಾತ್ಮಕವಾದ ಬದಲಾವಣೆಗಳನ್ನು ತಂದರೆ ಬಹುಶಃ ಜನ ಹೆಚ್ಚಿನ ರೆಸಿಸ್ಟೆನ್ಸ್ ಮಾಡುವುದಿಲ್ಲವೆಂದು ನನ್ನ ಭಾವನೆಯಾಗಿದೆ. ಆದ್ದರಿಂದ ವಿದ್ಯುತ್ ಕ್ಷೇತ್ರಕ್ಕೆ ಸಂಬಂಧಪಟ್ಟಂತೆಯೂ ಕೂಡ ಮೂಲಭೂತವಾದ ಸೌಲಭ್ಯಗಳನ್ನು ಒದಗಿಸಿಕೊಡುವುದರಲ್ಲಿ ಇದನ್ನು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕರ್ನಾಟಕದ ಮಧ್ಯಮಾವಧಿ ಆರ್ಥಿಕ ಯೋಜನೆಯಲ್ಲಿ ಪ್ಯಾರಾ ೩.೭ ಮತ್ತು ೩.೮ರ ಬಗ್ಗೆ ಹೇಳುವುದಾದರೆ, ಇದನ್ನು ಬಹಳ ಕಷ್ಟಪಟ್ಟು ತಯಾರು ಮಾಡಿರತಕ್ಕಂಥ ಅಧಿಕಾರಿಗಳಿಗೆ ಸ್ವಲ್ಪ ನೋವು ಆಗಬಹುದು. ನಾವು ಕಷ್ಟಪಟ್ಟು ತಯಾರು ಮಾಡಿದ್ದೇವೆ. ಆದರೆ ಇದು ಅನ್-ನೋಟೀಸ್ ಆಗಿ ಹೊರ ಹೋಯಿತೆಂದು ಅವರು ತಿಳಿದುಕೊಳ್ಳುವುದು ಬೇಡ. ಈ ಆರ್ಥಿಕ ನೀತಿ ಇದು ಕೇವಲ ನಮ್ಮ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. I request the government to prepare more English copies and send it outside the State also. ಕನ್ನಡ ಮತ್ತು ಇಂಗ್ಲೀಷ್‌ನಲ್ಲಿರತಕ್ಕಂಥ ಈ ಪುಸ್ತಕವನ್ನು ಯಾರಾದರೂ ಆಗಲಿ ಗಂಭೀರವಾಗಿ ಒದಬೇಕು. ಈ ರಾಷ್ಟ್ರ ಮತ್ತು ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಇರುವಂಥ ಚಿತ್ರ ಬಹಳಷ್ಟು ಸ್ಪಷ್ಟವಾಗಿ ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಹಾಗೆಯೇ ಇದನ್ನು ಬಹಳಷ್ಟು ಆಲೋಚನೆ ಮಾಡಿ ಮಾಡಿದ್ದಾರೆ, ಹಾಗೆಯೇ ಬಹಳ ದಿವಸಗಳಿಂದ ಇದರ ಬಗ್ಗೆ ಚಿಂತನೆ ಮಾಡಿದ್ದಾರೆ ಎನ್ನತಕ್ಕಂಥಾದ್ದು ಎಲ್ಲರಿಗೂ ಸಹ ಅರಿವಾಗುತ್ತದೆ. ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇದರ ಪ್ರತಿಗಳನ್ನು ಇಂಗ್ಲೀಷ್‌ನಲ್ಲಿ ಮಾಡಿಸಿ ಹೊರ

ರಾಜ್ಯಗಳಿಗ ಕಳುಹಿಸಿಕೊಟ್ಟರೆ ಸ್ವಲ್ಪ ಉತ್ತಮ ಆಗಬಹುದೆಂದು ನನ್ನ ಭಾವನೆಯಾಗಿದೆ. ನಮ್ಮ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎನ್ನುವುದಾದರೆ, ಮತ್ತೊಂದು ಮೂಲ ಕಾರಣವನ್ನು ನಾವು ಇಲ್ಲಿ ಕಾಣಬಹುದು. ಈ ವರ್ಷ ಏನಾಗಿದೆ ಎಂಬುದನ್ನು ನಾನು ಇನ್ನೂ ಗಮನಿಸಿಲ್ಲ. ಅನೇಕ ವರ್ಷಗಳಿಂದ ಎಲ್ಲಾ ಪಕ್ಷದವರೂ ಕೂಡ ಯೋಜನಾ ವೆಚ್ಚದಲ್ಲಿ ಕಡಿತ ಮಾಡಿಕೊಂಡು ಬಂದಿದ್ದಾರೆ. ಆದರೆ ಇದು ಫೇಲ್ ಆಗುವುದಕ್ಕೆ ಮೂಲಭೂತವಾದ ಕಾರಣ ಏನೆಂದರೆ, ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುವುದರಲ್ಲಿ ನಾವು ವಿಫಲವಾಗಿರುವುದೆ ಮುಖ್ಯ ಕಾರಣವಾಗಿದೆ. We have failed to mobilise resources.

12.10 ಪಿಎಂ

ಎಲ್ಲಾ ವರ್ಷದಲ್ಲಿ ಕೂಡ ಯೋಜನಾ ಗಾತ್ರವನ್ನು ಕಡಿತ ಮಾಡುವಂತಹ ಅನಿವಾರ್ಯತೆಯನ್ನು ನಾವು ಕಂಡಿದ್ದೇವೆ. ಇದನ್ನು ನೀಗಿಸಬೇಕಾದರೆ ನಮಗೆ ಇರತಕ್ಕಂತಹ ಒಂದೇ ಒಂದು ದಾರಿ ಏನೆಂದರೆ, We have to restore the fiscal health of Karnataka State. ಈ ಎಲ್ಲಾ ಪ್ರಮುಖವಾದಂತಹ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಪ್ರತಿವರ್ಷ ಯೋಜನಾ ವೆಚ್ಚವನ್ನು ಹೆಚ್ಚಿಸಬೇಕಾದ್ದು ಅಗತ್ಯವೆನ್ನುವ ಭಾವನೆಯೊಡನೆ ಸತತವಾಗಿ ಯೋಜನಾ ವೆಚ್ಚವನ್ನು ಏರಿಸುತ್ತಾ ಹೋಗುವುದು ನಿರ್ವಹಣೆಯಲ್ಲಿ ನಿರ್ಲಕ್ಷ್ಯತನವನ್ನು ಅಷ್ಟೇ ತರುತ್ತದೆ. I again congratulate the Government. I think nobody has taken the courage to make such a bold statement before the people. Under the pretext of expanding the plan size, at the same time it is real that we have also failed to perform in fulfilment of the plan size. ಗಾತ್ರವನ್ನು ಹೆಚ್ಚು ಮಾಡುವಂತಹ ಪರಿಸ್ಥಿತಿಯಿಂದಾಗಿ ನಿರ್ವಹಣೆಯಲ್ಲಿ ನಿರ್ಲಕ್ಷ್ಯತನವನ್ನು ತರುತ್ತಿದೆ. ಫರ್‌ಫಾರ್ಮೆನ್ಸ್‌ನಲ್ಲಿ ನಾವು ಬಹಳ ಸೋಲುತ್ತಿದ್ದೇವೆ. ಹಿಂದಿನ ದಿನಗಳಲ್ಲಿ ಯೋಜನಾ ಗಾತ್ರದ ಕಡಿತವನ್ನು ನಾನು ನೋಡಿದ್ದೇನೆ. I have seen a Government which has enhanced the plan size by 40%, somewhere in 1990s. How can it be possible? Not even God can fulfil this. ಆದ್ದರಿಂದ ನಾನು ಸರ್ಕಾರಕ್ಕೆ ಬುದ್ಧಿ ಹೇಳುವವರಿಗೆ, ಸರ್ಕಾರವನ್ನು ನಡೆಸುವಂತಹವರಿಗೆ, ಅವರು ಯಾವುದೇ ಪೊಸಿಷನ್ ಆಗಲಿ, ದೊಡ್ಡ ಗಾತ್ರದ ಯೋಜನೆಯನ್ನು ಮಾಡಿ ಅದನ್ನು ಕಾರ್ಯರೂಪಕ್ಕೆ ತರದೆ ವಿಫಲರಾಗುವುದರ ಬದಲು ನಮ್ಮ ಆರ್ಥಿಕ ಪರಿಸ್ಥಿತಿಗೆ ಹೊಂದುವಂತಹ ಯೋಜನೆಯ ಗಾತ್ರವನ್ನು ಅಳವಡಿಸಿಕೊಂಡು ಸಂಪೂರ್ಣವಾಗಿ ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುವಂತಹ ಕೆಲಸವನ್ನು ಮಾಡಬೇಕೆಂದು ನಾನು ಅವರಲ್ಲಿ

ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ಯಾವುದಾದರೂ ಒಂದು ಸರ್ಕಾರಕ್ಕೆ ಬೊಕ್ಕಸ ಸುಮ್ಮನೆ ತುಂಬಿ ಕೊಳ್ಳುವುದಿಲ್ಲ. ತೆರಿಗೆಯನ್ನು ಹೆಚ್ಚಿಸಬೇಕು, ಸರ್ಕಾರದವರು ಒಂದು ತೆರಿಗೆ ಆಯೋಗವನ್ನು ಮಾಡಿ ಒಂದು ದೊಡ್ಡ ಪುಸ್ತಕವನ್ನು ಕೊಟ್ಟಿದ್ದಾರೆ. ಆ ಪುಸ್ತಕವನ್ನು ನಾನು ಓದಿದ್ದೇನೆ. ನನಗೆ ಇದರಲ್ಲಿ ಬೇಕಾಗಿರುವುದು ಒಂದೇ ಒಂದು ಸಿಕ್ಕಿದೆ. ಇದರಲ್ಲಿ ಬಹಳ ಮುಖ್ಯವಾದುದು ಎಂದರೆ ಈ ರಾಜ್ಯದಲ್ಲಿ ತೆರಿಗೆಯ ದರವನ್ನು ನೋಡಿದರೆ, ಬೇರೆ ಅನೇಕ ರಾಜ್ಯಗಳಿಗೆ ಹೋಲಿಸಿದರೆ ಹೆಚ್ಚಿಗೆ ಇದೆ ಎನ್ನುವಂತಹ ಸತ್ಯವನ್ನು ಇದರೊಳಗಡೆ ಬರೆದಿದ್ದಾರೆ. Compared to other States, the taxes on several articles are more than the other States. ಅದರಿಂದಾಗಿ ತೆರಿಗೆಯನ್ನು ಹೆಚ್ಚಿಸುವಂತಹ ಕೆಲಸ ರಾಜ್ಯಸರ್ಕಾರಕ್ಕೆ ಕಷ್ಟವಾದ ಕೆಲಸವಾಗಿದೆ. ಬಹಳ ಸುಲಭವಾದಂತಹ ದಾರಿ ಎಲ್ಲರಿಗೂ ಕಾಣಿಸುವುದೆಂದರೆ ತೆರಿಗೆಯನ್ನು ಹೆಚ್ಚಿಸುವುದಾಗಿದೆ, ಆದರೆ ತೆರಿಗೆಯನ್ನು ಹೆಚ್ಚಿಸುವುದಕ್ಕೆ ಹೋದರೆ, ಬೇರೆ ರಾಜ್ಯಕ್ಕಿಂತ ನಮ್ಮ ರಾಜ್ಯದ್ದು ಜಾಸ್ತಿ ಇದೆ. ಆದ್ದರಿಂದ ಸುಲಭವಾಗಿ ಬೊಕ್ಕಸವನ್ನು ತುಂಬುವಂತಹ ತೆರಿಗೆಯನ್ನು ಹೆಚ್ಚಿಸುವುದರಿಂದಲೂ ಇದು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಸೋರಿಕೆಯನ್ನು ತಡೆಯುವುದು, ಸಾರ್ವಜನಿಕ ವೆಚ್ಚವನ್ನು ಕಡಿಮೆ ಮಾಡುವುದು, ಯೋಜನೇತರ ವೆಚ್ಚಗಳನ್ನು ಕಡಿಮೆ ಮಾಡಬೇಕು. ಆಡಳಿತದಲ್ಲಿ ಬಿಗಿಯನ್ನು ತರುವುದು, ಇವು ಅತ್ಯಂತವಾಗಿ ಅನಿವಾರ್ಯವಾಗಿ ರಾಜ್ಯ ಸರ್ಕಾರವು ಮಾಡಬೇಕಾದಂತಹ ಪರಿಸ್ಥಿತಿಯಾಗಿದೆ. ಅದಕ್ಕಾಗಿ ತೆರಿಗೆಯನ್ನು ಜಾಸ್ತಿ ಮಾಡಿ ಬೊಕ್ಕಸವನ್ನು ಜಾಸ್ತಿ ಮಾಡುವಂತಹ ಪರಿಸ್ಥಿತಿಯಲ್ಲಿಲ್ಲ. ಇವೆಲ್ಲಕ್ಕಿಂತಲೂ ಪ್ರಮುಖವಾದುದೇನೆಂದರೆ, ೪೪ನೇ ಪ್ಯಾರಾದಲ್ಲಿ ಅವರು ಹೇಳಿರುವ ಮಾತೆಂದರೆ, ಬಹುಶಃ ಇಡೀ ಒಂದು ಆಡಳಿತ ವರ್ಗಕ್ಕೆ ಮೆಚ್ಚುವಂಥಾದ್ದು ಆಗಿದೆ. ಹೊಣೆಗಾರಿಕೆಯನ್ನು ನಿಗದಿಪಡಿಸುವುದು, ಮತ್ತು ಉತ್ತಮ ನಿರ್ವಹಣೆಗೆ ಉತ್ತೇಜನ ನೀಡುವ ಪದ್ಧತಿಯನ್ನು ಜಾರಿಗೆ ತರುವುದು, ವೆಚ್ಚ ಸುಧಾರಣೆಯಲ್ಲಿ ಪ್ರಮುಖವಾದಂತಹ ಅಂಶವಾಗಿದೆ. ಹೊಣೆಗಾರಿಕೆಯನ್ನು ನಿಗದಿಪಡಿಸುವುದು, ನಿರ್ವಹಣೆಯಲ್ಲಿ ಉತ್ತೇಜನ ನೀಡುವುದು, ಯಾರಿಗೂ ಕೂಡ ಇವತ್ತು ಜವಾಬ್ದಾರಿ ಇಲ್ಲದಂತಹ ಪರಿಸ್ಥಿತಿ, ನಮ್ಮ ಪದ್ಧತಿಯಲ್ಲಿ ನೋ ಅಕೌಂಟೆಬಿಲಿಟಿ, ಹಳ್ಳಿಯಲ್ಲಿ ಕೆಲಸ ಮಾಡುವಂತಹ ಗ್ರಾಮ ಲೆಕ್ಕಾಧಿಕಾರಿಯಿಂದ ಹಿಡಿದು ವಿಧಾನಸೌಧದಲ್ಲಿ ಕೆಲಸ ಮಾಡುವಂತಹ ಕಾರ್ಯದರ್ಶಿಗಳವರೆಗೆ ಅಥವಾ ನಮ್ಮನ್ನು (ಶಾಸಕರನ್ನು) ಸೇರಿಸಿದಂತೆ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸುವುದರಲ್ಲಿನ ವಿಫಲತೆ ಬಹುಶಃ ಈ ದೇಶದ, ಈ ಸಾಮಾಜಿಕ ಪದ್ಧತಿಯ ಒಂದು ಅಡಿಪಾಯವನ್ನೇ ಅಲ್ಲಾಡಿಸುತ್ತಿದೆ. ಯಾರಿಗೂ ಅಕೌಂಟೆಬಿಲಿಟಿ ಇಲ್ಲ. ಯಾರಾದರೂ ಕೂಡ ಅಪ್ಪಿತಪ್ಪಿ ಎಕ್ಸ್‌ಪ್ಷನ್ ಇದ್ದರೆ ಅವರಲ್ಲಿ ನಾನು ಕ್ಷಮೆಯನ್ನು ಕೇಳಿಕೊಳ್ಳುತ್ತೇನೆ. ಈ ಅಕೌಂಟೆಬಿಲಿಟಿಯನ್ನು ತರದೇ ಇದ್ದರೆ, ಆಡಳಿತದಲ್ಲಿ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪೂರಕ ಅಂದಾಜುಗಳ ಬಗ್ಗೆ ಪ್ರಸ್ತಾಪ ಮಾಡುತ್ತಿರುವಾಗ ಗೌರವಾನ್ವಿತ ಮಂತ್ರಿಗಳು ಇಲ್ಲಿ ಯಾರೂ ಇಲ್ಲ. ಆದ್ದರಿಂದ ಮಾನ್ಯ ಗೌರವಾನ್ವಿತ ಸದಸ್ಯರುಗಳು ಇಲಾಖೆಗೆ ಸಂಬಂಧಪಟ್ಟಂತೆ ಸಲಹೆಗಳನ್ನು ಕೊಡುತ್ತಿರುವುದರಿಂದ ಮಾನ್ಯ ಮಂತ್ರಿಗಳನ್ನು ಕರೆಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವೈ.ಕೆ.ರಾಮಯ್ಯ: ಹಾಲಿ ಈಗ ಇರುವ ವೆಚ್ಚ ನಿರ್ವಹಣಾ ಪದ್ಧತಿಯಲ್ಲಿ ಸಂಪೂರ್ಣ ದುರಸ್ತಿಯನ್ನು ಬಯಸುತ್ತಿದೆ. What a wonderful word? ಇದನ್ನು ಯಾರೋ ಜಾಣರು ತರ್ಜುಮೆ ಮಾಡಿ ಬರೆದಿದ್ದಾರೆ. ಅವರು ಬಹಳ ಜಾಣತನದ ಪದಗಳನ್ನು ಉಪಯೋಗಿಸಿದ್ದಾರೆ. ಅವರು ಯಾರ ಕೈಗೂ ಸಿಗದಂತಹ ಪದಗಳನ್ನು ಉಪಯೋಗಿಸಿದ್ದಾರೆ. ಅದು ಎಷ್ಟು ಚೆನ್ನಾಗಿದೆ! ಹಾಲಿ ಈಗ ಇರುವ ಸಾರ್ವಜನಿಕ ವೆಚ್ಚ ಪದ್ಧತಿ, ನಿರ್ವಹಣಾ ಪದ್ಧತಿಯು ಸಂಪೂರ್ಣ ದುರಸ್ತಿಯನ್ನು ಬಯಸುತ್ತದೆ. ಅವರು ದುರಸ್ತಿ ಎಂದು ಹೇಳುತ್ತಾರೆ. It requires repairs. What kind of repairs? Where is the mechanic? ಸಾರ್ವಜನಿಕ ವೆಚ್ಚದ ಪದ್ಧತಿ ರಿಪೇರಿಯನ್ನು ಬಯಸುತ್ತದೆ. ಈ ಪದವು ಯಾರ ಮನಸ್ಸನ್ನು ನೋಯಿಸದಿರುವ ಪದವಾಗಿದೆ. ಇದರ ಪರಿಣಾಮ ಎಷ್ಟು ಗಂಭೀರವಾಗಿದೆ ಎಂದರೆ, it requires repairs. ಅದರ ಅರ್ಥವೇನೆಂದರೆ, ರಿಪೇರಿ ಮಾಡಬೇಕೆಂದು ಹೇಳುವುದಾದರೆ, ಸಾರ್ವಜನಿಕ ವೆಚ್ಚ ಪದ್ಧತಿ ಸರಿಯಾಗಿಲ್ಲ, ಅದಕ್ಕಾಗಿ ರಿಪೇರಿ ಬೇಕಾಗುತ್ತದೆ. ಅಲ್ಲದೆ ಈ ಪದ್ಧತಿಯ ಸ್ವಾರ್ಥಪರ ಪ್ರವೃತ್ತಿಗೆ ತಡೆಯೊಡ್ಡುವ ನಿರುತ್ತೇಜಕ ವಾತಾವರಣವನ್ನು ಸೃಷ್ಟಿಸಬೇಕು. ಇವರೆಡು ಪದಗಳನ್ನು ನಾನು ಕೆಂಪು ಪೆನ್ಸಿಲ್‌ನಲ್ಲಿ ಗುರುತು ಹಾಕಿಕೊಂಡಿದ್ದೇನೆ. ಇವೆರಡು ಪದಗಳು ನನಗೆ ಬಹಳ ಮೆಚ್ಚುಗೆಯಾಗಿದೆ, ಸಾರ್ವಜನಿಕ ವೆಚ್ಚದ ಪದ್ಧತಿಗೆ ರಿಪೇರಿಯಾಗಬೇಕು, ಮತ್ತೊಂದು ಇವೆಲ್ಲಕ್ಕಿಂತ ಹೆಚ್ಚಾಗಿ ಪದ ಪ್ರಯೋಗ ಬಹಳ ನಾಗರೀಕವಾಗಿದ್ದರೂ ಕೂಡ ಅದರ ಪರಿಣಾಮವಂತೂ ಸಾಕಷ್ಟು ಇದೆ. ಅಲ್ಲದೆ ಈ ಪದ್ಧತಿಯು ಸ್ವಾರ್ಥಪರ ಪ್ರವೃತ್ತಿಗೆ ತಡೆಯೊಡ್ಡುವಂತಹ ಪರಿಸ್ಥಿತಿಯಲ್ಲಿ ಇರಬೇಕು. ನನಗೆ ಅರ್ಧ ನಿಮಿಷ ಹೆಚ್ಚಿಗೆ ಕೊಟ್ಟರೆ ಈ ಸ್ವಾರ್ಥಪರ ಪದ್ಧತಿ ಏನು ಎಂದು ಹೇಳಿಬಿಡುತ್ತೇನೆ.

ಅಧ್ಯಕ್ಷರು: ಇದು ಸಪ್ಲಿಮೆಂಟರಿ ಬಜೆಟ್ ಆಗಿದೆ, ಆ ಹೆಡ್ಸ್ ಮೇಲೆ ತಾವು ಮಾತನಾಡಿ, ಡೀಟೇಲಾಗಿ ಹೋಗಬೇಡಿ.

ಶ್ರೀ ವೈ.ಕೆ.ರಾಮಯ್ಯ: ನಾನು ಆಯವ್ಯಯದ ಮೇಲೆ ಚರ್ಚೆ ಮಾಡುವುದಕ್ಕೋಸ್ಕರ ಇಷ್ಟೆಲ್ಲಾ ಓದಿಕೊಂಡು ಬಂದಿದ್ದೇನೆ. ತಾವು ೧೧ ಗಂಟೆಗೆ ಪ್ರಾರಂಭ ಮಾಡಿ ಎಂದು ಹೊರಟು ಹೋದಿರಿ. ಮಧ್ಯದಲ್ಲಿ ಬೇರೊಬ್ಬರು ಬಂದು

ಅವರು ಒಂದು ಪದ್ಧತಿಯನ್ನು ಅಳವಡಿಸಿದರು.........

ಅಧ್ಯಕ್ಷರು: ಮಾನ್ಯ ವೈ.ಕೆ.ರಾಮಯ್ಯನವರೆ, ತಾವು ಈಗಾಗಲೇ ೪೫ ನಿಮಿಷ ಮಾತನಾಡಿದ್ದೀರಿ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ನಾವು ಹಿಂದೊಮ್ಮೆ ಕೇಳಿದ್ದೆವು, ಈ ಶ್ವೇತಪತ್ರ ಮತ್ತು ಈ ಮಧ್ಯಂತರ ನಾಲ್ಕು ವರ್ಷಗಳ ವರದಿಯ ಬಗ್ಗೆ ಚರ್ಚೆಯನ್ನು ಅವರು ಇಟ್ಟುಕೊಂಡರೆ, ಅವರು ಮಾತನಾಡುವುದು ಬೇಡ. ಇಲ್ಲದಿದ್ದರೆ ಮಾನ್ಯ ವೈ.ಕೆ.ರಾಮಯ್ಯನವರು ಮಾತನಾಡಲಿ, ಈ ರೀತಿಯಾಗಿ ಎಲ್ಲರೂ ಮಾತನಾಡುವುದಕ್ಕಾಗುವುದಿಲ್ಲ. ಅವರು ಮಾತನಾಡುವುದಕ್ಕೆ ತಾವು ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು: ಮಾನ್ಯ ರಾಮಯ್ಯನವರೆ ತಾವು ದಯವಿಟ್ಟು ತಮ್ಮ ಭಾಷಣ ಮುಗಿಸಬೇಕು.

ಶ್ರೀ ವೈ.ಕೆ.ರಾಮಯ್ಯ: ಇಷ್ಟೊಂದು ಕಷ್ಟಪಟ್ಟು ತಯಾರು ಮಾಡಿರುವಂತಹ ಶ್ವೇತಪತ್ರನೋ, ಯೋಜನಾ ತಂತ್ರನೋ ಏನೋ ಒಂದು ರೂಪಿಸಿದ್ದಾರೆ, this should not go unnoticed. It will pain the person who put his efforts, mind, time and exerted himself. ಯಾವ ವ್ಯಕ್ತಿ ಇದಕ್ಕಾಗಿ ಶ್ರಮಪಟ್ಟಿರುತ್ತಾನೋ ಅವರಿಗೆ ನೋವಾಗುತ್ತದೆ. ಯಾವುದೋ ಕೆಲಸಕ್ಕೆ ಬಾರದ ವಿಷಯಗಳಿಗೆಲ್ಲಾ ಬೇಕಾದಷ್ಟು ಚರ್ಚೆಗಳಾಗಬಹುದು, ಕಾಲ ವಿಳಂಬವಾಗಬಹುದು, ಇದರ ಬಗ್ಗೆ ಚರ್ಚೆಯಾಗಲೇಬೇಕೆಂದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಇದರ ಬಗ್ಗೆ ಚರ್ಚೆ ಮಾಡಿ, ಕರ್ನಾಟಕ ರಾಜ್ಯದ ಜನತೆಗೆ ನಮ್ಮ ಪರಿಸ್ಥಿತಿ ಹೀಗಿದೆ ಎಂದು ಹೇಳುವುದರ ಮುಖಾಂತರ ನಮ್ಮ ಜನಗಳನ್ನು ಮುಂದಿನ ಕೆಟ್ಟದಿನಗಳಲ್ಲಿ ಎದುರಿಸಲಿಕ್ಕೆ ಸಿದ್ಧ ಮಾಡಿದಂತಹ ಪುಣ್ಯ ಈ ಸರ್ಕಾರಕ್ಕೆ ಬರುತ್ತದೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ಒಂದೇ ಸಾರಿ ಯಾವುದೋ ಒಂದು ಕೆಟ್ಟ ಪರಿಸ್ಥಿತಿ ಆದಾಗ ಆ ದುಷ್ಪರಿಣಾಮವನ್ನು ಅನುಭವಿಸಿ ಸಾಯುವುದರ ಬದಲು We can prepare ourselves for the bad days ahead. ಅದರಿಂದಾಗಿ ನಾನು ತಮ್ಮಲ್ಲಿ ಹಾಗೂ ಸರ್ಕಾರದವರಲ್ಲಿ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತಿದ್ದೇನೆ. ತಾವೂ ಕೂಡ you can direct the Government ಎರಡು ದಿವಸ ಇದರ ಬಗ್ಗೆ ನಮ್ಮ ಶಾಸಕ ಮಿತ್ರರಾದಂತಹ ಎಸ್.ಎಸ್.ಪಾಟೀಲ್‌ರವರೂ ಕೂಡ ಹೇಳಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಎರಡು ದಿನಗಳ ಅವಕಾಶವನ್ನು ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ, ಹಾಗೂ ತಮಗೂ ಕೂಡ

ನಾನು ಸರ್ಕಾರದ ಮೇಲೆ ಒತ್ತಡವನ್ನು ತರುವುದಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಶ್ವೇತಪತ್ರದಲ್ಲಿ ಹೇಳಿರುವಂತಹ ಸಾರ್ವಜನಿಕ ವೆಚ್ಚದ ಪ್ರಮಾಣವು ವೇಗವಾಗಿ ವೃದ್ಧಿಯಾಗುತ್ತಿರುವುದು ಸಹ ಆರ್ಥಿಕ ಸಮಸ್ಯೆಗೆ ಪ್ರಮುಖ ಕಾರಣವಾಗಿದೆ. ವೇತನ ಮತ್ತು ಪಿಂಚಣಿ ಬಡ್ಡಿ ಪಾವತಿ, ಸಹಾಯಧನ, ಆ ಧನ ವರ್ಗಾವಣೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ, ಸಾಲ ತಂದ ನಿಧಿಯಲ್ಲಿಯೇ ಬಹುಪಾಲು ಚಾಲ್ತಿ ವೆಚ್ಚಕ್ಕಾಗಿ ಖರ್ಚಾಗುತ್ತದೆ. This is very sad. ಇದಕ್ಕಿಂತ ದುಃಖಕರವಾದ ಪರಿಸ್ಥಿತಿ ಯಾವ ರಾಷ್ಟ್ರದಲ್ಲಿಯೂ ಕೂಡ ಇರಲಾರದು ಎಂದು ನಾನು ಭಾವಿಸುತ್ತೇನೆ. ಸಾಲ ತಂದು ಇವರು ೧/೩ ಭಾಗದ ಹಣವನ್ನು ಸಂಬಳ ಹಾಗೂ ಟಿ.ಎ. ಡಿ.ಎ. ಹಾಗೂ ಎಂಎಲ್‌ಎಗಳಿಗೆ ಕೊಡತಕ್ಕಂತಹ ಸೌಲಭ್ಯಗಳು ಸೇರಿಕೊಂಡಿದೆ. ನಿಮ್ಮ ಕಂಪ್ಯೂಟರ್ ಇಲ್ಲದಿದ್ದರೂ ಪರವಾಗಿಲ್ಲ ನಿಮಗೆ ಕೈಮುಗಿಯುತ್ತೇವೆ, ದಯಮಾಡಿ ತಾವು ಸಾಲದ ಹಣದಿಂದ ನೀವು ರೆವಿನ್ಯೂ ವೆಚ್ಚಕ್ಕೆ ಖರ್ಚು ಮಾಡಬೇಡಿ. I request the Government again to make an attempt in this regard. Don't spend even a single pie from the borrowed money for the revenue expenditure. ಆಡಳಿತಾತ್ಮಕ ವೆಚ್ಚಗಳಲ್ಲಿ ತೀವ್ರ ಏರಿಕೆ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಯಲ್ಲಿ ಅಸಮತೋಲನ ನಿರ್ವಹಣೆ, ಬಂಡವಾಳ ವೆಚ್ಚದ ಪ್ರಮಾಣದಲ್ಲಿ ಇಳಿಮುಖ ಮತ್ತು ಮೂಲಭೂತ ಸೌಲಭ್ಯಗಳ ನಿರ್ಮಾಣವನ್ನು ಪೂರ್ಣಗೊಳಿಸಲು ದೀರ್ಘಾವಧಿ ಸಮಯ ತೆಗೆದುಕೊಳ್ಳುತ್ತದೆ ಎಂದು ಈ ಪುಸ್ತಕದಲ್ಲಿ ಬರೆಯಲಾಗಿದೆ. ಇವತ್ತಿನದಿವಸ ಒಂದೊಂದು ಪದಕ್ಕೂ ಕೂಡ ಒಂದೊಂದು ವ್ಯಾಖ್ಯಾನ ಮಾಡಬಹುದು. ಸಾಲ ತಂದಂಥ ಹಣದಲ್ಲಿ ಯೋಜನೆಗಳನ್ನು ಮುಗಿಸುವುದರಲ್ಲಿ ಆಗತಕ್ಕಂಥ ಒಂದು ನಿಧಾನವನ್ನೂ ಕೂಡ ಒಂದು ಮುಖ್ಯವಾದ ಕಾರಣ ಎಂದು ಅವರು ಹೇಳುತ್ತಿದ್ದಾರೆ. ಹೇಮಾವತಿ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತ ನಾನು ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ೧೯೮೩-೮೪ರಲ್ಲಿ೦-೭೦ ಕಿ.ಮೀ.ವರೆಗಿನ ಕಾಲುವೆಯ ಆಳ ಮತ್ತು ಅಗಲ ಮಾಡತಕ್ಕಂಥಾದಕ್ಕೆ ೫ ಕೋಟಿ ರೂಪಾಯಿಗಳ ಒಂದು ಅಂದಾಜು ಇತ್ತು. ಆದರೆ ಇವತ್ತು ಇದು ೪೦ ಕೋಟಿ ರೂಪಾಯಿಗಳಿಗೆ ಎನಾನ್ಸ್ ಆಗಿದೆ. ಇದರಿಂದ ಎಲ್ಲರಿಗೂ ಸಹ ಆಶ್ಚರ್ಯ ಆಗಬಹುದು. ನಾನೇನು ಕಥೆಯಾಗಲಿ ಅಥವಾ ಬೂಟಾಟಿಕೆಯಾಗಲಿ ಅಥವಾ ಸುಳ್ಳೇನೂ ಹೇಳುತ್ತಿಲ್ಲ. ೧೯೮೪ರಲ್ಲಿ ೫ ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಮುಗಿಯಬೇಕಾಗಿದ್ದಂಥ ಕೆಲಸಕ್ಕೆ ಇವತ್ತು ೪೦ ಕೋಟಿ ರೂಪಾಯಿಗಳಷ್ಟು ಆಗುತ್ತಿದೆ. ಇಷ್ಟಾದರೂ ಕೂಡ ಇವತ್ತಿನವರೆಗೆ ಈ ಕೆಲಸ ಪೂರ್ಣವಾಗಿಲ್ಲ. ಇದರ ಬಗ್ಗೆ ನಮ್ಮ ಸ್ನೇಹಿತರು ಚರ್ಚೆ ಮಾಡಿದ್ದಾರೆ. ಈ ಕಾಲುವೆಯ ಆಳ ಮತ್ತು ಅಗಲ ಆಗದೇ ಇರುವುದರಿಂದ ತುಮಕೂರು ಮತ್ತು ಮಂಡ್ಯ ಜಿಲ್ಲೆಗೆ ನೀರು ಬರುವುದಿಲ್ಲ. This is the glaring example that I can give the

cost of the project has been enhanced to Rs.40 crores today. It is the hard fact. ಹಾಗೆಯೇ ಇನ್ನೊಂದು ಯೋಜನೆಗೆ ೧೩ ಕೋಟಿ ರೂಪಾಯಿಗಳ ಅಂದಾಜು ಇದ್ದದ್ದು ಇವತ್ತು ೩೦ ಕೋಟಿ ರೂಪಾಯಿಗಳಾಗಿದೆ. ಸ್ವಾರ್ಥ ಎನ್ನತಕ್ಕಂಥ ಸುಂದರವಾದ ಪದವನ್ನು ಆರ್ಥಿಕ ನೀತಿ ಎಂದು ಹೇಳತಕ್ಕಂಥವರು ಉಪಯೋಗ ಮಾಡಿದ್ದಾರೆ. ಸ್ವಾರ್ಥದ ಲಂಚರುಷುವತ್ತು ೩೦ ಲಕ್ಷ ರೂಪಾಯಿಗಳು ಇದ್ದದ್ದು ೬೦ ಲಕ್ಷ ರೂಪಾಯಿಗಳಿಗೆ ಹೋಗಿದೆ. ಇವತ್ತಿನ ದಿವಸ ಎಲ್ಲಾ ಪಾತ್ರದಾರರು ಬದುಕಿರುವುದರಿಂದ ನಾನು ಎಲ್ಲವನ್ನೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವರು ಕಷ್ಟಬಿದ್ದು ಆ ಮೂಲವನ್ನು ಹುಡುಕಿದ್ದಾರೆ. ಈ ಮೂಲ ಯಾವುದೆಂದರೆ, ಸಾರ್ವಜನಿಕ ವೆಚ್ಚದ ಉತ್ಪಾದನೆಗೆ, ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ದೀರ್ಘಾವಧಿಯನ್ನು ತೆಗೆದುಕೊಳ್ಳತಕ್ಕಂಥಾದ್ದು. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯಾದಂಥ ಜವಾಬ್ದಾರಿಯನ್ನು ಫಿಕ್ಸ್ ಮಾಡಿಲ್ಲ. ದೀರ್ಘಾವಧಿ ಕಾಲದಿಂದ ವೆಚ್ಚ ಜಾಸ್ತಿ ಆಗುತ್ತಿದ್ದರೂ ಕೂಡ ಸಂಬಂಧಪಟ್ಟಂಥ ಇಂಜಿನಿಯರ್‌ರವರಿಗೆ ಜವಾಬ್ದಾರಿಯನ್ನು ಏಕೆ ಫಿಕ್ಸ್ ಮಾಡಿಲ್ಲ? ಕೆ.ಬಿ.ಜೆ.ಎನ್.ಎಲ್.ನ ವ್ಯವಸ್ಥಾಪಕ ನಿರ್ದೇಶಕರ ಮೇಲೆ ನೀವೇಕೆ ಜವಾಬ್ದಾರಿಯನ್ನು ಫಿಕ್ಸ್ ಮಾಡಿಲ್ಲ? ೫ ಕೋಟಿ ರೂಪಾಯಿಗಳಲ್ಲಿ ಮುಗಿಯಬೇಕಾಗಿರತಕ್ಕಂಥ ಕೆಲಸಕ್ಕೆ ಇವತ್ತಿನದಿವಸ ೪೦ ಕೋಟಿ ರೂಪಾಯಿಗಳಾಗುವುದಕ್ಕೆ ಯಾರು ಕಾರಣಕರ್ತರು? ಇದಕ್ಕೆ ಸಂಬಂಧಪಟ್ಟಂತೆ ಜನಪ್ರತಿನಿಧಿಯಿರಲಿ ಅಥವಾ ಯಾರೇ ಅಧಿಕಾರಿಯಾಗಿರಲಿ, ಅಂಥವರ ಮೇಲೆ ಜವಾಬ್ದಾರಿಯನ್ನು ಏಕೆ ಗೊತ್ತು ಮಾಡಿಲ್ಲ? ಇದೂ ಕೂಡ ಒಂದು ಮೂಲಭೂತವಾದಂಥ ಕಾರಣವಾಗಿದೆ. ಇದಕ್ಕಿಂತ ಮಿಗಿಲಾಗಿರತಕ್ಕಂಥ ಒಂದು ಉದಾಹರಣೆಯನ್ನು ನಾನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಸಾಲಗಾರಿಕೆಯ ಏರಿಕೆಯಿಂದಾಗಿ ಹೆಚ್ಚೆಚ್ಚು ಹಣವನ್ನು ಸಾಲದ ಸೇವೆಗಾಗಿ ಮೀಸಲಿಟ್ಟದ್ದು ಉತ್ಪಾದಕ ವೆಚ್ಚಗಳಿಗೆಲ್ಲಾ ಅಲ್ಪ ಪ್ರಮಾಣದ ಹಣ ಉಳಿಯುತ್ತದೆಂದು ಹೇಳಿದ್ದಾರೆ. ಬಡ್ಡಿಯನ್ನು ಮತ್ತು ಸಂಬಳ ಕೊಡತಕ್ಕಂಥ ಪರಿಸ್ಥಿತಿ ಇರುವಾಗ ಉತ್ಪಾದನ ವೆಚ್ಚಕ್ಕೆ ಹಣವೇ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವಿಷಯದ ಬಗ್ಗೆ ಇನ್ನೂ ಸ್ವಲ್ಪ ಚರ್ಚೆ ಮಾಡಬೇಕು ಮತ್ತು ಇದನ್ನು ನಮ್ಮೆಲ್ಲಾ ಸ್ನೇಹಿತರ ಜೊತೆ ಹಂಚಿಕೊಳ್ಳಬೇಕೆಂಬ ಆಸೆ ಇದ್ದರೂ ಕೂಡ ಇದು ಸಂದರ್ಭವಲ್ಲ ಎನ್ನತಕ್ಕಂಥಾದ್ದು ಕೂಡ ನನಗೆ ಗೊತ್ತಿದೆ. ಹಾಗೆಯೇ ಇದು ಪೂರಕ ಅಂದಾಜು ಎನ್ನತಕ್ಕಂಥ ಅರಿವು ಕೂಡ ನನಗೆ ಇದೆ. ಇಂಥ ಒಂದು ಉಪಯುಕ್ತವಾದಂಥ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಎರಡು ದಿವಸಗಳವರೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಷಯ ಸಾರ್ವಜನಿಕವಾಗಿಯೂ ಕೂಡ ಚರ್ಚೆಯಾಗಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ಹೇಳುವುದೇನೆಂದರೆ, ಸರ್ಕಾರ ನಡೆಸಿರುವಂಥವರು ನಮ್ಮ ಆರ್ಥಿಕ ಪರಿಸ್ಥಿತಿ ಬಹಳ

ಚೆನ್ನಾಗಿದೆ ಎಂದು ಸದೃಢವಾಗಿ ಹೇಳಿಕೊಂಡು ಇದ್ದಂಥ ಕಾಲದಲ್ಲಿ ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಒಂದು ಸ್ಪಷ್ಟವಾದ ನೈಜ ಚಿತ್ರವನ್ನು ಕರ್ನಾಟಕ ರಾಜ್ಯದ ಜನತೆಯ ಮುಂದೆ ತಂದು ಇಟ್ಟಿದ್ದಕ್ಕಾಗಿ ನಾನು ಮತ್ತೊಮ್ಮೆ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತಾ ಇದನ್ನು ತಯಾರು ಮಾಡಿದಂಥ ಅಧಿಕಾರಿಗಳು I can understand the pain that they have taken ಎನ್ನತಕ್ಕಂಥಾದ್ದು ನನಗೂ ಕೂಡ ಗೊತ್ತಿದೆ. ಆದ್ದರಿಂದ ಈ ಸಂದರ್ಭದಲ್ಲಿ ಅಧಿಕಾರಿಗಳನ್ನು ಸಹ ನಾನು ಅಭಿನಂದಿಸುತ್ತೇನೆ. ನಾನು ಮಾತನಾಡುವುದಕ್ಕೆ ಸ್ವಲ್ಪ ಹೊರತಾದಂಥ ಸಂದರ್ಭ ಆಗಿದ್ದರೂ ಕೂಡ ನಾನು ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ತಮಗೂ ಸಹ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೆ, ಈ ಒಂದು ಪೂರಕ ಅಂದಾಜುಗಳಲ್ಲಿ ಕೆಲವು ಮಹತ್ವವಾದ ಅಂಶಗಳು ಇವೆ. ಇದಕ್ಕೆ ಹಣಕಾಸಿನ ಲಭ್ಯತೆಯನ್ನು ಮಾಡಿಕೊಡತಕ್ಕಂಥಾದ್ದೂ ಕೂಡ ಅವಶ್ಯಕತೆ ಇದೆ. ಇದರಲ್ಲಿ ನುಸಿರೋಗ ತಡೆಗಟ್ಟುವುದಕ್ಕೋಸ್ಕರ ೯.೫ ಕೋಟಿ ರೂಪಾಯಿಗಳು ಮತ್ತು ಔಷಧಿಗಳ ಖರೀದಿಗೆ, ಹಾಗೇಯೇ ನೀರಾವರಿ ಕಾಲುವೆಗಳಿಗೆ ಮತ್ತು ಆಶ್ರಯ ಮನೆಗಳಿಗೆ ಮತ್ತು ಇತ್ಯಾದಿ ಅಗತ್ಯಗಳಿಗಾಗಿ ಬೇಕಾಗಿರತಕ್ಕಂಥ ಹಣವನ್ನು ಬಿಡುಗಡೆ ಮಾಡಿಕೊಡಲೇ ಬೇಕಾಗುತ್ತದೆ. ಆದ್ದರಿಂದ ಈ ಪೂರಕ ಅಂದಾಜನ್ನು ನಾನು ಸ್ವಾಗತ ಮಾಡುತ್ತೇನೆ. ಇದರಲ್ಲಿರತಕ್ಕಂಥ ಕೆಲವು ಅಂಶಗಳನ್ನು ಪೂರಕ ಅಂದಾಜುಗಳಲ್ಲಿ ಸೇರಿಸಬೇಕಾಗಿರತಕ್ಕಂಥ ಅಗತ್ಯತೆ ಇರಲಿಲ್ಲ. ನಿಮ್ಮ ಬಜೆಟ್‌ನಲ್ಲಿಯೇ ಇದು ಬರುವುದಕ್ಕೆ ಸಾಧ್ಯವಿತ್ತು. ಆದರೆ ಆ ಸಂದರ್ಭದಲ್ಲಿ ಜವಾಬ್ದಾರಿಯುತ ಕೆಲಸ ನಿರ್ವಹಣೆ ಆಗದೆ ಇದ್ದದ್ದರಿಂದ ಇದು ಪೂರಕ ಅಂದಾಜುಗಳಲ್ಲಿ ಬರುವಂತೆ ಆಗಿದೆ ಎಂದು ನಮ್ಮ ಗಮನಕ್ಕೆ ಬಂದಿದೆ. ಇದರಲ್ಲಿ ಯಾವ್ಯಾವುದನ್ನು ಈ ರೀತಿಯಾಗಿ ಮಾಡಬಹುದೆಂಬುದು ಗೊತ್ತಿದ್ದರೂ ಸಹ ಇದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ವಿಶೇಷವಾಗಿ ಪೂರಕ ಅಂದಾಜುಗಳಲ್ಲಿ ಬಂದಿರತಕ್ಕಂಥ ಕೆಲವು ಅಂಶಗಳನ್ನು ರೆಗ್ಯುಲರ್ ಬಜೆಟ್‌ನಲ್ಲಿ ತರಬಹುದಾಗಿತ್ತು ಎನ್ನತಕ್ಕಂಥ ಅಂಶ ಸ್ಪಷ್ಟವಾಗುತ್ತದೆ. ಆದ್ದರಿಂದ ಮುಂದಿನ ಸಂದರ್ಭಗಳಲ್ಲಿ ಜವಾಬ್ದಾರಿಯುತವಾಗಿ ಈ ಅಂಶಗಳನ್ನು ಗಮನಿಸಬೇಕೆಂದು ನಾನು ಹೇಳುತ್ತೇನೆ. ಇದರಲ್ಲಿ ಮುಖ್ಯವಾಗಿ ಇನ್ನೊಂದು ದೋಷವಿದೆ. ಇದನ್ನು ತಾವಾಗಲೀ ಅಥವಾ ಆರ್ಥಿಕ ಮಂತ್ರಿಗಳಾಗಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಯವರೂ ಕೂಡ ಗಮನಿಸಿಲ್ಲ. ೨೦೦೧ನೇ ಪೂರಕ ಅಂದಾಜುಗಳು ಇದಾಗಿದೆ. ಆದರೆ ಈ ಪುಸ್ತಕದ ಕೆಳ ಭಾಗದಲ್ಲಿ ೨೦೦೨ ಆಗಸ್ಟ್ ತಿಂಗಳು ವಿಧಾನಮಂಡಲದಲ್ಲಿ ಮಂಡಿಸಲಾಗುತ್ತದೆಂದು ಮುದ್ರಣ ಮಾಡಿದ್ದಾರೆ. ೨೦೦೨ ಆಗಸ್ಟ್ ತಿಂಗಳಲ್ಲಿ ಮಂಡಿಸಲಿಕ್ಕೆ ಇದು ಸಮಯವಲ್ಲ.

ಅಧ್ಯಕ್ಷರು: ೨೦೦೧-೨೦೦೨ನೇ ಇಸವಿ ಎಂದು ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಆಂಗ್ಲಭಾಷೆಯಲ್ಲಿ ಪ್ರಿಂಟ್ ಆಗಿರತಕ್ಕಂಥ ಕಾಪಿಯಲ್ಲಿ ಸರಿಯಾಗಿದೆ. ಆದರೆ ಕನ್ನಡದಲ್ಲಿ ಪ್ರಿಂಟ್ ಆಗಿರತಕ್ಕಂಥ ಕಾಪಿಯಲ್ಲಿ ತಪ್ಪಾಗಿ ಪ್ರಿಂಟ್ ಆಗಿದೆ.

ಅಧ್ಯಕ್ಷರು: ಬೈ-ಮಿಸ್ಟೇಕ್ ಹಾಗೆ ಆಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ಆಗತಕ್ಕಂಥ ತಪ್ಪುಗಳಿಂದಲೇ ಇವತ್ತಿನದಿವಸ ಪೂರಕ ಅಂದಾಜು ಮಾಡುವಂಥ ಪರಿಸ್ಥಿತಿ ಬಂದಿದೆ. ಸಣ್ಣ ಸಣ್ಣ ತಪ್ಪುಗಳನ್ನು ಇವರು ಗಮನಿಸಿಲ್ಲ.

ಅಧ್ಯಕ್ಷರು: ಇದು ಸರ್ಕಾರಿ ಮುದ್ರಣಾಲಯದಲ್ಲಿ ಆಗಿರತಕ್ಕಂಥ ತಪ್ಪು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಇಂಥ ವಿಷಯಗಳಿಗೆಲ್ಲಾ ತಾವು ಅವರಿಗೆ ರಕ್ಷಣೆ ಕೊಡುವುದಾದರೆ ನಮಗೆ ಬಹಳ ತೊಂದರೆಯಾಗುತ್ತದೆ. ಅವರು ಮಾಡಿರತಕ್ಕಂಥ ತಪ್ಪುಗಳನ್ನು ತಾವು ಅವರಿಗೆ ಹೇಳಿ ಅದನ್ನು ತಿದ್ದುಪಡಿ ಮೂಲಕ ಸರಿಪಡಿಸುವಂಥದ್ದಾಗಬೇಕು. ನಾನು ಈಗಾಗಲೇ ಹೇಳಿದ ಪ್ರಕಾರ ಈ ರೀತಿಯ ಸಣ್ಣ ಪುಟ್ಟ ತಪ್ಪುಗಳು ಆಗುವುದರಿಂದ ಪೂರಕ ಅಂದಾಜು ಬರುತ್ತದೆ. ಆದ್ದರಿಂದ ಇದರ ಬಗ್ಗೆ ಎಚ್ಚರಿಕೆ ವಹಿಸಬೇಕು. ಅಭಿಯಾಚನಾ ಸಂಖ್ಯೆ-೨ರ ಬಾಬ್ತು ೩ರಲ್ಲಿ ಗೇರು ಮತ್ತು ಕೋಕೋ ಅಭಿವೃದ್ಧಿ ನಿಗಮಕ್ಕೆ ಕೇಂದ್ರ ಸರ್ಕಾರ ೧೦೦ ಪರ್ಸೆಂಟ್‌ನಷ್ಟು ಹಣ ಕೊಡುತ್ತದೆ. ಸಾದಿಲ್ವಾರ್ ನಿಧಿಯಿಂದ ೭ ಲಕ್ಷ ೪೦ ಸಾವಿರ ರೂಪಾಯಿಗಳನ್ನು ಈ ಒಂದು ನಿಗಮಕ್ಕೆ ಕೊಟ್ಟಿದ್ದಾರೆ. ನನ್ನ ಶಿರಸಿ ಕ್ಷೇತ್ರದಲ್ಲಿ ಇರತಕ್ಕಂಥ ಗೇರು ಮತ್ತು ಕೋಕೋ ಅಭಿವೃದ್ಧಿ ನಿಗಮದಲ್ಲಿರತಕ್ಕಂಥ ಆರ್.ಎಫ್.ಓ. ಲೆವೆಲ್‌ನ ಅಧಿಕಾರಿಗಳು ಮತ್ತು ಉಳಿದ ಬೇರೆ ಬೇರೆ ಕೇಡರ್‌ನ ಸಿಬ್ಬಂದಿ ವರ್ಗದವರು ಎರಡು ವರ್ಷಗಳಿಂದ ಒಂದು ರೂಪಾಯಿಯ ಕೆಲಸ ಮಾಡದೇ ಸಂಬಳವನ್ನು ಮಾತ್ರ ತೆಗೆದುಕೊಳ್ಳುತ್ತಿದ್ದಾರೆ. ಇವತ್ತಿನ ದಿವಸ ಸುಮಾರು ೨೦ ಲಕ್ಷ ರೂಪಾಯಿಗಳು ಕೇವಲ ಸಂಬಳಕ್ಕಾಗಿಯೇ ಖರ್ಚಾಗುತ್ತಿದೆ. ಕೆಲಸವೇ ಇಲ್ಲದಂಥ ನಿಗಮದಲ್ಲಿ ನೌಕರರನ್ನು ಇಟ್ಟುಕೊಂಡಿದ್ದೀರಿ. ಈ ಒಂದು ನಿಗಮಕ್ಕೆ ಕೇಂದ್ರ ಸರ್ಕಾರದ ಸಹಾಯ ಸಿಗುತ್ತದೆಂದು ಸಾದಿಲ್ವಾರ್ ನಿಧಿ ಯಿಂದ ಇವರಿಗೆ ಹಣ ಕೊಟ್ಟು ಇದರಲ್ಲಿ ಜೋಡಿಸತಕ್ಕಂಥ ಪ್ರಕ್ರಿಯೆ ಆಗಬಾರದು. ಕೇಂದ್ರ ಸರ್ಕಾರ ಸಹಾಯ ಕೊಡುತ್ತದೆ ಎಂದು ಅವಕಾಶ ಇದ್ದರೆ ಕೆಲಸವನ್ನು ಅವರಿಂದ ತೆಗೆದುಕೊಳ್ಳಬೇಕು. ಒಂದು ವೇಳೆ ಕೆಲಸ ಇಲ್ಲದೇ ಇದ್ದರೆ ಅವರನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡಿ ಅವರಿಂದ ಕೆಲಸ ತೆಗೆದುಕೊಳ್ಳುವಂಥ ಕೆಲಸ ಆಗಬೇಕು. ಆದ್ದರಿಂದ ಇವತ್ತಿನ ದಿವಸ ಕೇಂದ್ರಸರ್ಕಾರ ಇದಕ್ಕೆ ಏನು ಹಣ

ಕೊಡುತ್ತದೆ ಇದು ಸದ್ವಿನಿಯೋಗ ಆಗಬೇಕು. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಭಿಯಾಚನೆ ಸಂಖ್ಯೆ ೯ರ ಬಾಬ್ತು ೪ರಲ್ಲಿ ಸರ್ಕಾರದಿಂದ ಪ್ರಥಮದರ್ಜೆ ಕಾಲೇಜಿನ ಕಟ್ಟಡಕ್ಕೆ ೪೦ ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತದೆಂದು ಹೇಳಿದ್ದಾರೆ. ನನ್ನ ಕ್ಷೇತ್ರದಲ್ಲಿರತಕ್ಕಂಥ ಸರ್ಕಾರಿ ಕಾಲೇಜಿಗೆ ಕಟ್ಟಡ ಬೇಕೆಂದು ಮಾನ್ಯ ಶಿಕ್ಷಣ ಸಚಿವರಲ್ಲಿ ಅನೇಕ ಸಲ ವಿನಂತಿಸಿಕೊಂಡಿದ್ದೆನು. ಕಳೆದ ವರ್ಷದ ಬಜೆಟ್‌ನಲ್ಲಿ ಕಾಲೇಜು ಕಟ್ಟಡಕ್ಕೆ ೫೦ ಲಕ್ಷ ರೂಪಾಯಿಗಳನ್ನು ಇಡಲಾಗಿತ್ತು. ಆದರೆ ಇವತ್ತಿನ ದಿವಸ ಪೂರಕ ಅಂದಾಜಿನಲ್ಲಿ ಒಂದು ಕಾಲೇಜಿನ ಕಟ್ಟಡಕ್ಕೆ ೪೦ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ನನಗೆ ತಿಳಿದಮಟ್ಟಿಗೆ ನಮ್ಮ ರಾಜ್ಯದಲ್ಲಿರತಕ್ಕಂಥ ಕಾಲೇಜು ಕಟ್ಟಡಗಳಲ್ಲಿ ಈಗಾಗಲೇ ಅರ್ಧಕ್ಕೆ ನಿಂತಿರುವ ಕೆಲಸವನ್ನು ಪೂರ್ಣಗೊಳಿಸುವುದಕ್ಕೆ ಕನಿಷ್ಠಪಕ್ಷ ೨೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಏಕೆಂದರೆ, ಇವತ್ತಿನ ದಿವಸ ರಾಜ್ಯದಲ್ಲಿ ಅನೇಕ ಕಡೆ ಕಾಲೇಜುಗಳಿಗೆ ಕಟ್ಟಡಗಳ ವ್ಯವಸ್ಥೆ ಸರಿಯಾಗಿ ಇಲ್ಲದೇ ಇರುವುದರಿಂದ ವಿದ್ಯಾರ್ಥಿಗಳಿಗೆ ತರಗತಿಯನ್ನು ನಡೆಸಲು ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ರೀತಿಯಾಗಿ ಒಂದೊಂದು ಕಾಲೇಜಿಗೆ ೪೦ ಲಕ್ಷ ರೂಪಾಯಿಗಳನ್ನು ಕೊಡತಕ್ಕಂಥಾದ್ದು ತಪ್ಪಾಗುತ್ತದೆ.

ಡಾ॥ ಜಿ. ಪರಮೇಶ್ವರ್: ಒಂದೊಂದು ಕಾಲೇಜಿಗೆ ೪೦ ಅಥವಾ ೨೦, ೧೫ ಲಕ್ಷ ರೂಪಾಯಿಗಳನ್ನು ಕಾಲೇಜು ಕಟ್ಟಡದ ನಿರ್ಮಾಣಕ್ಕೆ ಕೊಡುತ್ತಿದ್ದು, ಇದರ ಪ್ರಕಾರ ಒಟ್ಟು ೪೫ ಕಾಲೇಜುಗಳಿಗೆ ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೆವು. ಆದ್ದರಿಂದ ಇನ್ನು ೧೫ ದಿವಸದೊಳಗೆ ಹಣ ಬಿಡುಗಡೆ ಮಾಡುವುದಕ್ಕೆ ಆದೇಶವನ್ನು ಹೊರಡಿಸಲಾಗುತ್ತದೆ. ಆದರೆ ಇದರಲ್ಲಿ ಆ ವಿಷಯ ಬಂದಿಲ್ಲವಷ್ಟೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ವರ್ಷೇ ವರ್ಷೇ ಮಾಡುತ್ತೇವೆಂದು ಹೇಳುತ್ತಾ ಬರುತ್ತಿದ್ದೀರಿ. ಆದರೆ ಇನ್ನು ೧೫ ದಿವಸಗಳಲ್ಲಿ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ. ಆದ್ದರಿಂದ ತಮಗೆ ಧನ್ಯವಾಗಳನ್ನರ್ಪಿಸುತ್ತೇನೆ.

ಡಾ॥ ಜಿ. ಪರಮೇಶ್ವರ್: ಇದರಲ್ಲಿ ನಿಮ್ಮ ಕ್ಷೇತ್ರದ ಕಾಲೇಜೂ ಕೂಡ ಸೇರಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇವತ್ತಿನ ದಿವಸ ಇದರ ಬಗ್ಗೆ ಸಮಗ್ರವಾದಂಥ ಒಂದು ಯೋಜನೆ ಇರಬೇಕು. ಒಂದು ಕಾಲೇಜ್‌ಗೆ ಈ ವರ್ಷ ಕೊಡುವುದು, ಉಳಿದ ಕೆಲವು ಕಾಲೇಜುಗಳಿಗೆ ನಾಲ್ಕು ವರ್ಷಗಳ ನಂತರ ಕೊಡುತ್ತೇವೆ ಎನ್ನತಕ್ಕಂಥಾದ್ದು ಆಗಬಾರದು. ಅಭಿಯಾಚನೆ ಸಂಖ್ಯೆ ೩೩, ಬಾಬ್ತು ಸಂಖ್ಯೆ ೨ರಲ್ಲಿ ಇರತಕ್ಕಂಥಾದ್ದನ್ನು ನಮ್ಮ ಸ್ನೇಹಿತರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಇನ್ನು

ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ಸಹಾಯಧನವಾಗಿ ೧೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟನೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಈ ಸಂಕಷ್ಟದಲ್ಲಿರುವವರು ಎನ್ನುವುದಕ್ಕೆ ಡೆಫನಿಷನ್ ಏನು? ಅದು ಯಾರ್‍ಯಾರಿಗೆ ಲಭ್ಯವಾಗಿದೆ? ಈ ಡೆಫನಿಷನ್‌ನಲ್ಲಿ ಬರುವಂತಹವರು ಇನ್ನು ಯಾರಾದರೂ ಅರ್ಜಿ ಹಾಕಿಕೊಂಡರೆ ಅವರಿಗೆ ಹಣಕಾಸಿನ ಸೌಲಭ್ಯ ಸಿಗುತ್ತದೆಯೋ ಹೇಗೆ? ಈ ರೀತಿಯ ಕೆಲವು ವಿಷಯಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟನೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಕೊನೆಯದಾಗಿ ನಾನು ಒಂದೇ ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಬಳ್ಳಾರಿ ಜಿಲ್ಲೆಯ ವಿಶೇಷ ಪ್ಯಾಕೇಜನ್ನು ನೋಡಿದರೆ ನಮ್ಮ ಜಿಲ್ಲೆಗೂ ಈ ರೀತಿಯ ವಿಶೇಷ ಪ್ಯಾಕೇಜ್ ಬರುವುದಕ್ಕೆ ನಾವೇನು ಮಾಡಬೇಕೆಂದು ನಮ್ಮನ್ನೆಲ್ಲಾ ಯೋಚನಾಮಗ್ನರನ್ನಾಗಿ ಮಾಡುತ್ತಿದೆ. ಇದರಲ್ಲಿ ಪುಟ ಸಂಖ್ಯೆ ೬ರಲ್ಲಿ ೫೬ರಲ್ಲಿ, ೭೬ರಲ್ಲಿ, ೭೯ರಲ್ಲಿ, ೯೩ರಲ್ಲಿ ಬೇರೆ ಬೇರೆ ಬಳ್ಳಾರಿ ವಿಶೇಷ ಪ್ಯಾಕೇಜ್ ಯೋಜನೆ ಅಂತ ೫೦೦ಲಕ್ಷ, ೨,೪೭೮ಲಕ್ಷ, ೯೫೦ ಲಕ್ಷ, ೧೪ ಲಕ್ಷ ರೂಪಾಯಿಗಳು ಹೀಗೆ ಬೇರೆ ವಿಶೇಷ ಯೋಜನೆ ಎಂದು ಮಾಡಿದೆ. ಈ ಪೂರಕ ಅಂದಾಜಿನಲ್ಲಿ ಒಂದು ಹೊಸ ಅಭಿಯಾಚನೆಯನ್ನೆ ಮಾಡಲಿ. ಎಲ್ಲಾ ಅಭಿಯಾಚನೆಯಲ್ಲಿ ಈ ರೀತಿ ತರುವುದಕ್ಕಿಂತ ಬಳ್ಳಾರಿ ಪ್ಯಾಕೇಜ್ ಅಭಿಯಾಚನೆ ಇಂಥಿಂಥಾದಕ್ಕೆ ನಾವು ಕೊಡುತ್ತಿದ್ದೇವೆಂದು ಹೊಸ ಅಭಿಯಾಚನೆಯನ್ನು ಮಾಡಿಬಿಡುವುದು ಒಳ್ಳೆಯದೆಂದು ನನಗನ್ನಿಸುತ್ತದೆ. ಎಲ್ಲಾ ಅಭಿಯಾಚನೆಯಲ್ಲಿ ಇದು ಬರುವುದಕ್ಕಿಂತ, 'ಬಳ್ಳಾರಿ' ಎಂದು ಬರುವುದಕ್ಕಿಂತ ಅದಕ್ಕೆ ಒಂದು ಹೊಸ ಅಭಿಯಾಚನೆ ಮಾಡುವುದು ಒಳ್ಳೆಯದು. ಈಗ ಮಾಡಿರುವುದು ಇದು ಯೋಗ್ಯವಲ್ಲ, ಸರ್ಕಾರ ಹೀಗೆ ಮಾಡುವುದು ಸಮರ್ಥನೀಯವಲ್ಲ. ಇಡೀ ರಾಜ್ಯದಲ್ಲಿ ಹಲವಾರು ಸಮಸ್ಯೆಗಳಿವೆ. ಈ ಸಮಸ್ಯೆಗಳೆಲ್ಲವನ್ನು ಸಮಾನ ದೃಷ್ಟಿಕೋನದಿಂದ ನಿವಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ವಿಶೇಷ ಪ್ಯಾಕೇಜನ್ನು ಈ ರೀತಿಯ ಪೂರಕ ಅಂದಾಜಿನಲ್ಲಿ ತರುವಂತಹದ್ದು, ಜೋಡಿಸುವಂತಹದ್ದು ಯೋಗ್ಯವಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಈಗ ಆಗಿರುವ ಕೆಲವು ದೋಷಗಳನ್ನು ಗಮನಕ್ಕೆ ತಂದಿದ್ದೇನೆ. ಅವುಗಳನ್ನು ಸರಿಪಡಿಸಿಕೊಳ್ಳಬೇಕೆಂಬ ವಿನಂತಿಯನ್ನು ನಾನು ತಮ್ಮ ಮೂಲಕ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಚನ್ನಿಗಪ್ಪನವರು ಐದು ನಿಮಿಷಗಳಲ್ಲಿ ತಾವು ತಮ್ಮ ಭಾಷಣ ಮುಗಿಸಬೇಕು. ಒಂದು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲರನ್ನೂ ಊಟಕ್ಕೆ ಕರೆದಿದ್ದಾರೆ. ಒಂದು ಗಂಟೆಯೊಳಗೆ ಮುಗಿಯಬೇಕು.

+ ಶ್ರೀ ಸಿ.ಚನ್ನಿಗಪ್ಪ (ಕೊರಟಗೆರೆ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈವೊಂದು ಪೂರಕ ಅಂದಾಜನ್ನು ರಾಜ್ಯದ ಜನತೆಗೆ ನೀಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಪೂರಕ ಅಂದಾಜು ಪಟ್ಟಿಯಲ್ಲಿ ಕೆಲವು ವಿಶೇಷವಾದ ಯೋಜನೆಗಳನ್ನು ಹಮ್ಮಿಕೊಂಡು, ಯಾವುದಕ್ಕೆ ಬಜೆಟ್‌ನಲ್ಲಿಟ್ಟರತಕ್ಕ ಹಣ ಸಾಲದು ಅದನ್ನು ಪೂರಕ ಅಂದಾಜಿನಲ್ಲಿ ಅಳವಡಿಸಿಕೊಂಡು ಆ ಕಾಮಗಾರಿಗಳನ್ನು ಮುಗಿಸುವುದು ಸರ್ಕಾರ ಮಾಡಿರುವಂತಹ ಯೋಜನೆ ಉತ್ತಮವಾಗಿದೆ. ನಾನು ಈ ವಿಚಾರದಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಶ್ರಯ ಯೋಜನೆಯಲ್ಲಿ ಮನೆ ಕಟ್ಟಲಿಕ್ಕೆ ಹಿಂದೆ ೧೨ ಸಾವಿರ ರೂಪಾಯಿ ಇತ್ತು, ಆಮೇಲೆ ಅದು ೨೦ ಸಾವಿರ ರೂಪಾಯಿ ಆಯಿತು. ಎಲ್ಲಾ ಪದಾರ್ಥಗಳ ಬೆಲೆ ಹೆಚ್ಚಾದಾಗ ಸರ್ಕಾರ ಈ ಹಣವನ್ನು ಸ್ವಲ್ಪ ಜಾಸ್ತಿ ಮಾಡಬೇಕು. ೨೦ ಸಾವಿರ ರೂಪಾಯಿಗಳಲ್ಲಿ ಮನೆ ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಸರ್ಕಾರ ಆಶ್ರಯ ಮನೆಗಳನ್ನು ಕಟ್ಟಲಿಕ್ಕೆ ಏನು ೨೦ ಸಾವಿರ ರೂಪಾಯಿಗಳು ಇದೆ ಅದನ್ನು ೩೦ ಸಾವಿರ ಮಾಡುವುದು ಒಳ್ಳೆಯದು. ಅದನ್ನು ಮಾಡಿಲ್ಲ, ಅದೊಂದು ದೋಷವಿದೆ, ದಯಮಾಡಿ ಅದನ್ನು ಸರಿಮಾಡಬೇಕೆಂದು ಹೇಳುತ್ತೇನೆ. ಅದೇ ರೀತಿಯಲ್ಲಿ ಉಪ ಖಜಾನೆಗಳಿವೆ. ತಾಲ್ಲೂಕು ಕೇಂದ್ರಗಳಲ್ಲಿರತಕ್ಕ ಉಪ ಖಜಾನೆಗಳಲ್ಲಿ ಕೊಡತಕ್ಕ ಮಾಸಾಶನ, ವಿಧವಾ ವೇತನ, ಅಂಗವಿಕಲರ ವೇತನ, ವೃದ್ಧಾಪ್ಯ ವೇತನ ಯಾವುದೇ ಮಾಸಾಶನ ಇರಬಹುದು ಅದು ಕಾಲ ಕಾಲಕ್ಕೆ ತಿಂಗಳು ತಿಂಗಳಿಗೆ ಅವರಿಗೆ ಸೇರುತ್ತಿಲ್ಲ. ಆರು ತಿಂಗಳು ಅಥವಾ ಒಂದು ವರ್ಷಕ್ಕೊಂದು ಸಾರಿ ಮಾಸಾಶನ ಕೊಡುವಂತಹ ವ್ಯವಸ್ಥೆ ಏನಿದೆ ಅಲ್ಲಿ ಭಾರಿ ಅವ್ಯವಹಾರ ನಡೆದಿದೆ. ಇದರಲ್ಲಿ ನಾವು ಅದನ್ನು ಸರಿಪಡಿಸಿದ್ದೇವೆಂದು ಹೇಳಿದ್ದಾರೆ. ಆದರೆ ಕೆಲವು ತಾಲ್ಲೂಕುಗಳಲ್ಲಿ, ನಮ್ಮ ತಾಲ್ಲೂಕು ಕೇಂದ್ರದಲ್ಲಿ ನಾನು ನೋಡಿದಾಗ ಇದರಲ್ಲಿ ಭಾರಿ ಅನ್ಯಾಯವಾಗಿದೆ. ದಯಮಾಡಿ ಅದನ್ನು ಪ್ರತಿ ತಿಂಗಳು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಅಂಗನವಾಡಿ ಶಿಕ್ಷಕರು ಮತ್ತು ಅವರ ಸಹಾಯಕರಿಂದ ನಾವು ಹೆಚ್ಚಿಗೆ ಕೆಲಸವನ್ನು ಪಡೆಯುತ್ತಿದ್ದೇವೆ. ಅಂಗನವಾಡಿ ಕೇಂದ್ರಗಳಿಂದ ಮಕ್ಕಳು ಮತ್ತು ಸಮಾಜಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟ ಹಾಗೆ ಇದೆ. ಅವರಿಗೆ ಕೊಡತಕ್ಕ ವೇತನ ಏನಿದೆ ಅದು ಬಾರಿ ಕಡಿಮೆ. ಸರ್ಕಾರ ಅನೇಕ ಯೋಜನೆಗಳನ್ನು ಮಾಡಿ ಆ ಮುಖೇನ ಇವತ್ತು ಬಡಜನರಿಗೆ, ಹಳ್ಳಿಗಾಡಿನ ಜನರಿಗೆ ಮಾಡುವಂತಹ ಅನುಕೂಲ ಏನಿದೆ ಅದನ್ನು ಸರ್ಕಾರ ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಅದನ್ನು ಸ್ವಲ್ಪ ಜಾಸ್ತಿ ಮಾಡಬೇಕು. ಈಗ ಮಾಡುತ್ತಿರುವುದು ಸಾಲದು. ಈಗಿನ ಜನತೆಗೆ ಖರ್ಚುವೆಚ್ಚ ಏನು ಬರುತ್ತಿದೆ ಅದನ್ನು ನೋಡಿದಾಗ ಇದನ್ನೆಲ್ಲಾ ಜಾಸ್ತಿ ಮಾಡಬೇಕು. ಬಳ್ಳಾರಿ ಜಿಲ್ಲೆಗೆ ಹೆಚ್ಚು ಹಣವನ್ನು ಕೊಟ್ಟಿರುವ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಒಂದೇ ಜಿಲ್ಲೆಗೆ ಹೆಚ್ಚಿಗೆ ಕೊಡುವುದಕ್ಕೆ ಬದಲಾಗಿ ಆವೊಂದು ಪಬ್ಲಿಕ್ ವರ್ಕ್ಸ್‌ನ್ನು ಎಲ್ಲಾ ಜಿಲ್ಲೆಗಳಿಗೂ

ಸಮನಾಗಿ ಕೊಡುವಂತಹ ವ್ಯವಸ್ಥೆಯಾಗಬೇಕು. ಕಾಲೇಜುಗಳ ಕಟ್ಟಡವಿರಬಹುದು, ರಸ್ತೆ ಇರಬಹುದು, ಕುಡಿಯುವ ನೀರಿನ ಯೋಜನೆ ಇರಬಹುದು, ಕೆರೆ ನಿರ್ಮಾಣವಿರಬಹುದು, ಯಾವುದೇ ಕಾರ್ಯಕ್ರಮಗಳನ್ನು ಸರ್ಕಾರ ಪ್ರತಿ ಜಿಲ್ಲೆಗೂ ಸಮನಾಗಿ ಹಂಚುವಂತಹ ಕಾರ್ಯಕ್ರಮ ಮಾಡುವುದು ಒಳ್ಳೆಯದು. ವ್ಯವಸಾಯಕ್ಕೆ ರೆಗ್ಯುಲರ್ ಬಜೆಟ್‌ನಲ್ಲಿ ಮಾಡಿರತಕ್ಕ ಹಣ ಸರಿಯಿದೆ. ಆದರೆ ಇನ್ನೂ ಹೆಚ್ಚು ಮಾಡಬೇಕು. ಕಾರಣ ಇವತ್ತು ತೆಂಗಿನಮರಕ್ಕೆ ಬಂದಿರತಕ್ಕ ನುಸಿಪೀಡೆರೋಗವಿರಬಹುದು, ರೈತರಿಗೆ ಕೊಡುವಂತಹ ಬಿತ್ತನೆ ಬೀಜ ಇರಬಹುದು, ಆಧುನೀಕರಣ ವಸ್ತುಗಳನ್ನು ನಾವೇನು ರೈತರಿಗೆ ಕೊಡುತ್ತೇವೆ ಅದು ಬಹಳ ಪ್ರಮುಖವಾದ ವಿಚಾರ. ಇದಕ್ಕೆ ಇನ್ನೂ ಹೆಚ್ಚಿಗೆ ಹಣವನ್ನು ಸೇರಿಸಬಹುದಾಗಿತ್ತು. ಅದನ್ನು ಕಡಿಮೆ ಮಾಡಿದ್ದಾರೆ. ಪೂರಕ ಅಂದಾಜಿನಲ್ಲಿರತಕ್ಕ ಎಲ್ಲಾ ವಿಷಯಗಳನ್ನು ನೋಡಲಾಗಿ ಸರ್ಕಾರ ಹೆಚ್ಚು ವೆಚ್ಚವನ್ನು ಮಾಡಲೇಬೇಕಾಗಿ ಬರುತ್ತದೆ. ಒಂದೇ ಪಟ್ಟಿಯಲ್ಲಿ ಇವತ್ತು ಎಲ್ಲವನ್ನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಮಾರ್ಚಿಯಲ್ಲಿ ಎಲ್ಲವನ್ನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಯಾವಾಗ ಅಗತ್ಯತೆ ಬೀಳುತ್ತದೆ ಆಗ ಜನರಿಂದ ಬರತಕ್ಕ ಒತ್ತಡವಿರುತ್ತದೆ. ಆಮೇಲೆ ಈ ಪೂರಕ ಅಂದಾಜು ಪಟ್ಟಿಯನ್ನು ತರುವ ಮುಖೇನ ಕೆಲವು ಯೋಜನೆಗಳನ್ನು ತಂದು ಜನರಿಗೆ ಅನುಕೂಲ ಮಾಡುವಂತಹ ಕೆಲಸವನ್ನು ಸರ್ಕಾರ ಏನು ಮಾಡುತ್ತದೆ ಅದನ್ನು ಕೂಡ ನಾನು ಸ್ವಾಗತ ಮಾಡುತ್ತೇನೆ. ಇನ್ನು ಹೆಚ್ಚಿಗೆ ಕಾರ್ಯಕ್ರಮವನ್ನು ಮಾಡಬೇಕು. ಇವತ್ತು ಕುಡಿಯುವ ನೀರಿನ ಬಗ್ಗೆ ಅನೇಕ ಯೋಜನೆಗಳನ್ನು ಮಾಡಿ ಕುಡಿಯುವ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಮಳೆ ಇಲ್ಲದ ಕಾರಣ ಕೆಲವು ಜಿಲ್ಲೆಗಳಲ್ಲಿ, ಕೆಲವು ತಾಲ್ಲೂಕುಗಳಲ್ಲಿ ಬೋರ್‌ವೆಲ್‌ನ ಆಳ ೮೦೦-೯೦೦ ಅಡಿಗಳವರೆಗೆ ಹೋಗಿದೆ. ಆ ಯೋಜನೆಗೆ ಹೆಚ್ಚಿನ ಹಣವನ್ನು ಈ ಪೂರಕ ಅಂದಾಜಿನಲ್ಲಿ ಅಳವಡಿಸಿದ್ದರೆ ಉತ್ತಮವಾಗುತ್ತಿತ್ತು. ಅನೇಕ ವಸ್ತುಗಳ ಮೇಲೆ ಟ್ಯಾಕ್ಸ್ ಜಾಸ್ತಿ ಮಾಡಬಹುದಾಗಿತ್ತು. ಸರ್ಕಾರ ಖರ್ಚು ಮಾಡುವುದಕ್ಕೆ ಬದಲಾಗಿ ಆದಾಯವೂ ಕೂಡ ಬೇಕಾಗುತ್ತದೆ. ಬರೀ ಸಾಲದಲ್ಲಿಯೇ ಯಾವುದೇ ಉತ್ತಮವಾದ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರ ಏನು ಇವತ್ತು ಟ್ಯಾಕ್ಸೇಷನ್ ಪಾಲಿಸಿ ಮಾಡಿದೆ, ಕೆಲವು ಭೋಗವಸ್ತುಗಳಿಗೆ ಟ್ಯಾಕ್ಸ್ ಹೆಚ್ಚು ಮಾಡುವ ಕೆಲಸ ಮಾಡಿ ಸರ್ಕಾರದ ಆದಾಯ ಜಾಸ್ತಿ ಮಾಡಿ ಹೆಚ್ಚಿಗೆ ಖರ್ಚು ಮಾಡುವಂತಹ ಅನೇಕ ಬಾಬುಗಳಿವೆ. ವ್ಯವಸಾಯವಿರಬಹುದು, ಕೈಗಾರಿಕೆ ಇರಬಹುದು, ರಸ್ತೆ ಇರಬಹುದು, ಕುಡಿಯುವ ನೀರು ಇರಬಹುದು ಅಥವಾ ಕೆರೆಗಳು ಇರಬಹುದು ಇಂತಹವುಗಳಿಗೆ ಜಾಸ್ತಿ ಖರ್ಚು ಮಾಡುವಂತಹ ವ್ಯವಸ್ಥೆಯನ್ನು ಅಳವಡಿಸಬಹುದಾಗಿತ್ತು. ಅದು ಸ್ವಲ್ಪ ಕಡಿಮೆಯಾಗಿದೆ, ಅದನ್ನು ಹೆಚ್ಚು ಮಾಡಬೇಕೆಂದು ಹೇಳಿ, ಸರ್ಕಾರ ಉತ್ತಮವಾದ ಪೂರಕ ಬಜೆಟ್‌ನ್ನು ತಂದಿದೆ,

ಅದನ್ನು ಸ್ವಾಗತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ೧೦ ಲಕ್ಷ ರೂಪಾಯಿಗಳ ಸಹಾಯಧನ ಕೊಡುವುದರ ಬಗ್ಗೆ ಯಾವುದೇ ಕಾಲದಲ್ಲಿ ಯೋಚನೆ ಮಾಡದವರು ಈ ಸಲ ಏನೋ ಯೋಚನೆ ಮಾಡಿದ್ದಾರೆ. ಇದಕ್ಕೆ ಏನಾದರೂ ಗೈಡ್‌ಲೈನ್ಸ್ ಇದೆಯಾ? ಎಲ್ಲಾ ಸಂಕಷ್ಟದಲ್ಲಿರುವವರಿಗೆ ಹತ್ತು ಲಕ್ಷವೋ ಅಥವಾ ಒಬ್ಬೊಬ್ಬರಿಗೆ ಹತ್ತು ಲಕ್ಷ ಕೊಡಲಾಗಿದೆಯೇ ಹೇಗೆ? ಏಕೆಂದರೆ ಇದರಲ್ಲಿ ಯಾವ ರೀತಿಯ ಸಂಕಷ್ಟವೆಂದು ಹೇಳಿಲ್ಲ. ಆದರೆ ಒಟ್ಟು ಹತ್ತು ಲಕ್ಷವಾದರೆ ಇದು ಯಾವುದಕ್ಕೂ ಸಾಕಾಗುವುದಿಲ್ಲ. ನಮ್ಮಲ್ಲಿ 'ನೊಣ ತಿಂದು ಜಾತಿ ಕೆಟ್ಟ ಹಾಗೆ' ಎಂದು ಗಾದೆ ಮಾತು ಹೇಳುತ್ತಾರೆ, ಇದು ಆಗಬಾರದು. ಅವರಿಗೆ ಕೊಡುವುದಾದರೆ ಒಂದು ಸರಿಯಾದ ಪರಿಹಾರವನ್ನು ಕೊಡಬೇಕಾಗುತ್ತದೆ. ಮೀನುಗಾರಿಕಾ ರಸ್ತೆಗಳಿಗೆ ೧೧೦ಲಕ್ಷ ರೂಪಾಯಿಗಳು ಅದಕ್ಕೆ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಿಂದೆ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೋರಿಕೊಂಡಿದ್ದೆ. ಮೊದಲು ೧೦ಲಕ್ಷ ಬಿಡುಗಡೆ ಮಾಡಿದ್ದಾರೆ, ಆಮೇಲೆ ಒಂದು ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಈಗ ಇಲ್ಲಿ ಮೀನುಗಾರಿಕಾ ಸಚಿವರು ಇಲ್ಲ. ಎಲ್ಲಿ ಅಗತ್ಯತೆ ಇದೆ ಅಲ್ಲಿ ದುರಸ್ತಿ ಮಾಡಿ ಖರ್ಚು ಮಾಡಲಿ. ಏಕೆಂದರೆ ಇಲ್ಲಿ ಜಾಸ್ತಿ ಖರ್ಚಾಗಿದೆ, ಅದೆಲ್ಲ ಬೇಡ. ಎಲ್ಲಿ ಅಗತ್ಯವಿದೆ ಅಲ್ಲಿ ಡಿಸ್ಕ್ರಿಮಿನೇಟ್ ಮಾಡದೆ ಹಣವನ್ನು ಒದಗಿಸಬೇಕು. ಹೊಸ ಜಿಲ್ಲೆಗಳನ್ನು ಮಾಡಿದಾಗ ಹೊಸ ಹೊಸ ಕಛೇರಿಗಳ ಕಟ್ಟಡ ಆಗಬೇಕಾಗಿದೆ. ಜಿಲ್ಲಾ ನ್ಯಾಯಾಲಯದ ಕಟ್ಟಡದ ಬಗ್ಗೆ ಉಡುಪಿ ಜಿಲ್ಲೆಯಲ್ಲಿ ಮತ್ತೆ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇಡಿಕೆ ಇದೆ. ಚಾಮರಾಜನಗರ ಜಿಲ್ಲೆಯವರದ್ದೂ ಸಹ ಅದೇ ಬೇಡಿಕೆಯಿದೆ. ಅದಕ್ಕಾಗಿ ಏನೂ ಹಣವನ್ನು ಸರ್ಕಾರ ಒದಗಿಸಿಲ್ಲ. ಕಟ್ಟಡ ಒದಗಿಸಿಲ್ಲವೆಂದು ಹೈಕೋರ್ಟ್‌ನವರು ಹೊಸ ಜಿಲ್ಲಾ ನ್ಯಾಯಾಲಯವನ್ನು ಸ್ಯಾಂಕ್ಷನ್ ಮಾಡುತ್ತಿಲ್ಲ. ಹೈಕೋರ್ಟ್‌ನವರು ನೋಟಿಫಿಕೇಷನ್ ಮಾಡಿಲ್ಲವೆಂದು ಸರ್ಕಾರದವರು ಹಣವನ್ನು ಒದಗಿಸಿಲ್ಲ. ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸರ್ಕಾರ ಮುಂದೆ ಬಂದು ಹಣವನ್ನು ಒದಗಿಸಬೇಕು. ಇನ್ನು ವರಾಹಿ ಯೋಜನೆಯ ಬಗ್ಗೆ ನಮ್ಮ ಅನೇಕ ಸಹೋದ್ಯೋಗಿಗಳು ಮಾತನಾಡಿದ್ದಾರೆ. ಅದರಲ್ಲಿ ವರ್ಕ್‌ಸ್ಲಿಪ್ ಎಂದು ಎಲ್ಲೆಲ್ಲಿ ನಡೆಯುತ್ತಿದೆಯೋ ಗೊತ್ತಿಲ್ಲ. ಟೆಂಡರ್ ಆಗಿ ವರ್ಕ್ ಆದದ್ದು ಮತ್ತೆ ವರ್ಕ್ ಎಂಟರೆಸ್ಟ್ ಆಗಿ ವರ್ಕ್ ಆದದ್ದು ಅಲ್ಲದೆ ವರ್ಕ್‌ಸ್ಲಿಪ್ ಎಂದು ಹಣವನ್ನು ಡ್ರಾ ಮಾಡುವಂತಹದ್ದು, ಆ ಪದ್ಧತಿಯನ್ನು ನಿಲ್ಲಿಸುವಂತಹ ವ್ಯವಸ್ಥೆಯಾಗಬೇಕಾಗಿದೆ. ಅದರ ಬಗ್ಗೆ ಒಂದು ಸಮಗ್ರವಾದ ತನಿಖೆಯಾಗಬೇಕಾಗುತ್ತದೆ. ಹೋದ ಸಲದ ಪೂರಕ ಬಜೆಟ್‌ನಲ್ಲಿ ನಮ್ಮ ವರಾಹಿ ಯೋಜನೆಗೆ ೭ ಕೋಟಿ ರೂಪಾಯಿಗಳನ್ನು

ಇಟ್ಟಿದ್ದರು. ಆದರೆ ಆ ಹಣ ಖರ್ಚಾಗಿಲ್ಲ. ಈ ಸಾರಿ ಬರೀ ಒಂದು ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಹಳೆಯ ಬಾಕಿ ಎರಡು, ಮೂರು ಕೋಟಿ ರೂಪಾಯಿಗಳು ಇರುವಾಗ ಈಗ ಬರೀ ಒಂದು ಕೋಟಿ ರೂಪಾಯಿಗಳನ್ನು ಇಟ್ಟಂತಹದ್ದು ಸರಿಯಲ್ಲ. ಇನ್ನೂ ಹೆಚ್ಚಿನ ಹಣ ಒದಗಿಸಬೇಕು. ಏಕೆಂದರೆ ಕೃಷ್ಣಾ ಕಾವೇರಿ ಯೋಜನೆಗಳಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದಕ್ಕೆ ನನ್ನ ವಿರೋಧವಿಲ್ಲ. ಆದರೆ ನಮ್ಮ ಭಾಗದಲ್ಲಿ ಇರುವಂತಹದ್ದು ಒಂದೇ ವರಾಹಿ ಮೇಜರ್ ಇರಿಗೇಷನ್ ಪ್ರಾಜೆಕ್ಟ್. ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಸದಸ್ಯರೊಬ್ಬರು ಈಗಾಗಲೇ ಹೇಳಿದ ಹಾಗೆ ಅಂಗನವಾಡಿ ಶಿಕ್ಷಕಿಯರ ಸಂಭಾವನೆ, ಅಂಗವಿಕಲರ ವೇತನ, ವಿಧವಾ ವೇತನ, ವೃದ್ಧಾಪ್ಯ ವೇತನ ಮಾಸಾಶನ ಏನಿದೆ ಅದನ್ನು ಹೆಚ್ಚು ಮಾಡುವಂತಹ ಕೆಲಸವಾಗಬೇಕು. ಆಶ್ರಯ ಯೋಜನೆ, ಮೀನುಗಾರರಿಗೆ ಮನೆ ಕಟ್ಟುವ ಯೋಜನೆ, ಹೀಗೆ ಒಂದೊಂದು ಯೋಜನೆಯಲ್ಲಿ ಒಂದೊಂದು ಯೂನಿಟ್‌ಗೆ ಬೇರೆ ಬೇರೆ ಇದೆ. ಮೀನುಗಾರರ ಯೋಜನೆಯಲ್ಲಿ ಟೋಟಲ್ ಆಗಿ ೩೦ಸಾವಿರ ಪೂರಾ ಸಬ್ಸಿಡಿ ಇದೆ.

೧೨.೪೦ಪಿ.ಎಂ

ಆಶ್ರಯ ಯೋಜನೆಯಲ್ಲಿ ಹತ್ತು ಸಾವಿರ ಸಬ್ಸಿಡಿ ಇದೆ. ಅದನ್ನು ಹೋಗಲಾಡಿಸಿ ಎಲ್ಲದಕ್ಕೂ ಒಂದೇ ರೀತಿಯಲ್ಲಿ ಅಂದರೆ ೩೦ ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಒಬ್ಬೊಬ್ಬರಿಗೆ ಒಂದೊಂದು ಸ್ಕೀಮ್‌ನಲ್ಲಿ ಒಂದೊಂದು ರೀತಿಯಲ್ಲಿ ಕೊಟ್ಟರೆ ಅದು ಸರಿಯಾಗುವುದಿಲ್ಲ. ಈ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರು ಪ್ರಕೃತಿ ವಿಕೋಪ ನಿಧಿ ಬಗ್ಗೆ ಹೇಳಿದರು. ಮನೆ ಸುಟ್ಟು ಹೋದಾಗ ಆ ಜನ ಬಹಳ ತೊಂದರೆಯಲ್ಲಿರುತ್ತಾರೆ. ಐದು ಸಾವಿರ ರೂಪಾಯಿಗಳನ್ನು ತಕ್ಷಣ ಅವರಿಗೆ ಮಂಜೂರು ಮಾಡುವ ವ್ಯವಸ್ಥೆಯಾಗಬೇಕು. ಇನ್ನೊಂದು ವಿಚಾರವೆಂದರೆ, ಆರೋಗ್ಯ ರಕ್ಷಣೆ ಬಹಳ ಮುಖ್ಯವಾದದ್ದು. ಸರ್ಕಾರದವರು ಇದರ ಬಗ್ಗೆ ಪರಿಶೀಲನೆ ಮಾಡಬೇಕು. ನೀವು ಕೋಟ್ಯಂತರ ರೂಪಾಯಿಗಳನ್ನು ಔಷಧಿ ಖರೀದಿ ಮಾಡುವಲ್ಲಿ ಮತ್ತು ಆಸ್ಪತ್ರೆಗಳನ್ನು ಕಟ್ಟುವಲ್ಲಿ ಖರ್ಚು ಮಾಡುತ್ತೀರಿ. ಅದಕ್ಕಿಂತ ಹೆಲ್ತ್ ಇನ್‌ಷ್ಯುರೆನ್ಸ್‌ನ್ನು ಮಾಡಿ ಅವರಿಗೆ ಕೊಟ್ಟಾಗ ಅದರ ಬಗ್ಗೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ನೋಡಬೇಕು. ಇದಕ್ಕೆ ಟೋಟಲ್ ಕ್ಲೈಮ್ ಎಷ್ಟು ಬರಬಹುದು, ಔಷಧಿಗಳಿಗೆ ಮತ್ತು ಆಸ್ಪತ್ರೆಗಳಿಗೆ ಇನ್ವೆಸ್ಟ್‌ಮೆಂಟ್ ಎಷ್ಟು ಆಗಬಹುದು ಎಂದು ಅದರ ಬಗ್ಗೆ ಒಂದು ಆಲೋಚನೆ ಮಾಡಿದಾಗ ಈ ಹೆಲ್ತ್

ಇನ್‌ಷ್ಯುರೆನ್ಸ್ ಬಗ್ಗೆ ಸ್ವಲ್ಪ ನಾವು ಆಲೋಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳುತ್ತೇನೆ.

ಅಧ್ಯಕ್ಷರು: ಒಂದು ಗಂಟೆಗೆ ಇದರ ಬಗ್ಗೆ ಚರ್ಚೆ ಮುಗಿಯಬೇಕು. ಇದರ ನಂತರ ಬೇರೆ ಬೇರೆ ಬಿಲ್‌ಗಳಿವೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ತಾವು ಮೂರು ನಿಮಿಷಗಳು ಎಂದು ಹೇಳಿದ್ದೀರಿ. ಈಗ ಎರಡು ನಿಮಿಷಗಳಾಯಿತು. ಇನ್ನೂ ಒಂದು ನಿಮಿಷ ಇದೆ. ಇದು ಕೊನೆಯ ವಾಕ್ಯವನ್ನು ಹೇಳಿಬಿಡುತ್ತೇನೆ. ಸಣ್ಣ ನೀರಾವರಿ ಇಲಾಖೆಗೆ ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಪ್ರಾಯಶಃ ಸಣ್ಣ ನೀರಾವರಿ ಇಲಾಖೆಗೆ ಹೆಚ್ಚು ಹಣವನ್ನು ಒದಗಿಸಿದಾಗ ರಾಜ್ಯದ ಹೆಚ್ಚು ಭಾಗದಲ್ಲಿ ಇದರ ಅಗತ್ಯತೆ ಇರುವುದರಿಂದ ಒಳ್ಳೆಯದಾಗುತ್ತದೆ. ಆದ್ದರಿಂದ ಇದನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಮಾನ್ಯ ರಾಮಯ್ಯನವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. populist programmesನ್ನು ಆದಷ್ಟು ಕಡಿಮೆ ಮಾಡುವಂಥಾದ್ದು ಮತ್ತು ಯೋಜನೇತರ ವೆಚ್ಚ-ಸಾಲ ತಂದು ಖರ್ಚು ಮಾಡುವುದು, ಇವೆರಡನ್ನೂ ಕೂಡ ನಿಲ್ಲಿಸಿದರೆ ಸರ್ಕಾರದ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ,.......

ಅಧ್ಯಕ್ಷರು: ಯಾರಾದರೂ ಹೊಸ ಸದಸ್ಯರು ಮಾತನಾಡಿ. ಒಂದು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲರಿಗೂ ಊಟಕ್ಕೆ ಕರೆದಿದ್ದಾರೆ. ಪೂರಕ ಅಂದಾಜಿನ ಮೇಲೆ ಮಾತನಾಡುವುದಕ್ಕೆ ಏನಿದೆ?

ಶ್ರೀ ಎನ್.ಯೋಗೀಶ್ ಭಟ್: ನಾನು ಎರಡು-ಮೂರು ಮುಖ್ಯವಾದ ಅಂಶಗಳನ್ನು ಹೇಳಬೇಕು.

ಅಧ್ಯಕ್ಷರು: ಎರಡು-ಮೂರು ಅಲ್ಲ, ಬೇಕಾದರೆ ಹತ್ತು ಅಂಶಗಳ ಬಗ್ಗೆ ಮಾತನಾಡುವ ಶಕ್ತಿ ನಿಮಗೆ ಇದೆ. ಯಾರಾದರೊಬ್ಬರು ಹೊಸ ಸದಸ್ಯರು ಮಾತನಾಡಲಿ. ಮಾನ್ಯ ಲಕ್ಷ್ಮೀನಾರಾಯಣ್‌ರವರೇ, ನೀವು ಮಾತನಾಡಿ.

+ ಎಂ.ಡಿ.ಲಕ್ಷ್ಮೀನಾರಾಯಣ (ತುರುವೇಕೆರೆ): ಮಾನ್ಯ ಅಧ್ಯಕ್ಷರೇ, ಪೂರಕ ಅಂದಾಜಿನ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಇದುವರೆಗೆ ಎಲ್ಲರೂ ಮಾತನಾಡಿರುವ ರೀತಿಯಲ್ಲಿ ರಾಜ್ಯದಲ್ಲಿ ಇದುವರೆಗೂ ರೈತರಿಗೆ ಯಾವುದೇ

ರೀತಿಯಿಂದ ಅನುಕೂಲವಾದಂಥ ಪೂರಕ ಅಂದಾಜನ್ನು ಸೃಷ್ಟಿ ಮಾಡಿಲ್ಲ. ಮೊನ್ನೆ ಮಾನ್ಯ ಕೃಷಿ ಮಂತ್ರಿಗಳು ವಿಷಯವನ್ನು ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ರಾಜ್ಯದಲ್ಲಿ ಸುಮಾರು ೮ರಿಂದ ೧೦ಕೋಟಿ ತೆಂಗಿನಮರಗಳಿಗೆ ನುಸಿ ರೋಗ ತಗುಲಿದೆ ಎಂಬ ಮಾತನ್ನು ಹೇಳಿ ಅದನ್ನು ಮಾನ್ಯ ಮಂತ್ರಿಗಳೂ ಕೂಡ ಒಪ್ಪಿಕೊಂಡಿದ್ದಾರೆ. ಆದರೆ ಇವತ್ತು ಅದಕ್ಕೆ ಬರೇ ಒಂಬತ್ತು ಕೋಟಿ ರೂಪಾಯಿಗಳನ್ನು ಇಟ್ಟಿರತಕ್ಕದ್ದು ಏನೂ ಸಾಲದು. ಒಂದು ಗಿಡಕ್ಕೆ ಸಿಗುವ ಕೇವಲ ನಾಲ್ಕು ರೂಪಾಯಿಗಳಲ್ಲಿ ಈ ನುಸಿಪೀಡೆ ರೋಗವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಹೋದವರ್ಷ ಮಾಡಿದ್ದಂಥ ಸಂದರ್ಭದಲ್ಲಿ 'ನೋಡಲ್ ಆಫೀಸರ್' ಎಂದು ಗ್ರಾಮ ಪಂಚಾಯತಿ ಮಟ್ಟದಲ್ಲಿ ವ್ಯವಸ್ಥೆ ಮಾಡಿ ಅವರಿಗೆ ಕೊಟ್ಟ ಜೀಪ್‌ಗೆ ಡೀಸಲ್ ಮತ್ತು ಇತರ ಎಲ್ಲಾ ಖರ್ಚುಗಳೂ ಸೇರಿಕೊಂಡು ಕೇವಲ ೩೦ ರಿಂದ ೪೦ ಪೈಸೆ ಒಂದು ಗಿಡಕ್ಕೆ ಬರತಕ್ಕದ್ದು ಇರುವಂಥಾದ್ದು. ಈ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರುವುದರಿಂದ ನಾನು ಅವರಲ್ಲಿ ವಿಜ್ಞಾಪನೆ ಮಾಡತಕ್ಕದ್ದು ಇಷ್ಟೆ. ದಯಮಾಡಿ ಈ ಎಂಟು ಕೋಟಿ ತೆಂಗಿನಮರಗಳಿಗೆ ನುಸಿಪೀಡೆ ರೋಗ ಬಂದಿರತಕ್ಕಂಥ ಸಂದರ್ಭದಲ್ಲಿ ಹೆಚ್ಚಿನ ಅನುದಾನವನ್ನು ಒದಗಿಸಬೇಕೆಂದು ನನ್ನ ವಿನಂತಿ. ಇನ್ನೊಂದು ವಿಚಾರವೇನೆಂದರೆ, ಇವತ್ತು ಕೃಷಿ ಮಾರುಕಟ್ಟೆಗಳಲ್ಲಿ ರೈತ ಬೆಳೆದ ಪದಾರ್ಥಗಳನ್ನು ಇಡಲಿಕ್ಕೆ ಜಾಗ ಇಲ್ಲದೆ, ಈಗಾಗಲೇ ಗೋಡೌನ್‌ಗಳಿಗೋಸ್ಕರ ಸಿನಿಮಾ ಥಿಯೇಟರ್‌ಗಳನ್ನು ತೆಗೆದುಕೊಳ್ಳತಕ್ಕದ್ದು, ಗುರುಭವನಗಳನ್ನು ತೆಗೆದುಕೊಳ್ಳತಕ್ಕದ್ದು, ಛತ್ರಗಳನ್ನು ತೆಗೆದುಕೊಳ್ಳತಕ್ಕದ್ದು ಮಾಡಿ ಧವಸಧಾನ್ಯಗಳನ್ನು ಸಂಗ್ರಹ ಮಾಡತಕ್ಕದ್ದನ್ನು ನಾವು ನೋಡಿದ್ದೇವೆ. ಇವತ್ತು ನನ್ನ ತಾಲ್ಲೂಕಿನಲ್ಲಿ ಕೂಡ ಗುರುಭವನ ತೆಗೆದುಕೊಂಡು ಸುಮಾರು ೭ ತಿಂಗಳಿಂದ ಧಾನ್ಯಗಳನ್ನು ಅದರಲ್ಲಿ ಇಟ್ಟಿರತಕ್ಕದ್ದನ್ನು ನೋಡುತ್ತಿದ್ದೇವೆ. ಅದಕ್ಕೆ ಮಾನ್ಯ ಕೃಷಿ ಸಚಿವರೂ ಕೂಡ ಹೇಳಿದ್ದರು, ಏನೆಂದರೆ ವೇರ್‌ಹೌಸ್‌ಗಳನ್ನು ಸಾಕಷ್ಟು ಕಟ್ಟಲಿಕ್ಕೆ ಸ್ವಲ್ಪ ಪ್ರಾವಿಜನ್ ಮಾಡಿಕೊಡುತ್ತೇವೆ ಎಂದು. ಆದರೆ ಅದನ್ನೂ ಕೂಡ ಇದರಲ್ಲಿ ತೋರಿಸಿಲ್ಲ. ದಯವಿಟ್ಟು ಅದನ್ನೂ ಕೂಡ ಮಾಡಬೇಕು. ಏಕೆಂದರೆ ಹೆಚ್ಚಿನದಾಗಿ ರೈತರಿಗೆ ಅನುಕೂಲವಾಗುವಂಥ ವ್ಯವಸ್ಥೆಯನ್ನು ಈ ಪೂರಕ ಬಜೆಟ್‌ನಲ್ಲಿ ಮಾಡಬೇಕೆಂಬುದು ನನ್ನ ವಿನಂತಿ. ಮತ್ತು ಆವರ್ತನಿಧಿ ಯನ್ನು ನಾಲ್ಕುನೂರು ಕೋಟಿ ರೂಪಾಯಿಗಳಿಗೆ ಹೆಚ್ಚಿಸುತ್ತೇವೆ ಎಂದು ಹೇಳಿದ್ದೀರಿ. ಈಗಾಗಲೇ ನಾನು ಕೊಬ್ಬರಿ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಈಗಲೂ ಕೂಡ ಅದನ್ನು ಖರೀದಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎನ್ನತಕ್ಕಂಥ ಮಾತನ್ನು ಕೂಡ ನಾನು ಹೇಳಿದ್ದೇನೆ. ಆದ್ದರಿಂದ ಅದರ ಮಟ್ಟಿಗಾದರೂ ಆವರ್ತನಿಧಿಯನ್ನು ಜಾಸ್ತಿಮಾಡಿ ಏನು ಈಗ ರೈತರು ಸಂಕಷ್ಟದಲ್ಲಿದ್ದಾರೆ ಅವರಿಗೆ ನೆರವಾಗುವುದಕ್ಕೋಸ್ಕರವಾದರೂ ಇದನ್ನು ಜಾಸ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ನಾನು ಹೇಳುತ್ತೇನೆ.

+ ಶ್ರೀ ಎಸ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತೆ ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮಂಗಳೂರಿಗೆ ಬಂದಾಗ ಟಾಸ್ಕ್‌ಫೋರ್ಸ್ ಮೀಟಿಂಗ್ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಇದು ಯು.ಎಸ್.ನಿಂದ ೯೩ ದೇಶಗಳನ್ನು ಸಂಪರ್ಕ ಮಾಡುವಂಥ Trans-Atlanta ಎಂದು ಹೇಳಿ Project Oxygen ಎಂದು ಹೇಳುವಂಥ ೨೫೦ ಮಿಲಿಯನ್ G.B. capacity ಇರುವಂಥ ಆಳವಾದ ಸಮುದ್ರಕ್ಕೆ ಹೋಗುವಂಥ ಈ Optic Fibre Cable ಯಾವುದಿದೆ ಅದನ್ನು ಭಾರತದಲ್ಲಿ ಮುಂಬೈ ನಂತರ ಮಂಗಳೂರಿನಲ್ಲಿ ಇದನ್ನು international switchgear ವ್ಯವಸ್ಥೆ ಮಾಡಿದ್ದಲ್ಲಿ ಇಡೀ ಕರ್ನಾಟಕ ರಾಜ್ಯ ಮಾತ್ರವಲ್ಲ ಹತ್ತಿರ ಇರುವಂಥ ಪಕ್ಕದ ರಾಜ್ಯಗಳಿಗೂ ಕೂಡ ಕಮ್ಯುನಿಕೇಷನ್ ಮಾಡುವುದಕ್ಕೆ ಒಂದು ಅತ್ಯುತ್ತಮವಾದ ಅವಕಾಶ ಇರುತ್ತದೆ. ಇದನ್ನು ಮಾಡುವುದಕ್ಕೆ ನಾವು ತಪ್ಪಿದರೆ ವಿಶಾಖಪಟ್ಟಣದಲ್ಲಿ ಆಂಧ್ರದವರು ಪ್ರಯತ್ನ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ತಾವು ವಿಶೇಷವಾಗಿ ಅದರ ಬಗ್ಗೆ ಅಧ್ಯಯನ ಮಾಡಬೇಕು ಮತ್ತು ಇದನ್ನು ಜೋಡಣೆ ಮಾಡುವ ದೃಷ್ಟಿಯಿಂದ ಯಾವುದಾದರೂ ವಿಶೇಷ ಅನುದಾನವನ್ನು ಕೊಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಅಕಸ್ಮಾತ್ ಇದು ಆಗದೇ ಇದ್ದರೆ ಅಲ್ಲಿಯ ಫ್ಲಾಗ್ ಎಂದು ಹೇಳಿಕೊಂಡು ೫೩ ದೇಶಗಳಿಗೆ ಲಿಂಕ್ ಮಾಡುವಂಥ ಆಳ ಸಮುದ್ರಕ್ಕೆ ಹೋಗುವಂಥ ಈ ಕೇಬಲ್ ಕೂಡ ಇದೆ. ಇದನ್ನೂ ಕೂಡ ಲಿಂಕ್ ಮಾಡುವುದರ ಬಗ್ಗೆ ತಾವು ಯೋಚನೆ ಮಾಡಬೇಕು ಮತ್ತು ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತಾ, ಬೆಂಗಳೂರು ಹಾಗೂ ಬಳ್ಳಾರಿಗೆ ಹೇಗೆ ತಾವು ಕೊಟ್ಟಿದ್ದೀರಿ ಅದೇ ರೀತಿ ಅತಿವೃಷ್ಟಿಯಿಂದ ಜರ್ಜರಿತವಾಗಿರತಕ್ಕಂಥ ಮಂಗಳೂರು ನಗರಪಾಲಿಕೆಗೆ ಕೂಡ ವಿಶೇಷ ಅನುದಾನವನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಕ್ರೀಡಾಂಗಣಕ್ಕೆ ಸಂಬಂಧಪಟ್ಟಂತೆ ಮದ್ದೂರಿನಲ್ಲಿ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ನಮಗೆ ಕೇಂದ್ರಸರ್ಕಾರದಿಂದ ೯೦ ಲಕ್ಷ ರೂಪಾಯಿಗಳು ಬಿಡುಗಡೆಯಾಗಿದ್ದರೂ ಕೂಡ ರಾಜ್ಯಸರ್ಕಾರದಿಂದ ಇಲ್ಲಿಯವರೆಗೆ ಹಣ ಬಂದಿಲ್ಲ. ಅಲ್ಲಿ ಅರ್ಧದಲ್ಲೇ ಕಟ್ಟಡ ನಿಂತಿದೆ. ಅದನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಸಣ್ಣ ಉಳಿತಾಯಕ್ಕೆ ಸಂಬಂಧಪಟ್ಟಂತೆ ಹೇಳಬೇಕೆಂದರೆ, ಎರಡು ವರ್ಷಗಳಿಂದ ಒಂದು ಸಾವಿರ ಲಕ್ಷ ರೂಪಾಯಿಗಳನ್ನು ಬಾಕಿ ಇಟ್ಟುಕೊಂಡಿದ್ದಾರೆ. ಮೂರುಸಾವಿರ-ನಾಲ್ಕುಸಾವಿರ ರೂಪಾಯಿಗಳಷ್ಟು ಸಂಪಾದನೆ ಮಾಡುವಂಥ ಏಜೆಂಟರುಗಳಿಗೆ ಅನ್ಯಾಯ ಆಗದ ರೀತಿಯಲ್ಲಿ ಕ್ಲುಪ್ತ ಸಮಯದಲ್ಲಿ ಬಿಡುಗಡೆ ಮಾಡುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ೧೭ ಕೋಟಿ ರೂಪಾಯಿಗಳ

ಸಬ್ಸಿಡಿ ಬಾಕಿ ಇದೆ. ಪೀಪಲ್ ಫ್ರೆಂಡ್‌ಲಿ ಎನ್ನುವಂಥ ಕೈಗಾರಿಕಾ ನೀತಿಯನ್ನು ಘೋಷಣೆ ಮಾಡಿ ನಮಗೆ ಸಹಾಯ ಮಾಡಬೇಕೆಂದು ವಿಶೇಷವಾಗಿ ನಾನು ವಿನಂತಿ ಮಾಡುತ್ತೇನೆ. ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲಿ ಒಂದು ಕೊಲೆ ನಡೆದ ಸಂದರ್ಭದಲ್ಲಿ ನಾನು ಶಾಂತಿಸಭೆಯನ್ನು ನಡೆಸಿದ್ದೆ. ಆ ಸಂದರ್ಭದಲ್ಲಿ ನನಗೆ ಸಿಕ್ಕಿದ ಮಾಹಿತಿಯಂತೆ ಎರಡೂ ಕಮ್ಯುನಿಟಿಯವರೂ ಸೇರಿಕೊಂಡಂತೆ ಈ ಮಾದಕ ದ್ರವ್ಯಗಳ ಜಾಲದಿಂದಾಗಿ ಇಂತಹ ಅನಾಹುತಗಳು ಆಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೂ ಬಂದಿದೆ. ಇದನ್ನು ಮುಟ್ಟುಗೋಲು ಹಾಕುವ ದೃಷ್ಟಿಯಿಂದ ಗುಪ್ತಚಾರ ಇಲಾಖೆಗೆ ವಿಶೇಷ ಅನುದಾನವನ್ನು ಕೊಡುವ ಅವಶ್ಯಕತೆ ಇದೆ ಮತ್ತು ಅದನ್ನು ಮತ್ತಷ್ಟು ಸಶಕ್ತಗೊಳಿಸುವ ಅವಶ್ಯಕತೆ ಇದೆಯೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ ಮಾನ್ಯ ದತ್ತಾತ್ರೇಯ ಭಂಡಾರಿ ಕೇಂದ್ರಸಚಿವರು ಹೇಳಿದಂಥ ಒಂದು ಅಂಶವನ್ನು ನಾನು ಇಲ್ಲಿ ಉಲ್ಲೇಖ ಮಾಡುತ್ತೇನೆ. ಸ್ವರ್ಣರೋಜಗಾರ ಯೋಜನೆಗೆ ಸಂಬಂಧಪಟ್ಟಂತೆ ೪೭ ಕೋಟಿ ರೂಪಾಯಿಗಳನ್ನು ಕರ್ನಾಟಕ ಸರ್ಕಾರ ಉಪಯೋಗ ಮಾಡಿಕೊಂಡಿಲ್ಲ, ಅದಕ್ಕಾಗಿ ಎರಡನೇ ಕಂತನ್ನು ನಾವು ಕೊಟ್ಟಿಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ. ಅದನ್ನು ತಮ್ಮ ಮೂಲಕ ರಾಜ್ಯಸರ್ಕಾರಕ್ಕೆ ಹೇಳಿ ಕೇಂದ್ರಸರ್ಕಾರದ ಯಾವುದೇ ಯೋಜನೆಯಿಂದ ಬಿಡುಗಡೆಯಾದ ಹಣವನ್ನು ಸದುಪಯೋಗ ಮಾಡಿಕೊಳ್ಳುವುದಕ್ಕೆ ವಿಶೇಷ ಮುಂಜಾಗ್ರತೆ ವಹಿಸಬೇಕೆಂದು ವಿನಂತಿಯನ್ನು ಕೂಡ ನಾನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ರಾಮದಾಸ್‌ರವರೇ, ನೀವು ಎರಡು ನಿಮಿಷದಲ್ಲಿ ಮುಗಿಸಿ.

+ ಶ್ರೀ ಎ.ರಾಮದಾಸ್ (ಕೃಷ್ಣರಾಜ): ಸನ್ಮಾನ್ಯ ಅಧ್ಯಕ್ಷರೇ, ಪೂರಕ ಅಂದಾಜು ವಿಚಾರದಲ್ಲಿ ಸಂಖ್ಯೆ ೯ರಲ್ಲಿ ವಿಶೇಷವಾಗಿ ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ೧೫ ಪರ್ಸೆಂಟ್ ಖೋತಾ ಆಗಿದೆ ಎನ್ನುವಂಥ ವಿಚಾರ ಇದ್ದರೂ ಕೂಡ ವಿಶೇಷವಾಗಿ ಹೆಚ್ಚಿನ ಹಣ ಕೊಡುವಂಥ ಕೆಲಸ ಮಾಡಿದ್ದೀರಿ. ಅದಕ್ಕಾಗಿ ಧನ್ಯವಾದಗಳು. ಆದರೆ ವಿಶೇಷವಾಗಿ ರಾಜ್ಯದಲ್ಲಿ ಪ್ರಥಮಬಾರಿಗೆ ಒಂದು ಮುಕ್ತ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಿದಿರಿ. ಅದು ತನ್ನದೇ ಆದ ಒಂದು ರೀತಿಯಲ್ಲಿ ಕೆಲಸವನ್ನು ಪ್ರಾರಂಭ ಮಾಡಿ ಈಗ ಜಿಲ್ಲಾಮಟ್ಟದವರೆಗೆ ಕೂಡ ತನ್ನ ಕೆಲಸವನ್ನು ಪ್ರಾರಂಭ ಮಾಡಿದೆ. ಆದರೆ ಹಣಕಾಸಿನ ತೊಂದರೆಯ ವಿಚಾರ ಇರುವುದರಿಂದ ಪೂರಕ ಬಜೆಟ್‌ನಲ್ಲಿ ಸ್ವಲ್ಪ ಅವಕಾಶವನ್ನು ಅದಕ್ಕೆ ಮಾಡಿಕೊಟ್ಟರೆ ಜಿಲ್ಲಾ ಕೇಂದ್ರ ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಚಾರ ತಮ್ಮ ಗಮನಕ್ಕೆ ಕೂಡ ಬಂದಿದ್ದು, ದಯಮಾಡಿ ಅದಕ್ಕೆ ಸ್ವಲ್ಪ ಅವಕಾಶವನ್ನು ಮಾಡಿಕೊಡಬೇಕು ಎನ್ನುವುದು ಮೊದಲನೇ ಅಂಶ. ಎರಡನೆಯದು, ಆಶ್ರಯ ಯೋಜನೆಗೆ ಸಂಬಂಧಪಟ್ಟ ಹಾಗೆ

ಸರ್ಕಾರದಲ್ಲಿ ಇತರ ಎಲ್ಲಾ ಇಲಾಖೆಗಳಿಗೆ ಹೋಲಿಕೆ ಮಾಡಿಕೊಂಡಾಗ ಆಶ್ರಯ ಕೆಲಸ ರಾಜ್ಯದಲ್ಲಿ ಬಹಳ ತೃಪ್ತಿಕರವಾಗಿ ಆಗುತ್ತಿದೆ. ಈ ಬಗ್ಗೆ ನಾನು ಸರ್ಕಾರಕ್ಕೆ, ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ನಗರಪ್ರದೇಶಗಳಲ್ಲಿ ಇರುವಂಥ ಆಶ್ರಯಕ್ಕೂ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಆಶ್ರಯಕ್ಕೂ ಭಿನ್ನವಾದ ಸಮಸ್ಯೆಗಳು ಇವೆ. ಗ್ರಾಮಾಂತರ ಪ್ರದೇಶದಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಹತ್ತು-ಹದಿನೈದು ಮನೆಗಳು ನಿರ್ಮಾಣವಾಗುತ್ತವೆ. ನಗರಪ್ರದೇಶದಲ್ಲಿ ಇಂತಹ ಮನೆಗಳನ್ನು ನಿರ್ಮಾಣ ಮಾಡುವ ಕಡೆ ಐದುನೂರು-ಆರುನೂರು ಮನೆಗಳು ನಿರ್ಮಾಣವಾಗುತ್ತವೆ. ಅಲ್ಲಿ ವಿಶೇಷವಾಗಿ ನಾಗರೀಕ ಸೌಲಭ್ಯಗಳಿಗೆ ಬೇಕಾಗಿರತಕ್ಕಂಥ ರಸ್ತೆ, ನೀರು ಇಂತಹವುಗಳಿಗೆ ಪ್ರತ್ಯೇಕವಾಗಿ ಹಣ ಕೊಡುವಂಥಾ ಯೋಜನೆ ಎಲ್ಲಿಯೂ ಇಲ್ಲ. ಕೇವಲ ಮನೆಗಳ ನಿರ್ಮಾಣಕ್ಕೋಸ್ಕರ ಮತ್ತು ಭೂಮಿಯನ್ನು ಖರೀದಿ ಮಾಡುವುದಕ್ಕೋಸ್ಕರ ಕೊಟ್ಟಿದ್ದೀರಿ. ಇದಕ್ಕಾಗಿ ನಿಮಗೆ ಧನ್ಯವಾದಗಳು. ಆದರೆ ಮೂಲಭೂತ ಸೌಲಭ್ಯಗಳು ಇಲ್ಲದೇ ಅಲ್ಲಿಗೆ ಜನರು ಹೋಗುವುದಕ್ಕೆ ತುಂಬಾ ಸಮಸ್ಯೆಯಾಗಿರುವುದರಿಂದ, ವಿಶೇಷವಾಗಿ ಸುಮಾರು ೭೦-೭೫ ಭಾಗ ಮನೆ ಕೆಲಸ ಮುಗಿದಿದ್ದು ಜನ ಅಲ್ಲಿಗೆ ವಾಸಕ್ಕೆ ಹೋಗುವ ವ್ಯವಸ್ಥೆ ಇವತ್ತು ಪ್ರಾರಂಭವಾಗಿರುವುದರಿಂದ ಈ ಪೂರಕ ಬಜೆಟ್‌ನಲ್ಲಿ ತಾವು ವಿಶೇಷವಾಗಿ ನಗರ ಪ್ರದೇಶದ ಆಶ್ರಯ ಮನೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಈ ಸದನದಲ್ಲಿ ಕೆ.ಆರ್.ಎಸ್. ಅಭಿವೃದ್ಧಿ ಬಗ್ಗೆ ಮೊನ್ನೆ ಚರ್ಚೆಯಾಯಿತು. ಅಲ್ಲಿ ಪ್ರವಾಸಿ ೧೦ ರೂಪಾಯಿಗಳನ್ನು ಕೊಟ್ಟು ಹೋಗುತ್ತಾನೆ, ಅವನ ನಿರೀಕ್ಷೆ ರೀತಿಯಲ್ಲಿ ಅಲ್ಲೇನೂ ಆಗುತ್ತಾ ಇಲ್ಲ ಎನ್ನುವುದರ ಬಗ್ಗೆ ಚರ್ಚೆಯಾಗಿ, ಸರ್ಕಾರ ಒಂದು ನಿರ್ಧಾರ ತೆಗೆದುಕೊಂಡಿದೆ ಎಂದು ಹೇಳಿದರು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಕೊಟ್ಟಂಥ ೫ ಲಕ್ಷ ರೂಪಾಯಿಗಳು ಕೇವಲ ರೈನ್ ಷೆಲ್ಟರ್‌ಗಳನ್ನೂ ಕೂಡ ನಿರ್ಮಾಣ ಮಾಡಲಿಕ್ಕೆ ಆಗದೇ ಇರುವಂಥ ವ್ಯವಸ್ಥೆ ಆಗಿದೆ. ಹಾಗಾಗಿ ಈ ಪ್ರವಾಸಿ ಕೇಂದ್ರಕ್ಕೆ ಸ್ವಲ್ಪ ಹೆಚ್ಚಿನ ಅನುದಾನವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಇದೊಂದು ನಮ್ಮ ಬಹಳ ದಿವಸಗಳ ಬೇಡಿಕೆ. ಹಿಂದಿನ ಸರ್ಕಾರವಿದ್ದಾಗಲೂ ಕೂಡ ನಾವು ಬಹಳ ವಿಚಾರಗಳನ್ನು ಹೇಳಿದ್ದೆವು. ಇವತ್ತು ರಾಷ್ಟ್ರೀಯ ಹೆದ್ದಾರಿ, ಏನು ಕನಕಪುರ, ಬೆಂಗಳೂರು ಮತ್ತು ಟಿ.ನರಸೀಪುರ ಮಾರ್ಗವಾಗಿ ಹೋಗುವಂಥಾದ್ದು ಇದೆ, ಇದಕ್ಕೆ ಸರ್ಕಾರದಿಂದ ೪.೫೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ, ಲಿಂಕಿಂಗ್ ರೋಡ್ ಏನಿದೆ, ಮೈಸೂರು ಮತ್ತು ಟಿ.ನರಸೀಪುರದ ಮಧ್ಯದಲ್ಲಿ ಲಿಂಕ್ ಆಗುವಂಥ ರಸ್ತೆಗೆ ಅನುದಾನದ ಅವಶ್ಯಕತೆ ಇದೆಯೆನ್ನುವ ಮನವಿಯನ್ನು ಕೂಡ ಮಾಡಿತ್ತು. ಆದರೆ, ಇವರಲ್ಲಿ ಅದನ್ನು ಸೇರಿಸುವಂಥ ವ್ಯವಸ್ಥೆಯಾಗಿದ್ದರೆ, ಆ ಲಿಂಕಿಂಗ್ ರೋಡಿಗೆ ಪೂರಕವಾಗುತ್ತಿತ್ತು ಎಂಬ ವಿಚಾರವನ್ನು ಹೇಳುತ್ತೇನೆ. ತಪ್ಪು ಸರ್ಕಾರ

ವಿಶೇಷವಾಗಿ ಅಂಗವಿಕಲರಿಗೋಸ್ಕರವಾಗಿ ಪ್ರತ್ಯೇಕವಾದ ಫೈನಾನ್ಸ್ ಕಾರ್ಪೊರೇಷನ್ ಮಾಡುತ್ತೇವೆಂಬ ಘೋಷಣೆಯನ್ನು ಮಾಡಿತ್ತು. ಒಂದು ವರ್ಷದ ಹಿಂದೆಯೇ ಇದಾಯಿತು. ಆದರೆ, ಬಜೆಟ್‌ನಲ್ಲಿ ಅಲೋಕೇಷನ್ ಆಗಿರಲಿಲ್ಲವೆಂದು ಅದು ಪ್ರಾರಂಭವಾಗಿಲ್ಲ. ರಾಜ್ಯದಲ್ಲಿ ಮೊದಲನೇ ಬಾರಿಗೆ ಈ ಅಂಗವಿಕಲರಿಗಾಗಿ ಫೈನಾನ್ಸ್ ಕಾರ್ಪೊರೇಷನ್ ಮಾಡುತ್ತೇವೆಂದು ಹೇಳಿದಿರಿ. ಅದನ್ನು ನಾನು ಸ್ವಾಗತವನ್ನು ಮಾಡುತ್ತೇನೆ. ಅದಕ್ಕೆ ಬೇಕಾಗಿರತಕ್ಕ ಅಲೋಕೇಷನ್ ಆಗಿಲ್ಲ. ಹಾಗಾಗಿ ಇದುವರೆಗೆ ಅದು ಪ್ರಾರಂಭವಾಗಿಲ್ಲ. ಆ ದೃಷ್ಟಿಯಿಂದ ಬೇಕಾಗಿರುವಂಥ ಫೈನಾನ್‌ಷಿಯಲ್ ಅಲೋಕೇಷನ್ ಇದರಲ್ಲಿ ಆಗುತ್ತದೆಂದು ನಾನು ನಿರೀಕ್ಷೆಯನ್ನು ಮಾಡಿದ್ದೆ. ಆದರೆ, ಅದು ಇದರಲ್ಲಿ ಬಂದಿಲ್ಲ. ವಿಶೇಷವಾಗಿ ಮೈಸೂರಿನಲ್ಲಿ ಮೆಟ್ರೋಪೋಲ್ ಬಿಲ್ಡಿಂಗ್ ಇದೆ. ಅದು ಪುರಾತನವಾದಂಥ ಮತ್ತು ವೈಭವವಾದಂಥ ಬಿಲ್ಡಿಂಗ್. ನಾನು ನಿರೀಕ್ಷೆ ಮಾಡಿದ್ದೆ. ಪ್ರವಾಸೋದ್ಯಮ ಇಲಾಖೆಗೆ ಪೂರಕ ಬೇಡಿಕೆಯಲ್ಲಿ ಅದನ್ನೇನಾದರೂ ಸೇರಿಸುವ ಕೆಲಸವಾಗುತ್ತೆ ಎಂದು. ತಾವು ಮೈಸೂರಿಗೆ ಬಂದಂಥ ಸಮಯದಲ್ಲೂ ಕೂಡ ನಾವು ಮನವಿಯನ್ನು ಕೊಟ್ಟಿದ್ದೆವು. ಕೇವಲ ಸಣ್ಣಪುಟ್ಟ ಕಾಮಗಾರಿಗಳು ಅಂದರೆ ಸುಮಾರು ೭-೮ ಲಕ್ಷ ರೂಪಾಯಿಗಳ ಕಾಮಗಾರಿ ಅದರಲ್ಲಿದೆ. ಆ ಬಿಲ್ಡಿಂಗ್‌ಗೆ ಬೀಗ ಹಾಕಿ ಮೂರೂವರೆ ವರ್ಷಗಳಾಗಿದೆ. ಇವತ್ತಿನವರೆಗೂ ಆ ಕಟ್ಟಡದ ಬೀಗವನ್ನೂ ತೆಗೆದಿಲ್ಲ. ಅಂತಹ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ದಯಮಾಡಿ, ಈ ಪೂರಕವಾದ ಬಜೆಟ್‌ನಲ್ಲಾದರೂ ಕೂಡ........

ಶ್ರೀ ಆರ್.ರೋಷನ್ ಬೇಗ್: ಮೆಟ್ರೋಪೋಲ್ ಹೋಟೆಲ್ ಬಗ್ಗೆ ಆಗಲೇ ಪ್ರವಾಸೋದ್ಯಮ ಇಲಾಖೆಯಿಂದ ಟೆಂಡರ್ ಕರೆದಿದ್ದೇವೆ. ಸಾಕಷ್ಟು ಜನ ಮುಂದೆ ಬಂದಿದ್ದಾರೆ. ಈಗ ಟೆಂಡರ್ ಓಪನ್ ಮಾಡಿ, ಫಾರ್ಮಾಲಿಟೀಸ್‌ಗಳನ್ನೆಲ್ಲಾ ಪೂರೈಸಿ, ಯಾರು ಅಪ್ಲೈ ಮಾಡಿರುತ್ತಾರೋ ಅವರಿಗೆ ಪ್ರೊವೈಡ್ ಮಾಡುತ್ತೇವೆ.

ಶ್ರೀ ಎ.ರಾಮದಾಸ್: ಆ ಕಟ್ಟಡವನ್ನು ಖಾಸಗಿಯವರಿಗೆ ಕೊಡುವ ಯೋಚನೆ ಮಾಡಿದ್ದೀರಾ? ಮೈಸೂರು ನಗರಕ್ಕೆ ಪ್ರಮುಖರು ಬಂದಂತಹ ಸಮಯದಲ್ಲಿ ಒಂದು ಮನವಿಯನ್ನು ಮಾಡಿದ್ದರು. ಇದು ಲೋಕೋಪಯೋಗಿ ಇಲಾಖೆಗೆ ಸೇರಿದ ಕಟ್ಟಡವಾದದ್ದರಿಂದ ನಾನು ಹೇಳುತ್ತೇನೆ. ಅದು ಭವ್ಯವಾದ ಕಟ್ಟಡವಾಗಿದೆ, ಅದನ್ನು ರಿಪೇರಿ ಮಾಡಿ ಒಂದು ಸೆಂಟ್ರಲ್ ಲೈಬ್ರರಿಗೆ ಅವಕಾಶವನ್ನು ಮಾಡಿಕೊಡಿ ಎಂಬ ವಿಚಾರವನ್ನು ಮುಂದೆ ಇಟ್ಟಿದ್ದರು. ಅದು ಸರ್ಕಾರಕ್ಕೆ ಬಿಟ್ಟಂಥ ವಿಚಾರ, ಆದರೆ, ಪೂರಕ ಬೇಡಿಕೆಯಲ್ಲಿ ಏಕೆ ಮನವಿ ಮಾಡಿದೆ ಎಂದರೆ, ವಿಶೇಷವಾಗಿ ಆ ಲೈಬ್ರರಿಗೆ ಕಟ್ಟಡವನ್ನು ಕೊಡುವಂಥ ದೃಷ್ಟಿಯಿಂದ ಇಷ್ಟು ಅಂಶಗಳನ್ನು ಇದರಲ್ಲಿ ಸೇರಿಸುವಂಥಾದ್ದು ಆಗಬೇಕೆನ್ನುವ ಮಾತನ್ನು ಹೇಳುತ್ತಾ, ತಾವು ನನಗೆ ಮಾತನಾಡಲು

ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

+ ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ಪೂರಕ ಬೇಡಿಕೆಗಳ ಮೇಲೆ ಸಾಕಾದಷ್ಟು ಚರ್ಚೆಯಾಗಿದೆ. ೧೨೦ ನಿಮಿಷಗಳಿಗೂ ಹೆಚ್ಚು ಚರ್ಚೆ ಮಾಡಿ, ಹಲವಾರು ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅವರಿಗೆ ನಾನು ವಂದನೆಗಳನ್ನು ಸಮರ್ಪಣೆ ಮಾಡಿ ಅವರು ಹೇಳಿರತಕ್ಕಂಥ ಹತ್ತು ಹಲವಾರು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ನಾವು ಏನು ಖರ್ಚು ಮಾಡುತ್ತಿದ್ದೇವೆ, ಅದರಲ್ಲಿ ಸಾರ್ಥಕತೆಯನ್ನು ಮುಟ್ಟಲಿಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಬರ ಪರಿಹಾರದ ವಿಚಾರದಲ್ಲಿ ಕೊಪ್ಪಳದ ವಿಚಾರವನ್ನು ಗಮನಕ್ಕೆ ತಂದರು. ಈಗ ನಾನು ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾತನಾಡಿದೆ. ಅಲ್ಲಿ ತೆರೆದಿದ್ದಂಥ ಗೋಶಾಲೆಗಳನ್ನು ಮುಚ್ಚಲಿಕ್ಕೆ ಪ್ರಯತ್ನ ಮಾಡಿಲ್ಲ. ಆದರೆ, ಸರ್ಕಾರದ ವ್ಯವಹರಣಾ ವೆಚ್ಚದಲ್ಲಿ ಫ್ರೀ ಫಾಡರ್ ಕೊಡಲಿಕ್ಕೆ ಬರುವುದಿಲ್ಲ. ಫ್ರೀ ಟ್ರಾನ್ಸ್‌ಪೋರ್ಟೇಷನ್ ಆಫ್ ಫಾಡರ್ ಅದನ್ನು ಮಾತ್ರ ನಾವು ಅವಲಂಬಿಸಿರತಕ್ಕಂಥಾದ್ದು. ಆರು ಸ್ಥಳಗಳಲ್ಲಿ ಗೋಶಾಲೆಗಳನ್ನು ತೆರೆದಿದ್ದಾರೆ. ನೂರು ಲಾರಿಗಳಿಗೂ ಮೇಲ್ಪಟ್ಟು ಮೇವನ್ನು ಇದುವರೆಗೂ ಆ ಗೋಶಾಲೆಗಳಲ್ಲಿ ಇಡಲಾಗಿತ್ತು. ರೈತರು ಮೇವನ್ನು ಖರೀದಿಸಿದಲ್ಲಿ ಉಚಿತ ಸಾಗಾಣಿಕೆ ಮಾಡತಕ್ಕಂಥ ಏರ್ಪಾಡನ್ನು ಅವರು ಮಾಡಿದ್ದಾರೆ. ಆದ್ದರಿಂದ, ಈ ಪ್ರಯತ್ನ ಮುಂದುವರಿಯುತ್ತದೆ ಎನ್ನುವ ಮಾತನ್ನು ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಈ ಸಂದರ್ಭದಲ್ಲಿ ತಾವೇನು ಹಣ ಖರ್ಚು ಮಾಡುತ್ತಿದ್ದೀರಿ ಅದರ ಜೊತೆಗೆ ಮೇವನ್ನೂ ಉಚಿತವಾಗಿ ಕೊಟ್ಟರೆ ಬಹಳ ಚಲೋ ಆಗುತ್ತದೆ. ಒಂದು ಕಡೆ ಬೀದರ್‌ನಲ್ಲಿ ಮೇವು ಸಿಗುತ್ತಾ ಇಲ್ಲ. ಇವತ್ತು ಖರೀದಿ ಮಾಡಬೇಕೆಂದರೂ ಅಲ್ಲಿ ಮೇವು ಸಿಗುತ್ತಾ ಇಲ್ಲ. ನಿನ್ನೆ ಆ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಅಲ್ಲಿ ಮೇವು ಇಲ್ಲವೆಂದು ದನಕರುಗಳು ಮತ್ತೆ ಕಸಾಯಿಖಾನೆಗೆ ಹೋಗುವಂಥದ್ದು ಆಗುತ್ತದೆ. ಇಂತಹ ಸಮಯದಲ್ಲಿ ಏನಾದರೂ ವಿಶೇಷವಾದ ವ್ಯವಸ್ಥೆ ಮಾಡಿ ಉಚಿತವಾಗಿ ಮೇವನ್ನು ಸರಬರಾಜು ಮಾಡುವಂಥಾದ್ದು ಆಗಬೇಕು. ಏಕೆಂದರೆ, ಸಧ್ಯಕ್ಕೆ ದನಕರುಗಳಿಗೆ ಅನುಕೂಲವಾಗಬೇಕಾಗಿದೆ. ರೈತರು ತರುವ ಮೇವಿನ ಸಾಗಾಣಿಕೆಯನ್ನು ಉಚಿತವಾಗಿ ಮಾಡುತ್ತೀರಿ. ಆದರೆ, ಈ ಮೇವನ್ನೂ ಉಚಿತವಾಗಿ ಕೊಡುವಂಥಾದ್ದು ಆದಾಗ ರೈತರಿಗೆ ಮತ್ತು ದನಕರುಗಳಿಗೆ ಬಹಳ ಚಲೋ ಆಗುತ್ತದೆ.

ಶ್ರೀ ಎಸ್.ಎಂ.ಕೃಷ್ಣ: ನನ್ನ ಗಮನಕ್ಕೆ ಬಂದಿರುವ ಹಾಗೆ, ಹಿಂದೆ ಯಾವಾಗಲೂ

ಕೂಡ ಉಚಿತವಾಗಿ ಮೇವನ್ನು ಕೊಡತಕ್ಕ ವ್ಯವಸ್ಥೆ ಜಾರಿಗೆ ಬಂದಿರಲಿಲ್ಲ.

ಶ್ರೀ ಸಿ. ಬೈರೇಗೌಡ: ೧೯೮೫-೮೬ರಲ್ಲಿ ಇದೇ ಪರಿಸ್ಥಿತಿ ಉಂಟಾಗಿತ್ತು. ಆಗ ನಮ್ಮ ಸರ್ಕಾರ ಅಧಿಕಾರದಲ್ಲಿ ಇತ್ತು. ಆಗ ನಾನೂ ಸಹ ಮಂತ್ರಿಮಂಡಲದಲ್ಲಿ ಇದ್ದೆ. ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ ಗೋಶಾಲೆಗಳನ್ನು ವ್ಯವಸ್ಥೆ ಮಾಡುವಂಥ ಕೆಲಸ ಮಾಡಿದ್ದೆವು. ಆಗ ನೀರು, ಮೇವು ಎಲ್ಲವನ್ನೂ ಕೂಡ ಉಚಿತವಾಗಿ ಕೊಟ್ಟಿರತಕ್ಕಂಥ ಉದಾಹರಣೆ ಇದೆ. ೫-೬ ಕಡೆಗಳಲ್ಲಿ ಗೋಶಾಲೆಗಳನ್ನು ತೆರೆದಿದ್ದೆವು. ದಯಪಿಟ್ಟು ನೀವು ದಾಖಲೆಗಳನ್ನು ಪರಿಶೀಲನೆ ಮಾಡಿ, ಈ ವ್ಯವಸ್ಥೆ ಹಿಂದೆ ಆಗಿದೆ. ನಾವೇ ಮಾಡಿಸಿರತಕ್ಕಂಥ ನನ್ನ ಅನುಭವವನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಅದನ್ನು ನಾನು ಪರೀಶೀಲನೆ ಮಾಡುತ್ತೇನೆ. ಸ್ಮಾಲ್ ಇಂಡಸ್ಟ್ರೀಸ್‌ಗೆ ಸಬ್ಸಿಡಿ ಕೊಡತಕ್ಕ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ನಾವು ಪ್ರಯತ್ನಗಳನ್ನು ಮಾಡುತ್ತಾ ಇದ್ದೇವೆ. ಇದರಲ್ಲಿ ನಾವು ಸಫಲರಾಗಲಿಲ್ಲವೆನ್ನತಕ್ಕ ಮಾತನ್ನು ನಾನು ಒಪ್ಪುತ್ತೇನೆ. ಕರ್ನಾಟಕ ಸ್ಟೇಟ್ ಫೈನಾನ್ಷಿಯಲ್ ಕಾರ್ಪೊರೇಷನ್ನಿನವರು ಬಾಂಡ್ಸ್ ಮೂಲಕ ಹಣವನ್ನು ಎತ್ತಿ ಹಲವಾರು ಹಂತಗಳಲ್ಲಿ ಏನು ಅಕ್ಯುಮಲೇಟ್ ಆಗಿದೆ ಅರಿಯರ್ಸ್, ಈ ಸಬ್ಸಿಡಿ ಕೊಡಬೇಕಾಗಿರತಕ್ಕಂಥಾದ್ದನ್ನು ವಿತರಿಸಲು ಏರ್ಪಾಡುಗಳನ್ನು ಮಾಡುತ್ತಾ ಇದ್ದಾರೆ. ಅದು ದೊಡ್ಡ ಪ್ರಮಾಣದಲ್ಲಿ ಎಂದರೆ ಸುಮಾರು ೩೦೦ ಕೋಟಿಯಷ್ಟಿದೆ. ಇದು ಕಳೆದ ಕೆಲವಾರು ವರ್ಷಗಳಿಂದ ಕ್ರೋಢೀಕೃತವಾಗಿರತಕ್ಕಂಥ ಮೊತ್ತ. ಆದ್ದರಿಂದ, ಇದನ್ನು ಒಂದೇಸಾರಿ ನಾವು ನಿಭಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಾಂಡ್ ಹಣದಿಂದ ಎಷ್ಟು ಎತ್ತುವುದಕ್ಕೆ ಸಾಧ್ಯವಾಗುತ್ತದೆ, ಅದರ ಮೇಲೆ ನಾವು ಈ ಸಣ್ಣ ಕೈಗಾರಿಕೆಗಳಿಗೆ ಈ ಸಬ್ಸಿಡಿಯನ್ನು ವಿತರಣೆ ಮಾಡಲಿಕ್ಕೆ ಪ್ರಯತ್ನಗಳನ್ನು ಮಾಡುತ್ತೇನೆ. ತಾವು ಇತರ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ವರಾಹಿ ವಿಚಾರವನ್ನು ಪ್ರಸ್ತಾಪ ಮಾಡಿದಿರಿ, ಮಾನ್ಯ ಶ್ರೀನಿವಾಸ ಶೆಟ್ಟರು ಅದನ್ನು ಮುಂದುವರಿಸಿದರು. ಅದರ ಬಗ್ಗೆ ಭ್ರಷ್ಟಾಚಾರವಾಗಿದೆ, ತನಿಖೆ ಮಾಡಬೇಕೆಂದು ಹೇಳಿದ್ದಾರೆ. ಭ್ರಷ್ಟಾಚಾರ ಆಗಿದ್ದರೆ ಅಗತ್ಯವಾಗಿ ತನಿಖೆ ಮಾಡುತ್ತೇವೆ. ಈ ಸಾರಿ ಈ ವರಾಹಿಗೆ ಒಂದಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದು ೧೪೦ ಲಕ್ಷ ರೂಪಾಯಿಗಳು. ಈಗ ೧೦೦ ಲಕ್ಷ ರೂಪಾಯಿಗಳನ್ನು ಒಂದು ಅಡಿಷನಾಲಿಟಿಯಾಗಿ ಅದಕ್ಕೆ ಒದಗಿಸಿಕೊಟ್ಟಿರತಕ್ಕಂಥ ಉದ್ದೇಶವೇನೆಂದರೆ ಈ ಕೆಲಸವನ್ನು ತುರ್ತಾಗಿ ಮಾಡಬೇಕೆಂಬ ಸದುದ್ದೇಶದಿಂದ ಆದರೆ ಅಲ್ಲಿ ಏನಾದರೂ ಕೊರತೆಗಳು ಇದ್ದರೆ, ಆ ಕೊರತೆಗಳ ಬಗ್ಗೆ ನಾವು ಗಮನಹರಿಸುತ್ತೇವೆ. ಮಾನ್ಯ ಸಿಂಧ್ಯಾರವರು ಕೆಲವು ವಿಚಾರಗಳನ್ನು ಅವರು ಸದನದ

ಮುಂದೆ ಇಟ್ಟಿದ್ದಾರೆ. ನಾನು ಒಪ್ಪುತ್ತೇನೆ. ಈ ಪೂರಕ ಬೇಡಿಕೆಗಳನ್ನು ತರತಕ್ಕಂಥಾದ್ದು ಅಷ್ಟು ಆರೋಗ್ಯಕರವಾದಂಥ ಬೆಳವಣಿಗೆ ಅಲ್ಲ ಎಂದು. ಫೈನಾನ್ಷಿಯಲ್ ಡಿಸಿಪ್ಲಿನ್ ಇರೋಡ್ ಆಗಲಿಕ್ಕೆ ಈ ಪೂರಕ ಬೇಡಿಕೆಗಳು ಬಹಳ ಮಟ್ಟಿಗೆ ಕಾರಣವಾಗುತ್ತದೆ ಎನ್ನತಕ್ಕಂಥಾದ್ದನ್ನು ನಾನೂ ಒಬ್ಬ ಹಣಕಾಸಿನ ವಿದ್ಯಾರ್ಥಿಯಾಗಿ ಅಭ್ಯಾಸ ಮಾಡಿ ಅದರ ಅನುಭವ ಮಾಡಿಕೊಂಡಿದ್ದೇನೆ. ಆದರೆ ನಾವು ಸಾಂದರ್ಭಿಕ ಒತ್ತಡಗಳಿಗೆ ಮಣಿದು ಈ ಪೂರಕ ಬೇಡಿಕೆಗಳನ್ನು ಸದನದ ಮುಂದೆ ತರಬೇಕಾಗುತ್ತದೆ. ಇದು ಯಾವ ಸರ್ಕಾರವನ್ನೂ ಹೊರತುಪಡಿಸಿಲ್ಲ. ಇದು ಎಲ್ಲಾ ಸರ್ಕಾರಗಳಿಗೂ ಬರತಕ್ಕಂಥ ಒಂದು ದೋಷ ಇದು ಎಂದು ನಾನು ಒಪ್ಪಿ, ಈ ಪೂರಕ ಬೇಡಿಕೆಗಳ ಮೊಬಲಗು ಕಡಿಮೆ ಇರಬೇಕು, ಇದು ಅಷ್ಟು ದೊಡ್ಡ ಪ್ರಮಾಣದಲ್ಲಿ ಇರಬಾರದು ಹಾಗೆ ಎಂದು ಹೇಳಿದರೂ ಕೂಡ ಕಳೆದ ಮೂರು ವರ್ಷಗಳ ಆ್ಯವರೇಜ್‌ನ್ನು ನಾವು ಗಮನಿಸಿದರೆ, ಅದು ಯಾವ ಪ್ರಮಾಣದಲ್ಲಿ ಇಳಿಯುತ್ತಿದೆ ಎನ್ನತಕ್ಕಂಥಾದ್ದನ್ನು ನೋಡಿದರೆ, ೧೯೯೯-೨೦೦೦ ಇಸವಿಯಲ್ಲಿ ೧೩೭೫ ಕೋಟಿ ರೂಪಾಯಿಗಳು, ೨೦೦೦-೨೦೦೧ನೇ ಇಸವಿಯಲ್ಲಿ ೧೩೬೪ ಕೋಟಿ ರೂಪಾಯಿಗಳು, ಈ ಎರಡೂ ಸೇರಿ ಈ ಸಪ್ಲಿಮೆಂಟರಿ ಎಸ್ಟಿಮೇಟ್ ೨೬೭೮ ಕೋಟಿ ರೂಪಾಯಿಗಳು. ನಾವು ಒಟ್ಟಾರೆ ಪರ್ಸೆಂಟೇಜ್ ಡಿಮ್ಯಾಂಡ್ ನೋಡಿದಾಗ ಅದು ೨.೧೯ ಪರ್ಸೆಂಟ್ ಆಗುತ್ತದೆ. ಅದರ ಫೈನಲ್ ಅಸ್‌ಪೆಕ್ಟ್ಸ್‌ಗೆ ಹೋಗಲಿಕ್ಕೆ ಧೈರ್ಯ ಮಾಡದೆ ಒಟ್ಟಾರೆ ಇಷ್ಟನ್ನು ನಾನು ಒಪ್ಪುತ್ತೇನೆ. ಈ ಒಂದು ಬೆಳವಣಿಗೆಗೆ ನಾವು ಕಡಿವಾಣ ಹಾಕಬೇಕು, ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಾನು ಇದರ ಬಗ್ಗೆ ಸಂಬಂಧಪಟ್ಟವರಿಗೆ ಸೂಚನೆಯನ್ನು ಕೂಡ ಕೊಡುತ್ತೇನೆ. ಒಪೆಕ್ ಆಸ್ಪತ್ರೆ, ರಾಯಚೂರು ವಿಚಾರದಲ್ಲಿ ತಾವು ಪ್ರಸ್ತಾಪ ಮಾಡಿದಿರಿ. ಈಗಾಗಲೇ ಮಂತ್ರಿ ಸಂಪುಟ ಒಂದು ನಿರ್ಧಾರವನ್ನು ಮಾಡಿದೆ, ರಾಯಚೂರಿಗೆ ಯಾವ ಎಕ್ಸ್‌ಪರ್ಟ್ಸ್ ಕೂಡ ಹೋಗಲಿಕ್ಕೆ ತಯಾರಿಲ್ಲ. ಒಕೆಂದರೆ ಅದು ಹೃದಯ ರೋಗ ಮತ್ತು ಮೆದುಳು ರೋಗಕ್ಕೆ ಸಂಬಂಧಿಸಿದ ಸ್ಪೆಷಾಲಿಟಿ ಆಸ್ಪತ್ರೆ. ಆದ್ದರಿಂದ ರಾಯಚೂರಿಗೆ ನಾವು ಇಲ್ಲಿಂದ ಪೋಸ್ಟ್ ಮಾಡಿದರೂ ಹೋಗುವುದಿಲ್ಲ. ಹೊಸದಾಗಿ ರೆಕ್ರೂಟ್‌ಮೆಂಟ್ ಮಾಡಿದರೂ ಕೂಡ ಈ ಸ್ಪೆಷಲಿಸ್ಟ್‌ಗಳಿಗೆ ನಾವು ಕೊಡತಕ್ಕಂಥ ಸಂಬಳಕ್ಕೆ ಯಾರೂ ಬರುವುದಿಲ್ಲ. ಆದ್ದರಿಂದ ನಾವು ಕೇಂದ್ರ ಸರ್ಕಾರದ ಮಾದರಿಯನ್ನು ಅನುಸರಿಸಿ ಈಗಾಗಲೇ ಟೆಂಡರ್ ಕರೆದಿದ್ದೆವು. ಆ ಆಸ್ಪತ್ರೆಯನ್ನು ಖಾಸಗಿಯವರಿಗೆ ವಹಿಸಿ ಆ ಟೆಂಡರ್ ಷರತ್ತುಗಳ ಪ್ರಕಾರ ಶೇಕಡ ೪೦ರಷ್ಟು ಬಡ ರೋಗಿಗಳಿಗೆ ಉಚಿತವಾದಂತಹ ಚಿಕಿತ್ಸೆಯ ಅವಕಾಶಗಳನ್ನು ಕೊಡತಕ್ಕಂಥಾದ್ದು ಒಂದು ಪ್ರಧಾನವಾದ ಕಂಡೀಷನ್. ಈಗ ಅವರು ಈ ಕಂಡೀಷನ್‌ಗೆ ಒಪ್ಪಿ ಅಪೋಲೋ ಆಸ್ಪತ್ರೆಯವರು ಮುಂದೆ ಬಂದಿದ್ದಾರೆ. ಮೊನ್ನೆ ತಾನೆ ಈ ಬಗ್ಗೆ ನಾವು ಸಚಿವ ಸಂಪುಟದಲ್ಲಿ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಅತಿ ಶೀಘ್ರದಲ್ಲಿಯೇ ಅಪೋಲೋ ಆಸ್ಪತ್ರೆಯವರು ಈ ಹೈಟೆಕ್ ಆಸ್ಪತ್ರೆಯನ್ನು ನಡೆಸತಕ್ಕಂಥ

ಏರ್ಪಾಡು ಮಾಡುತ್ತಾರೆ. ಅವರಿಗೆ ಇದರಿಂದ ಒಂದು ಅಡ್ವಾನ್‌ಟೇಜ್ ಇದೆ. ಆ ಅಡ್ವಾನ್‌ಟೇಜ್ ಏನು ಎಂದು ಹೇಳಿದರೆ ಅವರು ಹೈದರಾಬಾದ್‌ನಲ್ಲಿ ಈಗಾಗಲೇ ಒಂದು ದೊಡ್ಡ ಆಸ್ಪತ್ರೆಯನ್ನು ನಡೆಸುತ್ತಿದ್ದಾರೆ. ಹೈದರಾಬಾದ್‌ನಿಂದ ಅವರಿಗೆ ಮೂರು ಗಂಟೆಗಳ ಪ್ರಯಾಣ. ಆದ್ದರಿಂದ ಅವರು ಪ್ರತಿ ಮೂರು ತಿಂಗಳಿಗೆ ಒಂದು ಸಾರಿ ಅವರ ಎಕ್ಸ್‌ಪರ್ಟ್ಸ್‌ನ್ನು ಅಲ್ಲಿ ಸ್ಟೇಷನ್ ಮಾಡಿ ನಮ್ಮ ರೋಗಿಗಳ ತಪಾಸಣೆ ಮಾಡತಕ್ಕಂಥಾದ್ದು ಮತ್ತು ಅವರ ಆರೋಗ್ಯವನ್ನು ವಿಚಾರಣೆ ಮಾಡಿಕೊಳ್ಳತಕ್ಕಂಥ ಅನುಕೂಲತೆ ಅವರಿಂದ ಸಾಧ್ಯವಾಗಬಹುದು ಎಂದು ಹೇಳಿ ನಾವು ಈ ಒಂದು ಟೈ-ಅಫ್‌ಗೆ ಒಪ್ಪಿದ್ದೇವೆ. ಅತಿ ಶೀಘ್ರದಲ್ಲಿಯೇ ಅದು ಜಾರಿಗೆ ಬರುತ್ತದೆ. ಇನ್ನು ಬಳ್ಳಾರಿ ಪ್ಯಾಕೇಜ್ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಬಳ್ಳಾರಿ ಪ್ಯಾಕೇಜ್‌ನಲ್ಲಿ ನಾನಾ ಇಲಾಖೆಗಳು ಅವರ ವರ್ಷಂಪ್ರತಿ ಖರ್ಚು ಏನು ಮಾಡುತ್ತಾರೆ ಅವುಗಳೆಲ್ಲಕ್ಕೂ ಕೂಡ ನಾವು ಅನುದಾನವನ್ನು ಕೊಡುತ್ತಿದ್ದೇವೆ. ಆದ್ದರಿಂದ ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿಗೆ ಅಂದರೆ ಬಳ್ಳಾರಿಗೆ ಒಂದು ವಿಶೇಷ ಡಿಸ್‌ಪೆನ್‌ಸೇಶನ್‌ಗೆ ನಾವು ಪ್ರಯತ್ನ ಮಾಡಿದ್ದೇವೆ. ಜಯದೇವ ಆಸ್ಪತ್ರೆ ವಿಚಾರದಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ, ಅದು ಬಹಳ ಮಹತ್ವವಾದ ವಿಚಾರ. ಕಳೆದ ೧೦ ದಿವಸಗಳ ಹಿಂದೆ ಒಂದು ಮೀಟಿಂಗ್ ನಡೆಯಿತು. ಅದು ಗೌರ್ನಿಂಗ್ ಕೌನ್ಸಿಲ್ ಮೀಟಿಂಗ್. ಈ ತಿಂಗಳಲ್ಲಿ ಆ ಹೊಸ ಸಂಕೀರ್ಣವನ್ನು ನಾವು ವಿಧಿವತ್ತಾಗಿ ಪ್ರಾರಂಭ ಮಾಡುತ್ತೇವೆ. ಅದಕ್ಕೆ ಅಲ್ಲಿ ಬೇಕಾದಂತಹ ಎಲ್ಲಾ ಸಲಕರಣೆಗಳನ್ನು ಜೋಡಿಸಿದ್ದು ಆಗಿದೆ, ಅದನ್ನು ಈ ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ. ಗದಗ್ ಕೋ-ಆಪರೇಟಿವ್ ಟೆಕ್ಸ್‌ಟೈಲ್ ಮಿಲ್ ವಿಚಾರವನ್ನು ತಾವು ವಿಶೇಷವಾಗಿ ನಮೂದಿಸಿದ್ದೀರಿ. ಈಗಾಗಲೇ ೪೪೮ ಲಕ್ಷ ರೂಪಾಯಿಗಳನ್ನು ಅವರಿಗೆ ನಾವು ಕೊಟ್ಟಿದ್ದೇವೆ ಉಳಿದಿರುವ ಹಣವನ್ನು ಅವರಿಗೆ ಕೊಡುವುದರ ಮೂಲಕ ನಾವು ಹಿಂದೆ ಏನು ಹಣವನ್ನು ಕೊಟ್ಟಿದ್ದೇವೆ ಅದು ಸರಿಯಾದ ರೀತಿಯಲ್ಲಿ ಖರ್ಚಾಗಲಿಕ್ಕೆ ಅವಕಾಶವನ್ನು ಮಾಡುತ್ತಿದ್ದೇವೆ. ಲೋಕಾಯುಕ್ತರ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಇದು ಬಹಳ ಪ್ರಾಮುಖ್ಯವಾದ ವಿಚಾರ. ನಮ್ಮ ಗೌರ್‌ನೆನ್ಸ್ ಸರಿಯಾದ ರೀತಿಯಲ್ಲಿ ಹೋಗಬೇಕಾಗಿದ್ದರೆ ಈಗಾಗಲೇ ನಾವು ನಮ್ಮ ನೀತಿ ಸೂತ್ರವನ್ನು ರೂಪಿಸಿದ ರೀತಿಯಲ್ಲಿ ಈ ಭ್ರಷ್ಟಾಚಾರದ ಮೇಲೆ ನಾವು ನಿಯಂತ್ರಣವನ್ನು ಸ್ಥಾಪನೆ ಮಾಡಬೇಕಾಗಿರತಕ್ಕಂಥಾದ್ದಕ್ಕೆ ಒಂದು ಉತ್ತಮವಾದ ಉಪಕರಣ ಲೋಕಾಯುಕ್ತ ಎನ್ನತಕ್ಕಂಥಾದ್ದನ್ನು ನಾವು ಒಪ್ಪಿರತಕ್ಕಂಥ ವಿಚಾರ. ಲೋಕಾಯುಕ್ತದವರು ಆ ಸಂಸ್ಥೆಯನ್ನು ಇನ್ನೂ ಅರ್ಥಪೂರ್ಣವಾಗಿ ಮಾಡಬೇಕೆನ್ನುವ ದೃಷ್ಟಿಯಿಂದ ಹಲವಾರು ಬದಲಾವಣೆಗಳಿಗೆ ರಾಜ್ಯಸರ್ಕಾರಕ್ಕೆ ಸೂಚನೆ ಮಾಡಿದ್ದಾರೆ. ಅವರು ಸೂಚಿಸಿರತಕ್ಕಂಥ ಬದಲಾವಣೆಗಳನ್ನು ಯಾವ ರೀತಿ ನಮ್ಮ ಲೋಕಾಯುಕ್ತ ಮಸೂದೆಯಲ್ಲಿ ನಾವು ಅಳವಡಿಸಬಹುದು ಎನ್ನತಕ್ಕಂಥಾದ್ದನ್ನು ಕಾನೂನು ಇಲಾಖೆಯವರು ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅವರು ತಮ್ಮ ಅಧ್ಯಯನ

ಮುಗಿಸಿದ ಮೇಲೆ ಅದು ಸರ್ಕಾರದ ಕನ್ಸಿಡರೇಷನ್‌ಗೆ ಬರುತ್ತದೆ. ಆಗ ಸರ್ಕಾರ ಒಂದು ಯೋಗ್ಯವಾದಂತಹ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. ಈ ಸಮಯದಲ್ಲಿ ನಾನು ಪುನರ್ ಪ್ರತಿಪಾದನೆ ಮಾಡತಕ್ಕಂಥ ಒಂದು ಅಂಶವೇನೆಂದರೆ, ಸರ್ಕಾರ ಆ ಸಂಸ್ಥೆಗೆ ಮತ್ತು ಲೋಕಾಯುಕ್ತ ಅವರಿಗೆ ಬಹಳ ಹೆಚ್ಚಿನ ಆದ್ಯತೆ ಮತ್ತು ಪ್ರಾಧಾನ್ಯತೆ ಕೊಡುತ್ತದೆ. ಅವರು ಯಶಸ್ವಿಯಾಗಿ ಕೆಲಸ ಮಾಡುವ ಮೂಲಕ ನಮ್ಮ ಆಡಳಿತ ಯಂತ್ರದಲ್ಲಿ ಸಾಕಾದಷ್ಟು ಚುರುಕು ಮತ್ತು ಪಾರದರ್ಶಕತೆ ಮತ್ತು ಅಕೌಂಟಬಿಲಿಟಿ ಎಂದು ತಾವು ಏನು ಹೇಳಿದಿರಿ ಆ ಅಕೌಂಟಬಿಲಿಟಿಯನ್ನು ನಮ್ಮ ಆಡಳಿತ ಯಂತ್ರದಲ್ಲಿ ಪ್ರತಿಬಿಂಬಿಸುವ ರೀತಿಯಲ್ಲಿ ನಾವು ಲೋಕಾಯುಕ್ತ ಸಂಸ್ಥೆಯನ್ನು ಉಪಯೋಗಿಸಿಕೊಳ್ಳಬೇಕು ಎನ್ನುವಂತಹ ಒಂದು ಒಟ್ಟಾರೆ ಕಲ್ಪನೆ ಇದೆ. ಆ ಒಟ್ಟಾರೆ ಕಲ್ಪನೆಗೆ ಈ ಸರ್ಕಾರ ಬದ್ಧವಾಗಿದೆ ಎನ್ನತಕ್ಕಂಥಾದ್ದನ್ನು ನಾನು ಈ ಸಮಯದಲ್ಲಿ ಹೇಳುತ್ತೇನೆ.

೧.೧೦ ಪಿಎಂ

ಗುಜರಾತ್ ಮತ್ತು ಒರಿಸ್ಸಾಗಳಿಗೆ ಎಷ್ಟು ಖರ್ಚಾಗಿದೆಯೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಒರಿಸ್ಸಾಗೆ ನಮ್ಮ ಕೈಗಾರಿಕಾ ಸಚಿವರಾಗಿರುವ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ನಾವು ಒಂದು ಸಮಿತಿಯನ್ನು ಮಾಡಿದ್ದೆವು. ಆ ಸಮಿತಿ ಈಗಾಗಲೇ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಶಾಲಾ ಕಟ್ಟಡಗಳನ್ನು ಕಟ್ಟಿಸಿದೆ. ಇನ್ನೂ ೧೦.೮೪ ಕೋಟಿ ರೂಪಾಯಿಗಳು ನಮ್ಮಲ್ಲಿದೆ, ಆ ಶಾಲಾ ಕಟ್ಟಡಗಳ ಕೆಲಸ ಮುಂದುವರೆಯುತ್ತಿದೆ. ಇದಕ್ಕೆ ಸಂಬಂಧಪಟ್ಟ ವಿವರಗಳನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಹಾಗೆಯೇ ಗುಜರಾತಿಗೆ ೩೩ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಇದುವರೆಗೆ ಬಂದಿದೆ. ನಾವು ಗುಜರಾತ್ ಸರ್ಕಾರದವರ ಜೊತೆಯಲ್ಲಿ ಮಾತುಕತೆ ನಡೆಸಿ ಶಾಲಾ ಕಟ್ಟಡಗಳನ್ನು ಅಲ್ಲಿಯೂ ಕೂಡ ಕೆಲವು ಸೀಮಿತ ಪ್ರದೇಶದಲ್ಲಿ ಕಟ್ಟಬೇಕೆಂದು ಚೀಫ್ ಸೆಕ್ರೆಟರಿಯವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿದ್ದೇವೆ. ಆ ಸಮಿತಿ ಗುಜರಾತ್ ಸರ್ಕಾರದ ಜೊತೆಯಲ್ಲಿ ಸಮಾಲೋಚನೆಗಳನ್ನು ಮುಂದುವರೆಸುತ್ತಾ ಇದೆ ಎಂದು ಈ ಸದನಕ್ಕೆ ತಿಳಿಸುತ್ತಿದ್ದೇನೆ. ಕುದುರೆಮುಖದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಬಹಳ ಗಂಭೀರವಾಗಿ ಜವಾಬ್ದಾರಿಯುತವಾಗಿ ಯೋಚನೆ ಮಾಡಿದೆ. ಅದರ ಸಾಧಕಬಾಧಕಗಳೆಲ್ಲವನ್ನೂ ನಾವು ಕೇಂದ್ರಸರ್ಕಾರದ ಜೊತೆಯಲ್ಲಿ ಸಮಾಲೋಚಿಸಿ ಅನಂತರ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಈ ಮಧ್ಯೆ ಸುಪ್ರೀಂ ಕೋರ್ಟಿನಲ್ಲಿ ಕೂಡ ಪರಿಸರವಾದಿಗಳು ಒಂದು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯನ್ನು ಹಾಕಿರುವುದರಿಂದ ಅವರು ಕೊಡುವ ನಿರ್ದೇಶನವನ್ನು ನಾವು ಗಮನದಲ್ಲಿಟ್ಟುಕೊಂಡು ಅಂತಿಮವಾಗಿ ತೀರ್ಮಾನ

ಮಾಡಬೇಕಾಗಿದೆ. ಆ ಕಾಲದಲ್ಲಿ ಒಂದು ವಿಚಾರವನ್ನು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದೇವೆ. ಆ ವಿಚಾರವೇನೆಂದರೆ, ಬಹಳ ಹೆಚ್ಚು ಕಾಲ ಈ ಗಣಿಗಾರಿಕೆಯನ್ನು ಮುಂದುವರೆಸಲು ಸಾಧ್ಯವಾಗುವುದಿಲ್ಲ. ಈಗಾಗಲೇ ಅದನ್ನು ನಾನು ಆ ಚೇರ್ಮನ್, ಮ್ಯಾನೇಜಿಂಗ್ ಡೈರೆಕ್ಟರ್‌ರಿಗೆ ಸೂಕ್ಷ್ಮವಾಗಿ ತಿಳಿಸಿದ್ದೇನೆ. ಈ ಕುದುರೆಮುಖ ಸಂಸ್ಥೆ ಬೇರೆ ಪರ್ಯಾಯವಾದ ಸ್ಥಳವನ್ನು ಹುಡುಕಿಕೊಳ್ಳುವ ಕಾಲ ಈಗ ಬಂದಿದೆ ಎಂದು. ಅದರ ಮೇಲೆ ದಿಢೀರನೆ ಕೇಂದ್ರಸರ್ಕಾರವಾಗಲೀ, ರಾಜ್ಯ ಸರ್ಕಾರವೇ ಆಗಲಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ. ಈ ದೇಶದ ಆರೂವರೆ ಸಾವಿರ ಕೋಟಿ ರೂಪಾಯಿಗಳು ಅಲ್ಲಿಗೆ ಬಂಡವಾಳ ರೂಪದಲ್ಲಿ ಹರಿದು ಬಂದಿದೆ. ಎರಡೂವರೆ, ಮೂರು ಸಾವಿರ ಕುಟುಂಬಗಳು ಅಲ್ಲಿ ಕೆಲಸ ಮಾಡುತ್ತಿವೆ ಮತ್ತು ಸುಮಾರು ೧೦ ಸಾವಿರ ಕುಟುಂಬಗಳು ಪರೋಕ್ಷವಾಗಿ ಅದರ ಮೇಲೆ ತನ್ನ ಜೀವನವನ್ನು ಅವಲಂಬಿಸಿವೆ. ಇದರ ಜೊತೆಜೊತೆಗೆ ನವಮಂಗಳೂರು ಬಂದರೂ ಕೂಡ ಈ ಕುದುರೆಮುಖದ ಮೇಲೆ ಶೇಕಡ ೮೦ರಷ್ಟು ಅವಲಂಬಿಸಿದೆ. ಆದ್ದರಿಂದ ಒಟ್ಟಾರೆ ಆ ಭಾಗದ ಎಕಾನಿಮಿಕ್ ಆ್ಯಕ್ಟಿವಿಟಿಗೆ ಬಹಳ ಮಟ್ಟಿಗೆ ಪೂರಕವಾಗಿರುವ ವ್ಯವಸ್ಥೆ. ಈ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಕಾಲದಲ್ಲಿ ನಾವು ಇವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮುಂದುವರೆಯಬೇಕು. ಅಂದ ಮಾತ್ರಕ್ಕೆ ನಾವು ಪರಿಸರವನ್ನು ಬಿಟ್ಟುಕೊಡುತ್ತಿದ್ದೇವೆ ಎಂದು ಅಲ್ಲ. ನಮ್ಮ ದೃಷ್ಟಿಕೋನ ಪರಿಸರ ಸೆಕ್ಯುರಿಟಿ ಏನಿದೆ, ಎನ್‌ವಿರಾನ್‌ಮೆಂಟಲ್ ಸೆಕ್ಯುರಿಟಿ, ಅದರ ಬಗ್ಗೆ ನಮ್ಮಲ್ಲಿ ಸಾಕಾದಷ್ಟು ಆಸಕ್ತಿಯಿದೆ, ಆಸ್ಥೆ ಇದೆ, ಶ್ರದ್ಧೆ ಇದೆ. ಆದ್ದರಿಂದ ಆ ಪರಿಹರವನ್ನು ರಕ್ಷಣೆ ಮಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಹಾಗೆಯೇ ಆ ಭಾಗದ ಆರ್ಥಿಕ ಚಟುವಟಿಕೆಗಳಿಗೆ ಗ್ರಹಣ ಹಿಡಿಯುವಂತಹ ಯಾವುದೇ ಒಂದು ಬೆಳವಣಿಗೆಯನ್ನೂ ನಾವು ದಿಢೀರನೆ ಪ್ರಯತ್ನ ಮಾಡತಕ್ಕದ್ದಲ್ಲ. ಆದ್ದರಿಂದ ಇವೆಲ್ಲವನ್ನೂ ನಾವು ಕೇಂದ್ರಸರ್ಕಾರದ ಜೊತೆಯಲ್ಲಿ ಯೋಚನೆ ಮಾಡಿ, ಪರಿಸರವಾದಿಗಳ ಜೊತೆಯಲ್ಲಿ ಸಹ ನಮ್ಮ ಡಯಲಾಗನ್ನು ಮುಂದುವರೆಸಿ ಎಲ್ಲರಿಗೂ ಸಮನ್ವಯವಾಗುವಂತಹ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿದೆ. ಆದರೆ ಯಾವುದೇ ಕಾರಣಕ್ಕೆ ನಾವು ಇನ್ನೂ ಹೆಚ್ಚಿನ ಭಾಗವನ್ನು ಗಣಿಗಾರಿಕೆ ಕೆಲಸ ಮಾಡಲು ಈಗಾಗಲೇ ಅವಕಾಶವನ್ನು ಅವರಿಗೆ ನಿರಾಕರಿಸಿದ್ದೇವೆ. ಅದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಸದನಕ್ಕೆ ನಾನು ತಿಳಿಸುತ್ತೇನೆ. ಇನ್ನು ಟ್ರೆಜರಿ ವಿಚಾರದಲ್ಲಿ ಮಾನ್ಯ ಸಿಂಧ್ಯಾರವರು ಪ್ರಸ್ತಾಪಿಸಿದ್ದಾರೆ. ಯಾವ ಅಧಿಕಾರಿಗಳು ಟ್ರೆಜರಿ ಅವ್ಯವಹಾರದಲ್ಲಿ ಕಾರಣಕರ್ತರಾಗಿದ್ದರೋ ಅವರಲ್ಲಿ ಕೆಲವರನ್ನು ನಾವು ಸಸ್ಪೆಂಡ್ ಮಾಡಿದ್ದೇವೆ. ಮತ್ತು ಅವರ ಮೇಲೆ ತನಿಖೆ ನಡೆಯುತ್ತಿದೆ. ಕೆಲವು ವಿಚಾರಣೆಗಳು ಅಂತಿಮ ಘಟ್ಟವನ್ನು ಮುಟ್ಟಿದೆ ಎಂದು ತಮಗೆ ತಿಳಿಸುತ್ತಿದ್ದೇನೆ. ಬೆಂಗಳೂರು ಕಾರ್ಪೊರೇಷನ್‌ಗೆ ನಾವು ಕೊಟ್ಟಿರುವ ಅನುದಾನದ ಬಗ್ಗೆ ಒಂದು ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಇದನ್ನು ನಿನ್ನೆ ನಾನು

ಸ್ಪಷ್ಟಪಡಿಸಿದ್ದೇನೆ. ಸರ್ಕಾರ ಆಗಿಂದಾಗ್ಗೆ ಮಹಾನಗರಪಾಲಿಕೆಗೆ ಕೊಡುವ ಅನುದಾನದ ವಿಷಯ ಏನಿದೆ ಇದನ್ನು ಕೇವಲ ಬೆಂಗಳೂರಿಗೆ ಕೊಡಬೇಕು ಎಂದು ಅಲ್ಲ, ಎಲ್ಲಾ ನಗರಪಾಲಿಕೆಗಳಿಗೆ ಎಲ್ಲಾ ಮುನಿಸಿಪಾಲಿಟಿಗಳಿಗೆ ನಮ್ಮ ಸಂಪನ್ಮೂಲಗಳು ಅವಕಾಶ ಕೊಡುವುದಾದರೆ ಅವುಗಳನ್ನು ವಿಸ್ತರಿಸಬೇಕೆಂದು ಒಂದು ನೀತಿಯನ್ನು ನಾವು ರೂಪಿಸಿದ್ದೇವೆ. ಆದ್ದರಿಂದ ಹುಬ್ಬಳ್ಳಿ-ಧಾರವಾಡಕ್ಕೂ ಕೂಡ ಇದೇ ಸವಲತ್ತನ್ನು ನಾವು ಒದಗಿಸಿಕೊಡಲು ಬದ್ಧರಾಗಿದ್ದೇವೆ. ಆದರೆ ಅವುಗಳು ತಮ್ಮ ಸಂಪನ್ಮೂಲ ಮತ್ತು ಅಲ್ಲಿ ನಡೆಯುವಂತಹ ಬೆಳವಣಿಗೆಗಳ ಮೇಲೆ ನಾವು ತೀರ್ಮಾನ ಮಾಡಬೇಕಾಗುತ್ತದೆ. ಡಾ॥ನಂಜುಂಡಪ್ಪನವರ ಸಮಿತಿಯವರು ಈಗಾಗಲೇ ಒಂದು ಇಂಟೀರಿಂ ವರದಿ ಕೊಟ್ಟಿದ್ದಾರೆ. ಅಂತಿಮ ವರದಿಯನ್ನು ಮುಂದಿನ ವರ್ಷದ ಮೊದಲ ಭಾಗದೊಳಗೆ ಕೊಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ. ಅವರ ಶಿಫಾರಸ್‌ಗಳಲ್ಲಿ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಅದರ ಬಿಡುಗಡೆ ವಿಚಾರದಲ್ಲಿ ನಾವು ನಮ್ಮ ಹಣಕಾಸು ಪರಿಸ್ಥಿತಿಯನ್ನು ಅವಲಂಬಿಸಿ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ನಮ್ಮ ರಾಜ್ಯದ ಹಣಕಾಸು ಪರಿಸ್ಥಿತಿ ಬಗ್ಗೆ ಹಲವಾರು ಅಭಿಪ್ರಾಯಗಳನ್ನು ಮಾನ್ಯ ಸದಸ್ಯರು ವ್ಯಕ್ತ ಮಾಡಿದ್ದಾರೆ. ಮಾನ್ಯ ರಾಮಯ್ಯನವರು ಹೇಳಿದಂತೆ ಹಣಕಾಸಿನ ಪರಿಸ್ಥಿತಿ ಅಷ್ಟೇನೂ ಸಮಾಧಾನಕರವಾಗಿಲ್ಲ ಎಂಬುದನ್ನು ನಾವು ಒಪ್ಪಿದ್ದೇವೆ. ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ನಾವು ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳದೇ ಇದ್ದರೆ ಹಣಕಾಸು ಪರಿಸ್ಥಿತಿಯನ್ನು ಸರಿಪಡಿಸಲು ಆಗುವುದಿಲ್ಲ ಎಂದು ನಾವೂ ಆ ಭಾವನೆ ಹೊಂದಿದ್ದೇವೆ. ಅದಕ್ಕೆ ಏನು ಮಾಡಬೇಕೆಂದಿದ್ದೇವೋ ಅಂಥ ಕೆಲವು ನಿರೀಕ್ಷಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ದುರಾದೃಷ್ಟವಶಾತ್ ಪ್ರಕೃತಿ ನಮಗೆ ಅಡ್ಡ ಬರುತ್ತಿದೆ. ಕಳೆದ ವರ್ಷ ನಮ್ಮ ಕೃಷಿ ಕ್ಷೇತ್ರದಲ್ಲಿ ಉದ್ಭವಿಸಿದಂತಹ ಅತಿರೇಕಗಳು ನಮ್ಮ ಯೋಜಿತ ಕ್ರಮಗಳನ್ನು ಮುಂದುವರೆಸಲು ಸಾಧ್ಯವಾಗಲಿಲ್ಲ. ಈ ವರ್ಷ ಮುಂದುವರೆಸೋಣ ಎಂದರೆ ಈ ವರ್ಷದ ಬರ ಪರಿಸ್ಥಿತಿಯಿಂದಾಗಿ ಈ ಕಠಿಣ ನಿರ್ಧಾರಗಳನ್ನು ಮುಂದುವರೆಸಲು ಸಾಧ್ಯವಾಗುವುದಿಲ್ಲ. ಆದರೂ ಎಲ್ಲಾದರೂ ಒಂದು ಕಡೆ ನಾವು ಕಠಿಣ ನಿರ್ಧಾರಗಳನ್ನು ಮಾಡಬೇಕಾಗುತ್ತದೆ. ಆ ಕಠಿಣ ನಿರ್ಧಾರ ಮಾಡಲು ಈ ಸರ್ಕಾರ ಶಕ್ತಿಯುತವಾಗಿದೆ ಎಂದು ಹೇಳಲು ನಾನು ಇಚ್ಛೆಪಡುತ್ತೇನೆ. ಮೊನ್ನೆ ನಾನು ನೀರಾವರಿ ಕ್ಷೇತ್ರದ ಬಗ್ಗೆ ಪ್ರಸ್ತಾಪ ಮಾಡಿದೆ. ಮಾನ್ಯ ರಾಮಯ್ಯನವರು ಹೇಳುತ್ತಾರೆ, ಹಾಗಾದರೆ ರೋಡ್‌ಗೂ ಹಾಕಿ ಎಂದು ರೋಡ್‌ಗೆ ಹಾಕತಕ್ಕಂಥದ್ದು ನೀರಾವರಿಗೆ ಹಾಕತಕ್ಕಂಥದ್ದು ಆ ಹೋಲಿಕೆ ಅಷ್ಟು ಸಮಂಜಸವಲ್ಲವೆಂದು ನಾನಾದರೂ ಭಾವನೆ ಮಾಡುತ್ತೇನೆ. ಏಕೆಂದರೆ ರಸ್ತೆಯಲ್ಲಿ ಎಲ್ಲರೂ ತಿರುಗಾಡುತ್ತಾರೆ. ಆದರೆ ನೀರಾವರಿ ಕ್ಷೇತ್ರಕ್ಕೆ ಸೀಮಿತವಾದಂಥ ಕೆಲವೇ ಕೆಲವು ಪ್ರದೇಶಗಳು ಆ ನೀರಾವರಿ, ಏಕೆಂದರೆ ನಮಗೆ ಹಿಂದಿನವರು ಕೊಟ್ಟಿದ್ದು, ಕೃಷ್ಣರಾಜಸಾಗರವನ್ನು ಈಗಿನ ವಿಶ್ವೇಶ್ವರಯ್ಯ ನಾಲೆಯನ್ನು ನಮ್ಮ ಹಿಂದಿನವರು ಆಗ ಇರ್ವಿನ್ ನಾಲೆ ಎಂದು

ಕರೆಯುತ್ತಿದ್ದರು. ಆ ನಂತರ ವಿಶ್ವೇಶ್ವರಯ್ಯ ನಾಲೆಯಾಯಿತು. ಆಗ ನಮ್ಮ ಹಿರೀಕರು ಅದಕ್ಕೆ ಅಡ್ವಾನ್ಸ್ಡ್ ವಾಟರ್‌ರೇಟ್ ಕಾಂಟ್ರಿಬ್ಯೂಷನ್, ಬೆಟರ್‌ಮೆಂಟ್ ಲೆವಿ ಇವುಗಳನ್ನೆಲ್ಲಾ ಕೊಟ್ಟಿದ್ದರು. ಅದರಿಂದ ಅಂಥ ಉದಾಹರಣೆಗಳು ಇರುವ ಈ ನಾಡಿನಲ್ಲಿ ನಾವು ನೀರಾವರಿ ಕ್ಷೇತ್ರದಲ್ಲಿ ಯಾರಿಗೆ ಅನುಕೂಲವಾಗುತ್ತದೆ, ಅವರಲ್ಲಿ ಶೇಕಡ ೩ ರಷ್ಟು ನಮಗೆ ಪ್ರತಿಫಲ ಸಿಗದೇ ಹೋದರೆ ನಾವು ಈ ನೀರಾವರಿ ಕೆಲಸಕಾರ್ಯಗಳನ್ನು ಇನ್ನೂ ಹೆಚ್ಚು ಮುಂದುವರಿಸಬೇಕೇ? ನಮ್ಮ ರಾಜ್ಯದಲ್ಲಿ ೬೦-೬೫ ಲಕ್ಷ ಕೃಷಿ ಕುಟುಂಬಗಳು ಇವೆ. ಈ ೬೫ ಲಕ್ಷ ಕೃಷಿ ಕುಟುಂಬಗಳಲ್ಲಿ ಎಷ್ಟು ಕೃಷಿ ಕುಟುಂಬಗಳಿಗೆ ಈ ನೀರಾವರಿ ಸವಲತ್ತುಗಳನ್ನು ನಾವು ಕೊಡುವುದಕ್ಕೆ ಸಾಧ್ಯವಾಗಿದೆ ಎನ್ನುವುದನ್ನು ಯೋಚನೆ ಮಾಡತಕ್ಕ ಕಾಲ ಬಹಳ ಹತ್ತಿರ ಬಂದಿದೆ. ಆದ್ದರಿಂದ ನಾನು ಈ ಸಭೆಯ ಒಟ್ಟಾರೆ ಚಿಂತನೆಯನ್ನು ಈ ದಿಕ್ಕಿನಲ್ಲಿ ಹರಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆ. ಇದಕ್ಕೆ ಒಂದು ಸಾಮೂಹಿಕ ಚಿಂತನೆಯ ಅವಶ್ಯಕತೆ ಇದೆ. ಇದರ ಬಗ್ಗೆ ನಾವು ಗಂಭೀರವಾಗಿ ಪರಿಶೀಲನೆ ಮಾಡಬೇಕಾದ ಈ ಕಾಲ ಘಟ್ಟವನ್ನು ಈಗ ನಾವು ತಲುಪಿದ್ದೇವೆ. ಅದರಿಂದ ಯಾರು ನಮ್ಮ ಸಮಾಜದ ಒಟ್ಟಾರೆ ಆದಾಯದ ಕೆಲವು ಭಾಗವನ್ನು ತಮ್ಮ ಒಳಿತಿಗೋಸ್ಕರ ನಾವೇನು ವಿನಿಯೋಗಿಸಿದ್ದೇವೆ, ಅವರು ಕನಿಷ್ಟ ಯೂಸರ್ಸ್ ಫೀಯನ್ನು ಕೊಡಬೇಕೆನ್ನತಕ್ಕ ತತ್ವಕ್ಕೆ ಈ ಸಭೆ ಬದ್ಧವಾಗಿದೆ. ಹಾಗೆ ಎಂದು ಹೇಳಿ ನಾನು ಭಾವನೆ ಮಾಡುತ್ತೇನೆ. ಇನ್ನು ಹಲವಾರು ಮಾನ್ಯ ಸದಸ್ಯರುಗಳು ಈ ಪೂರಕ ಅಂದಾಜುಗಳ ಮೇಲೆ ತಮ್ಮ ಸ್ಥಳೀಯ ಕೆಲಸಕಾರ್ಯಗಳ ಬಗ್ಗೆ ಮತ್ತು ತಮ್ಮ ಕ್ಷೇತ್ರದ ಕೆಲಸಕಾರ್ಯಗಳ ಬಗ್ಗೆ ಕಾಮಗಾರಿಗಳ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ. ಅವುಗಳಿಗೆ ನಾನು ಗಮನವನ್ನು ಹರಿಸುತ್ತೇನೆ ಹಾಗೆ ಎಂದು ಹೇಳಿ ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಇನ್ನು ಅಂಗನವಾಡಿಯವರ ಬಗ್ಗೆ, ಅಂಗನವಾಡಿಯವರ ಸಮಸ್ಯೆಗಳ ಬಗ್ಗೆ ಹೇಳಬೇಕಾದರೆ. ಅವರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅವರಿಗೆ ಕೊಡುವ ಗೌರವಧನ ಎಂದು ಹೇಳಿ ಏನು ಕೊಡುತ್ತೇವೆ, ಆ ಗೌರವಧನಕ್ಕೆ ನಾಚಿಕೆಪಡಿಸತಕ್ಕ ಅಥವಾ ಅದನ್ನು ಯಾರೂ ಗೌರವ ಎಂದು ಹೇಳಿ ಭಾವಿಸಲಿಕ್ಕೆ ಸಾಧ್ಯವಾಗದೇ ಇರತಕ್ಕ ಒಂದು ಮೊತ್ತ. ಅವರ ಬಗ್ಗೆ ನನ್ನ ಸಂಪೂರ್ಣ ಸಹಾನುಭೂತಿ ಇದೆ. ಮಾನ್ಯ ಸಿಂಧ್ಯಾರವರು 'ಕೊಡಿ, ಕೊಡಿ' ಎಂದು ಹೇಳುತ್ತಿದ್ದಾರೆ. ಈಗ ಒಂದೂವರೆ ವರ್ಷದ ಕೆಳಗೆ ಕೊಟ್ಟಿದ್ದರೆ ನಮಗೆ ಈ ತೊಂದರೆಯೇ ಇರುತ್ತಿರಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾವು ೧೫೦ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೇವೆ. ನೀವೂ ೧೫೦ ರೂಪಾಯಿಗಳನ್ನು ಕೊಡಿ. ಕೇಳಿ, ಅಲ್ಲೇ ಇದ್ದಾರೆ ಫೈನಾನ್ಸ್ ಸೆಕ್ರೆಟರಿಯವರು.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಬಹಳ ಸಂತೋಷ. ನಿಮ್ಮನ್ನು ನಾನು ಅಭಿನಂದಿಸುತ್ತೇನೆ. ಏಕೆಂದರೆ ಒಂದು ದೃಷ್ಟಿ ಬಂದಿರತಕ್ಕಂಥಾದ್ದು ಬಹಳ ಒಳ್ಳೆಯ ಸೂಚನೆ ಮುಂದೆ ನಮ್ಮ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಉತ್ತಮ ಆದಾಗ ಇದರ ಬಗ್ಗೆ ನಾವು ಯೋಚನೆ ಮಾಡಬೇಕು. ಆದರೆ ಅಗತ್ಯವಾಗಿ ಯೋಚನೆ ಮಾಡಬೇಕಾಗಿರತಕ್ಕಂಥ ಒಂದು ವಿಚಾರದ ಬಗ್ಗೆ ತಾವು ನಮ್ಮ ಗಮನವನ್ನು ಸೆಳೆದಿದ್ದೀರಿ ಹಾಗೆ ಎಂದು ಹೇಳಿ ಮಾನ್ಯ ಇತರೆ ಸದಸ್ಯರುಗಳು ಮಾಡಿರುವ ಸಲಹೆಗಳ ಬಗ್ಗೆ ಕೂಡ........

ಶ್ರೀ ಎ.ರಾಮದಾಸ್: ನಗರ ಪ್ರದೇಶದ ಆಶ್ರಯದ ಬಗ್ಗೆ ಹೇಳಲಿಲ್ಲ. ನಗರಪ್ರದೇಶದಲ್ಲಿ ತುಂಬಾ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಅರ್ಬನ್ ಆಶ್ರಯಗಳಿಗೆ ಹೆಚ್ಚು ಅವಕಾಶಗಳನ್ನು ಒದಗಿಸಬೇಕೆಂದು ಹೇಳಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕೋಸ್ಕರ ನಮ್ಮ ಹೊಸದೊಂದು ವಸತಿ ನೀತಿಯನ್ನು ನಾವು ಸಾದರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆ ನೀತಿ ಬಗ್ಗೆ ಗಂಭೀರ ಚಿಂತನೆ ನಡೆಯುತ್ತಿದೆ. ಆ ಚಿಂತನೆಯ ಮೂಸೆಯಿಂದ ಹೊರಗೆ ಬರುವ ಒಳ್ಳೆಯದಕ್ಕೆ ನಾವು, ನೀವು ಕಾಯಬೇಕಾಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ: ನಾನು ಸುಭಾಷ್‌ಚಂದ್ರ ಶಾಲೆಗಳ ಬಗ್ಗೆ ಹೇಳಿದ್ದೆ. ರಾಜ್ಯದಲ್ಲಿ ಒಂದೊಂದು ಕ್ಷೇತ್ರಕ್ಕೆ ಸುಭಾಷ್ ಚಂದ್ರರ ಹೆಸರಿನ ಹೈಸ್ಕೂಲಿಗೆ ಒಂದೊಂದು ಬಿಲ್ಡಿಂಗನ್ನು ಕೊಟ್ಟಿದ್ದರು. ರಾಜ್ಯಾದ್ಯಂತ ಅದನ್ನು ಕೊಟ್ಟಿದ್ದರು. ಅವುಗಳ್ಯಾವುವೂ ಕಂಪ್ಲೀಟ್ ಆಗಿಲ್ಲ. ಅದಕ್ಕೆ ಕಾರಣ ಸ್ವಲ್ಪ ಹಣ ಬಿಡುಗಡೆಯಾಗಬೇಕಾಗಿತ್ತು. ಅದು ಬಿಡುಗಡೆಯಾಗಿಲ್ಲ. ಅದರ ಬಗ್ಗೆ ಹೇಳಬೇಕು.

ಶ್ರೀ ಎಸ್.ಎಂ.ಕೃಷ್ಣ: ನಮ್ಮ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಗಳಿವೆ, ಜಿಲ್ಲಾ ಪಂಚಾಯಿತಿಗಳಿವೆ. ಆದ್ದರಿಂದ ಅವುಗಳೆಲ್ಲವೂ ಕೂಡ ಅವರವರ ಕಾರ್ಯಗಳನ್ನು ನಿರ್ವಹಣೆ ಮಾಡಿದರೆ ಇಂಥ........

ಶ್ರೀ ಕೆ.ಶ್ರೀನಿವಾಸಗೌಡ: ಅದು ಸರ್ಕಾರದ ಕಾರ್ಯಕ್ರಮ, ಅದಕ್ಕೇ ನಾನು ಹೇಳಿದೆ.

ಶ್ರೀ ಎಸ್.ಎಂ.ಕೃಷ್ಣ: ಆದ್ದರಿಂದ ಸದನ ಈ ಪೂರಕ ಅಂದಾಜುಗಳಿಗೆ ತಮ್ಮ ಒಪ್ಪಿಗೆಯನ್ನು ಕೊಡುವುದರ ಮೂಲಕ ನಮಗೆ ಸಹಾಯ ಮಾಡಬೇಕೆಂದು ಹೇಳಿ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಸಿ.ಭೈರೇಗೌಡ: ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ. ನಾನು ಕೆಲವು ವಿಚಾರಗಳಲ್ಲಿ ಒಂದೆರಡನ್ನು ಮಾತ್ರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಇದರ ಮೇಲೆ......

ಶ್ರೀ ಸಿ.ಭೈರೇಗೌಡ: ನೀವು ಬೇಡ ಎಂದರೆ ನಾನು ಕುಳಿತುಕೊಂಡು ಬಿಡುತ್ತೇನೆ.

ಅಧ್ಯಕ್ಷರು: ಆ ಪ್ರಶ್ನೆ ಕೇಳಬೇಡಿ.

ಶ್ರೀ ಸಿ.ಭೈರೇಗೌಡ: ಬೇಡ ಎಂದರೆ ಕುಳಿತುಕೊಂಡು ಬಿಡುತ್ತೇನೆ. ಮಾತನಾಡುವುದೇ ಬೇಡ ಬಿಡಿ.

(ಈ ಹಂತದಲ್ಲಿ ಮಾನ್ಯ ಭೈರೇಗೌಡರು ಸಭಾತ್ಯಾಗ ಮಾಡಿ ಹೊರಗೆ ಹೋದರು.)

ಅಧ್ಯಕ್ಷರು: ಬನ್ನಿ ಮಾತನಾಡಿ, ಭೈರೇಗೌಡ್ರೇ, ಅವರನ್ನು ಕರೆಯಿರಿ, ಬಂದು ಮಾತನಾಡಲಿ. ನಾನು ಮಾತನಾಡಿ ಎಂದು ಹೇಳಿದೆನಲ್ಲಾ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸವಿಸ್ತಾರವಾಗಿ ವ್ಯಂಗ್ಯವನ್ನು ಬೆರಸದೆ ಹಾಸ್ಯವಾಗಿ ನಾವು ಕೇಳಿರತಕ್ಕ ಬಹುತೇಕ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡತಕ್ಕ ಭರವಸೆಯನ್ನು ಕೊಟ್ಟಿದ್ದಾರೆ. ಮಾನ್ಯ ಭೈರೇಗೌಡರು ಹಿರಿಯ ಸದಸ್ಯರು ಇದ್ದಾರೆ, ಈ ಅಧಿವೇಶನದಲ್ಲಿ ಅವರು ಮಾತನಾಡಲಿಕ್ಕೆ ನಮ್ಮ ಒಂದು ಸಮಯದ ಅಭಾವದಿಂದಾಗಿ ಮಾತನಾಡಲಿಕ್ಕಾಗಿಲ್ಲ. ಅವರು ಕೆಲವು ಕ್ಲಾರಿಫಿಕೇಷನನ್ನು ಕೇಳಬೇಕು ಎಂದು ಇದ್ದಾರೆ. ಅವರಿಗೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಅವರಿಗೆ ಮಾತನಾಡಿ ಎಂದು ಹೇಳಿದ್ದೇನಲ್ಲಾ.

ಶ್ರೀ ಆರ್.ರೋಷನ್‌ಬೇಗ್ (ಪ್ರವಾಸೋದ್ಯಮ ಸಚಿವರು): ಮಾನ್ಯ ಅಧ್ಯಕ್ಷರ ಮೇಲೆ ಆ ರೀತಿ ಮಾಡಿ ಅವರು ಹೊರಗೆ ಹೋಗಿದ್ದು ಸರಿಯಲ್ಲ.

ಅಧ್ಯಕ್ಷರು: ಅವರನ್ನು ಕರೆಯಿರಿ, ಮಾತನಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಸಿಟ್ಟು ಮಾಡಿಕೊಳ್ಳತಕ್ಕ ಅವಶ್ಯಕತೆಯೇ ಇರಲಿಲ್ಲ. ಯಾರ ಮೇಲೆ ಸಿಟ್ಟು?

(ಗೊಂದಲ)

ಶ್ರೀ ಎಂ.ಚಂದ್ರಪ್ಪ: ಅವರು ಏಳು ಸಾರಿ ಗದ್ದಿದ್ದಾರೆ. ಅವರು ಹಿರಿಯ ಸದಸ್ಯರು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಬೈರೇಗೌಡರು ಸದನಕ್ಕೆ ಬಂದು ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು)

ಅಧ್ಯಕ್ಷರು: ಗೌಡ್ರೇ ನೀವು ಮಾತನಾಡಿ.

ಶ್ರೀ ಸಿ.ಬೈರೇಗೌಡ: ಸ್ವಾಮಿ, ದಯವಿಟ್ಟು ಕ್ಷಮಿಸಿ. ನೀವು ಕೋಲಾರದವರು.

ಅಧ್ಯಕ್ಷರು: ಆ ವ್ಯಾಖ್ಯಾನವೆಲ್ಲಾ ಬೇಡಿ, ದಯವಿಟ್ಟು ತಾವು ಮಾತನಾಡಿ.

+ ಶ್ರೀ ಸಿ.ಬೈರೇಗೌಡ (ವೇಮಗಲ್): ನಾನು ಒಂದು ನಿಮಿಷ ಮಾತನಾಡುತ್ತೇನೆ. ನಾನು ಜಾಸ್ತಿ ಹೊತ್ತು ಮಾತನಾಡುವುದಿಲ್ಲ. ನಾವು ಹೇಳುವಷ್ಟರಲ್ಲಿ ನಾವು ಕೋಲಾರದವರು, ತಾವೂ ಕೋಲಾರದವರು, ಎಲ್ಲಾ ಕೋಲಾರದವರು. ಅದಕ್ಕೋಸ್ಕರ ಅದರಿಂದ ತಪ್ಪಿಸಿಕೊಳ್ಳಬೇಕೆಂದು ಹೇಳಿ ಸುಮಾರು ೨೫ ವರ್ಷಗಳಿಂದ ಈ ಸದನದಲ್ಲಿ ಕುಳಿತಿದ್ದೇನೆ. ಇದು ಮೊದಲನೇ ಸಾರಿ ಇಷ್ಟು ನೋವನ್ನು ಅನುಭವಿಸತಕ್ಕಂಥಾದ್ದು ಈ ಸದನದಲ್ಲಿ ಕುಳಿತು. ನನಗೂ ಕೂಡ ಇಲ್ಲಿ ಮಾತನಾಡತಕ್ಕ ಅಧಿಕಾರ ಇದೆ. ದಯವಿಟ್ಟು ಅವಕಾಶ ಕೊಡಿ. ತಾವು ಕೋಲಾರದವರು, ನಾನು ಕೋಲಾರದವನು, ಇನ್ನೂ ಒಂದು ಸಾರಿ ಏನು ಹೇಳುತ್ತಾರೆ ಎಂದರೆ, ಹಿಂದಿನ ಸಾರಿ ಹಿಂದೆ ಇದ್ದ ಅಧ್ಯಕ್ಷರೂ ಕೂಡ ಕೋಲಾರದವರೇ ಆಗಿದ್ದರು. ನೀವೆಲ್ಲಾ ಕೋಲಾರದವರು ಎಂದು ಹೇಳತಕ್ಕಂಥಾದ್ದೂ ಕೂಡ ಇಲ್ಲಿ ಸರ್ವೇಸಾಮಾನ್ಯವಾಗಿ ಕೇಳಿ ಬರತಕ್ಕಂಥ ಮಾತು. ಅದನ್ನು ನೋಡಿ ತಾವೇನು ಮಾಡುತ್ತೀರಿ, ನಾವು ಎದ್ದರೆ ನೀವು ಜಾಸ್ತಿ ಮಾತನಾಡುತ್ತೀರಿ ಎಂದು ನಿಮ್ಮ ಹತ್ತಿರ ಅನ್ನಿಸಿಕೊಳ್ಳಬಾರದು ನಾನು ಮಾತನಾಡುವುದಕ್ಕೆ ಇಷ್ಟಪಡಲಿಲ್ಲ. ಬಜೆಟ್ ಮೇಲೂ ಮಾತನಾಡಲಿಲ್ಲ. ಏಕೆಂದರೆ ಈ ಮಾತು ಬರುತ್ತದೆ, ಆ ರೀತಿ ಅನ್ನಿಸಿಕೊಳ್ಳಕೂಡದು ಎನ್ನುವ ಕಾರಣಕ್ಕೋಸ್ಕರ ಮಾತನಾಡಲಿಲ್ಲ, ನಿಮಗೂ ಕೂಡ ಗೌರವ ಕೊಡಬೇಕೆಂದು ಹೇಳಿ. ಆದ್ದರಿಂದ ನಾನು ನನ್ನ ನೋವನ್ನು ನುಂಗಿಕೊಳ್ಳುವುದಕ್ಕೆ ಸಾಧ್ಯವಾಗದೆ ಹೊರಗೆ ಹೋದೆ. ನಿಮ್ಮ ಮೇಲೆ ದುರಾಭಿಪ್ರಾಯದಿಂದ ಖಂಡಿತಾ ನಾನು ಹೊರಗಡೆ ಹೋಗಲಿಲ್ಲ. ನನ್ನ ನೋವನ್ನು ನುಂಗಿಕೊಳ್ಳುವುದಕ್ಕೆ ಸಾಧ್ಯವಾಗದೇ ಹೊರಗಡೆ ಹೋದೆ. ಅದರಿಂದ ನಿಮಗೆ ಅಗೌರವ ತೋರಿಸಬೇಕೆಂದಾಗಲಿ ಖಂಡಿತಾ ನಾನು ಹೊರಗಡೆ ಹೋಗಲಿಲ್ಲ. ಅದನ್ನು ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಆಯಿತು. ಇನ್ನು ಮೇಲೆ ಯಾರೂ ಮಾತನಾಡುವುದಿಲ್ಲ, ತಾವು ಮಾತನಾಡಿ. ಕೋಲಾರದವರು ಆಗಲೀ, ಬೆಂಗಳೂರಿನವರು ಆಗಲಿ, ಪ್ರತಿಯೊಬ್ಬ ಸದಸ್ಯರಿಗೂ ಮಾತನಾಡುವ ಹಕ್ಕು ಇದೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸಣ್ಣ ಕೈಗಾರಿಕೆಗಳಿಗೆ ಕೊಡುವ ಸಬ್ಸಿಡಿ ಬಗ್ಗೆ ಹೇಳಿದ್ದಾರೆ. ಆದರಲ್ಲಿ ನೀವು ಸಣ್ಣ ಕೈಗಾರಿಕೆಗಳಲ್ಲಿರುವ ಕೋಲ್ಡ್ ಸ್ಟೋರೇಜ್‌ಗಳನ್ನು ಸೇರಿಸಿದ್ದೀರಿ. ಆದರೆ ಹಣವನ್ನು ಕೊಟ್ಟಿಲ್ಲ. ಈಗಾಗಲೇ ಇರುವ ೩೪ ಕೋಲ್ಡ್ ಸ್ಟೋರೇಜ್‌ಗಳಲ್ಲಿ ೧೮ ಕೆಟ್ಟು ಡೆಡ್ ಆಗಿವೆ. ಅವುಗಳನ್ನು ಸರ್ಕಾರಕ್ಕೆ ವಾಪಸ್ಸು ಕೊಡುತ್ತೇವೆಂದು ಅವರುಗಳು ಹೇಳಿದ್ದಾರೆ. ನಿಮಗೇ ಗೊತ್ತಿದೆ, ಕೋಲ್ಡ್ ಸ್ಟೋರೇಜ್‌ಗಳಿಲ್ಲದೆ ಇದ್ದರೆ ರೈತರು ಕೃಷಿ ಮಾಡುವುದಕ್ಕೇ ಸಾಧ್ಯವಿಲ್ಲ. ಆದುದರಿಂದ ದಯವಿಟ್ಟು ಇದನ್ನು ಬೇರ್ಪಡಿಸಿ ಕೋಲ್ಡ್ ಸ್ಟೋರೇಜ್‌ಗಾಗಿ ಕೊಡುವ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಬೇಕು. ಇನ್ನು ಹಾಪ್‌ಕಾಮ್ಸ್ ಬಗ್ಗೆ ಹೇಳುವುದೇನೆಂದರೆ ಈ ಸಂಸ್ಥೆಗಳನ್ನು ಕಷ್ಟಪಟ್ಟು ಬೆಳೆಸಿದ್ದೇವೆ. ಇದು ಇರತಕ್ಕಂಥ ಜಾಗ ಸುಮಾರು ಎರಡೂವರೆ ಎಕರೆ ಜಾಗ ಇದೆ. ಅದು ಯಾವುದೋ ಒಂದು ಹಳ್ಳಿಗೆ ಸಂಬಂಧಪಟ್ಟ ರೆವಿನ್ಯೂ ಜಾಗ. ಅದು ಬೋರೆಲಾಲ್ ಎನ್ನುವ ಯಾರೋ ಒಬ್ಬರು ನನ್ನುದು ಜಾಗ ಎಂದು ನ್ಯಾಯಾಲಯದಲ್ಲಿ ಮೊಕದ್ದಮೆ ಹಾಕಿದ್ದಾನೆ. ಆ ಕೇಸ್ ನಡೆಯುತ್ತಿದೆ. ಆದರೆ. ಅವನಿಗೆ ಆ ಜಾಗದ ಮೇಲೆ ಯಾವ ಹಕ್ಕು ಕೂಡ ಇಲ್ಲ. ಆದರೆ ಹಕ್ಕನ್ನು ಬೋಗಸ್ ಆಗಿ ಮಾಡುವುದರಲ್ಲಿ ಆತ ಎಕ್ಸ್‌ಪರ್ಟ್ ಇದ್ದಾನೆ. ಅವನು ಈ ಜಾಗದ ಬಗ್ಗೆ ಅನೇಕ ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಿದ್ದಾರೆ. ಆ ಮೊಕದ್ದಮೆಗೆ ಸಹಕಾರ ನೀಡತಕ್ಕಂಥ ರೀತಿಯಲ್ಲಿ ಇವೊತ್ತು ವ್ಯವಹಾರಗಳು ನಡೆಯುತ್ತಿವೆ. ನಾನು ಸಂಬಂಧಪಟ್ಟ ಇಲಾಖಾ ಮಂತ್ರಿಯಾಗಿದ್ದಾಗಲೂ ಕೂಡ ನನ್ನ ಮೇಲೆ ಕೂಡ ಒತ್ತಡ ಬಂದಿತ್ತು. ಈ ಜಾಗ ಲಾಲ್‌ಬಾಗ್ ಪಕ್ಕದಲ್ಲಿ ಬರುತ್ತದೆಯಲ್ಲದೇ ಸುಮಾರು ಹತ್ತರಿಂದ ಹನ್ನೆರಡು ಕೋಟಿ ರೂಪಾಯಿಗಳ ಬೆಲೆ ಬಾಳುವಂಥದ್ದಾಗಿದೆ. ಈ ಜಾಗವನ್ನು ಹೇಗಾದರೂ ಮಾಡಿ ಖಾಸಗಿಯವರು ಕಸಿದುಕೊಳ್ಳಲು ಪ್ರಯತ್ನ ನಡೆಯುತ್ತಿದೆ. ಆದುದರಿಂದ ನಾನು ಹೇಳುವುದೇನೆಂದರೆ ಮಾನ್ಯ ಮುಖ್ಯಮಂತ್ರಿಗಳೇ ನೇರವಾಗಿ ಮಧ್ಯಪ್ರವೇಶ ಮಾಡಿ ಖಾಸಗಿಯವರು ಆ ಜಾಗವನ್ನು ಕಸಿದುಕೊಳ್ಳದ ಹಾಗೆ ಮಾಡಬೇಕು. ಸಾವಿರಾರು ರೈತರ ಪ್ರಶ್ನೆ ಇದರಲ್ಲಿ ಅಡಗಿದೆ. ಒಂದು ವೇಳೆ ನ್ಯಾಯಾಲಯದಲ್ಲಿ ಹಾಪ್‌ಕಾಮ್ಸ್ ವಿರುದ್ಧವಾಗಿ ಕೇಸ್ ತೀರ್ಮಾನವಾದರೆ ಸರ್ಕಾರದ ಖರ್ಚಿನಲ್ಲಿಯೇ ಆ ಜಾಗವನ್ನು ಅಕ್ವೈರ್ ಮಾಡಿ ಆ ಸಂಸ್ಥೆಗೆ ಆ ಜಾಗವನ್ನು ಉಳಿಸಿಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನು ಕೃಷಿ ಸಚಿವರು ಇಲ್ಲಿಯೇ ಇದ್ದಾರೆ. ಗ್ರಾನ್ಯುಲೇಟೆಡ್ ಮಿಕ್ಸ್‌ಚರ್ಸ್ ಎಂದು ೧೭:೧೭ ಮತ್ತು ೧೮:೧೮ ಎಂದು ಮಾಡುತ್ತಿರುವುದು ತಮಗೂ ಗೊತ್ತಿದೆ.

ಕಾರ್ಖಾನೆಯಿಂದ ಮಿಕ್ಸ್‌ಚರ್ಸ್ ಮತ್ತು ಕೆಮಿಕಲ್ ಫರ್ಟಿಲೈಸರ್ ಇವುಗಳಾಗಿರುವುದಿಲ್ಲ. ನಾನು ಕೃಷಿ ಸಚಿವನಾಗಿದ್ದಾಗಲೂ ಕೂಡ ಇಂಥ ಯೂರಿಯಾ ಇರಬಹುದು, ಡಿ.ಎ.ಪಿ. ಇರಬಹುದು, ಒಟ್ಟಿನಲ್ಲಿ ರೈತರುಗಳು ಸಬ್ಸಿಡೈಸ್ಡ್ ಫರ್ಟಿಲೈಸರ್‌ಗಳನ್ನು ಬಳಸುತ್ತಿದ್ದರು. ಆದರೆ ಈಗ ಅದಕ್ಕೆ ಕುತ್ತು ತರತಕ್ಕಂಥ ಪ್ರಯತ್ನಗಳು ನಡೆಯುತ್ತಿದೆ. ಇದರಿಂದಾಗಿ ಕಡಿಮೆ ಬೆಲೆಗೆ ದೊರೆಯುತ್ತಿದ್ದ ಕಡೆಯಲ್ಲಿ ಹೆಚ್ಚು ಬೆಲೆ ರೈತ ಕೊಡಬೇಕಾದ ಪ್ರಯತ್ನ ನಡೆದು ರೈತರಿಗೆ ತೊಂದರೆಯಾಗುತ್ತಿದೆ. ಆದುದರಿಂದ ಗ್ರಾನ್ಯುಲೇಟೆಡ್ ಮಿಕ್ಸ್‌ಚರ್ಸ್ ಮಾಡುತ್ತಿರುವವರಿಗೆ ಸಬ್ಸಿಡೈಸ್ಡ್ ಫರ್ಟಿಲೈಸರ್ಸ್ ಒದಗಿಸತಕ್ಕಂಥ ಹಿಂದಿನ ವ್ಯವಸ್ಥೆ ಏನಿತ್ತೋ ಅದೇ ರೀತಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ): ಮಾನ್ಯ ಅಧ್ಯಕ್ಷರೆ, ಕೊಪ್ಪಳ ಜಿಲ್ಲೆಯಲ್ಲಿ ಆರು ಗೋ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಸರ್ಕಾರಕ್ಕೆ ಮತ್ತು ಜಿಲ್ಲಾ ಆಡಳಿತಕ್ಕೆ ನಾನು ವಂದಿಸುತ್ತೇನೆ. ಆದರೆ ಈಗ ಡಿ.ಸಿ.ಯವರು ಏನು ಹೇಳುತ್ತಿದ್ದಾರೆಂದರೆ ಇದಕ್ಕೆ ನೇರವಾಗಿ ಹಣಕಾಸಿನ ನೆರವು ಇಲ್ಲವೆನ್ನುತ್ತಿದ್ದಾರೆ. ಇದುವರೆಗೂ ಗಂಗಾವತಿ ಕ್ಷೇತ್ರದಲ್ಲಿ ಹುಲ್ಲು ಹೇರಳವಾಗಿ ಸಿಗುತ್ತಿದ್ದರಿಂದ ಇದುವರೆಗೆ ಹತ್ತಾರು ದಿವಸಗಳ ಕಾಲ ಗೋ ಶಾಲೆಗಳು ಸುಸ್ಥಿತಿಯಲ್ಲಿ ನಡೆದಿವೆ. ಆದರೆ ಈಗ ನೀವು ಗೋ ಶಾಲೆಗಳಿಗೆ ಹಣವನ್ನು ಕೊಡದೇ ಹೇಗೆ ಇವುಗಳನ್ನು ಮುಂದುವರಿಸುತ್ತೀರಿ ಎನ್ನುವುದನ್ನು ತಾವು ಉತ್ತರಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಮುಖ್ಯಮಂತ್ರಿಗಳು ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ಎಷ್ಟು ಅನುದಾನವನ್ನು ಒದಗಿಸಿದ್ದಾರೆ ಎಂಬ ಬಗ್ಗೆ ಮತ್ತು ಆ ಅನುದಾನದಿಂದ ಪತ್ರಕರ್ತರಿಗೆ ಯಾವ ರೀತಿಯ ಸಹಾಯ ದೊರೆಯುತ್ತದೆ ಮತ್ತು ಅದನ್ನು ಪಡೆಯಲು ಗೈಡ್‌ಲೈನ್ಸ್ ಏನಾದರೂ ಇದೆಯಾ ಎಂಬ ಬಗ್ಗೆ ತಿಳಿಸಬೇಕೆಂದು ಅವರಲ್ಲಿ ವಿನಂತಿಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸಂಕಷ್ಟದಲ್ಲಿರುವ ಪತ್ರಕರ್ತರ ಸಲುವಾಗಿ ಸರ್ಕಾರ ಸ್ಪಂದಿಸಬೇಕೆನ್ನುವ ದೃಷ್ಟಿಯಿಂದಲೇ ಪೂರಕ ಅಂದಾಜುಗಳಲ್ಲಿ ೧೦ ಲಕ್ಷ ರೂಪಾಯಿಗಳನ್ನು ಪ್ರಾವಿಷನ್ ಮಾಡಿದ್ದೇವೆ. ಅದರ ಮೂಲಕ ಸಂಕಷ್ಟದಲ್ಲಿರುವ ಹಿರಿಯ ಚೇತನಗಳಿಗೆ ನಾವು ನಮ್ಮ ಒತ್ತಾಸೆಯನ್ನು ಕೊಡಬೇಕು ಎನ್ನುವ ದೃಷ್ಟಿ ಇದೆ. ಪೆನ್‌ಷನ್ ಸ್ಕೀಂ ಫಾರ್ ಜರ್ನಲಿಸ್ಟ್ ಎಂದು ೧೯೮೪ರಲ್ಲಿ ಪ್ರಾರಂಭವಾಯಿತು. ಇದರ ಪ್ರಕಾರ ೫೫ ವರ್ಷಗಳು ಅಥವಾ ೨೦ ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಹಿರಿಯ ಪರ್ತಕರ್ತರಿಗೆ ಅವರ ಆರೋಗ್ಯ ಸರಿ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯಿದ್ದರೆ ಮತ್ತು ಇದರಿಂದಾಗಿ ಅವರ ಜರ್ನಲಿಸ್ಟ್ ಕೆರಿಯರ್‌ಗೆ ಪರ್ಸ್ಯೂ ಮಾಡಲಿಕ್ಕೆ ಸಾಧ್ಯ ಆಗದೇ ಇರತಕ್ಕಂಥವರಿಗೆ ಮತ್ತು ೫ ಸಾವಿರ

ರೂಪಾಯಿಗಳಿಗೂ ಕಡಿಮೆ ವರಮಾನ ಇರತಕ್ಕಂಥವರಿಗೆ, ಹೀಗೆ ಹಲವಾರು ಷರತ್ತುಗಳಿವೆ. ಅಂಥ ಷರತ್ತುಗಳಿಗನ್ವಯವಾಗಿ ಪ್ರತಿ ತಿಂಗಳು ೫೦೦ ರೂಪಾಯಿಗಳನ್ನು ಕೊಡಲಾಗುತ್ತದೆ. ಈ ಎಲ್ಲಾ ಷರತ್ತುಗಳನ್ನು ನೋಡಿಕೊಂಡು ನಮ್ಮ ಸೀನಿಯರ್ ಜರ್ನಲಿಸ್ಟ್‌ಗೆ ಸಹಾಯ ಮಾಡತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಇನ್ನು ಮಾನ್ಯ ಭೈರೇಗೌಡರು ಕೋಲ್ಡ್ ಸ್ಟೋರೇಜ್‌ಗಳಿಗೆ ಸಬ್ಸಿಡಿಯನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ. ಕಳೆದ ವರ್ಷ ಕೋಲ್ಡ್ ಸ್ಟೋರೇಜ್‌ಗೆ ಒಂದು ಪವರ್ ಬಿಲ್‌ನಲ್ಲಿ ಒಂದು ರೂ. ಸಬ್ಸಿಡಿ ಎಂದು ಮಾಡಿದೆವು. ಇದು ಏನನ್ನು ತೋರಿಸುತ್ತದೆ ಎಂದರೆ ಕೋಲ್ಡ್ ಸ್ಟೋರೇಜ್‌ಗಳು ಬಹಳ ಪ್ರಾಮುಖ್ಯವಾದವುಗಳಾಗಿದ್ದು ಇದು ರೈತರ ನೆರವಿಗೆ ಬರಬೇಕು ಎನ್ನುವುದೇ ಆಗಿದೆ.

ಶ್ರೀ ಸಿ.ಭೈರೇಗೌಡ: ನಾನು ಹೇಳುವುದೇನೆಂದರೆ, ಸಣ್ಣ ಕೈಗಾರಿಕೆಗಳಿಗೆ ಯಾವ ರೀತಿಯಲ್ಲಿ ಸಬ್ಸಿಡಿ ಕೊಡುತ್ತದೋ ಅದೇ ರೀತಿಯಲ್ಲಿ ಕೋಲ್ಡ್ ಸ್ಟೋರೇಜ್‌ಗಳಿಗೆ ಕೊಡುತ್ತದೆ. ಆ ಹಣ ಬಿಡುಗಡೆಯಾಗಿಲ್ಲದ ಕಾರಣ ಅದನ್ನು ಬಿಡುಗಡೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಈ ಕಾರಣದಿಂದಾಗಿ ಇಂದು ೩೪ ಕೋಲ್ಡ್ ಸ್ಟೋರೇಜ್‌ಗಳಲ್ಲಿ ೧೮ ಡೆಡ್ ಆಗಿವೆ. ಬಂಡವಾಳವೇ ಮುಗಿಯುತ್ತಾ ಬಂದಿದೆ. ಆದರಿಂದಾಗಿ ಇವುಗಳಿಗೆ ಸರ್ಕಾರದಿಂದ ಕೊಡಬೇಕಾದ ಸಬ್ಸಿಡಿಯನ್ನು ಬಿಡುಗಡೆ ಮಾಡಬೇಕು. ಪಾವರ್ ಟ್ಯಾರಿಫ್‌ನಲ್ಲಿ ಕೊಡುವ ಸಬ್ಸಿಡಿ ಬೇರೆಯೇ ಆಗಿದೆ.

ಶ್ರೀ ಎಸ್.ಎಂ.ಕೃಷ್ಣಾ (ಮುಖ್ಯಮಂತ್ರಿಗಳು): ತಾವು ಹೇಳಿದ ವಿಚಾರ ಕೇವಲ ಕೋಲ್ಡ್ ಸ್ಟೋರೇಜ್‌ಗಳಿಗೆ ಮಾತ್ರ ಅನ್ವಯಿಸುವುದಿಲ್ಲ. ಅದು ಎಲ್ಲಾ ಸಣ್ಣ ಕೈಗಾರಿಕೆಗಳಿಗೂ ಅನ್ವಯಿಸುತ್ತದೆ. ಎಷ್ಟೋ ಸಹಸ್ರಾರು ಸಣ್ಣ ಕೈಗಾರಿಕೆಗಳು ತಮ್ಮ ಮೂಲ ಬಂಡವಾಳವನ್ನು ಈವತ್ತು ಕಳೆದುಕೊಂಡುಬಿಟ್ಟಿವೆ. ಅವರು ಇವೊತ್ತಿನ ದಿವಸ ಬಡ್ಡಿಯನ್ನೂ ಕೂಡ ಕಟ್ಟಲು ಶಕ್ತರಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಇವೊತ್ತಿನ ಬೆಳವಣಿಗೆಯ ಹಿನ್ನಲೆಯಲ್ಲಿ ನಾವು ವಿಶೇಷವಾಗಿ ಈ ಕೋಲ್ಡ್ ಸ್ಟೋರೇಜ್‌ಗಳ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಮುಂದುವರೆಯಬೇಕಾಗುತ್ತದೆ. ಆ ದಿಸೆಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಅವರು ಹಾಪ್‌ಕಾಮ್ಸ್ ಬಗ್ಗೆ ಹೇಳಿದ್ದಾರೆ. ಈ ಜಾಗದ ವಿಚಾರದಲ್ಲಿ ನ್ಯಾಯಾಲಯ ಏನು ತೀರ್ಪನ್ನು ಕೊಡುತ್ತದೆ ಎಂಬುದನ್ನು ನೋಡುತ್ತೇವೆ. ನಾವಾಗಿಯೇ ಈ ವಿಚಾರದಲ್ಲಿ ಮೊದಲು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಅದನ್ನು ಪರಭಾರೆ ಮಾಡತಕ್ಕಂಥದ್ದಾಗಲಿ, ಹಾಪ್‌ಕಾಮ್ಸ್‌ನ್ನು ಎತ್ತಂಗಡಿ ಮಾಡತಕ್ಕಂಥದ್ದಾಗಲಿ ಸರ್ಕಾರದ ಉದ್ದೇಶವಲ್ಲ. ಆದುದರಿಂದ ನ್ಯಾಯಾಲಯ ಯಾವ ತೀರ್ಪನ್ನು ಕೊಡುತ್ತದೆ ಎಂಬುದನ್ನು ನಾವು ನೋಡುತ್ತೇವೆ.

ಶ್ರೀ ಸಿ. ಭೈರೇಗೌಡ: ನ್ಯಾಯಾಲಯದಲ್ಲಿ ಸರಿಯಾದ ರೀತಿಯಲ್ಲಿ ಮೊಕದ್ದಮೆಯನ್ನು ನಡೆಸದೇ ಹಾಪ್‌ಕಾಮ್ಸ್ ವಿರುದ್ಧವಾಗಿ ಕೇಸ್ ನಡೆಸಲು ಮತ್ತು ನ್ಯಾಯಾಲಯದಿಂದ ಖಾಸಗಿಯವರೇ ಜಾಗವನ್ನು ಪಡೆಯುವ ರೀತಿಯಲ್ಲಿ ಅಧಿಕಾರಿಗಳು ಸಹಕಾರವನ್ನು ನೀಡುತ್ತಿದ್ದಾರೆ. ಅದಕ್ಕೆ ಸರ್ಕಾರದಲ್ಲಿ ಪ್ರಭಾವ ಇರುವವರು ಈ ದಿಕ್ಕಿನಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಈ ಸರ್ಕಾರದ ಮೇಲೆ ಆ ಪ್ರಭಾವಗಳು ಯಾವ ಪರಿಣಾಮವನ್ನು ಬೀರುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಯಾವಾಗಲೂ ಆಗುವುದಿಲ್ಲ ಎನ್ನುವ ಆಶ್ವಾಸನೆಯನ್ನು ನಾನು ಕೊಡುತ್ತೇನೆ.

ಮಾನ್ಯ ಅಧ್ಯಕ್ಷರೆ, ೨೦೦೧-೨೦೦೨ನೇ ಸಾಲಿನ ಪೂರಕ ಅಂದಾಜು (ಮೊದಲನೇ ಕಂತು) ಬೇಡಿಕೆಗಳನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಈಗ ೨೦೦೧-೨೦೦೨ನೇ ಸಾಲಿನ ಪೂರಕ ಅಂದಾಜು(ಮೊದಲನೇ ಕಂತು) ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

''ದಿನಾಂಕ ೩೧-೦೩-೨೦೦೨ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ ೦೧, ೦೨, ೦೩, ೦೪, ೦೫, ೦೬, ೦೮, ೦೯, ೧೦, ೧೨, ೧೩, ೧೪, ೨೧, ೨೩, ೨೪, ೨೬, ೨೭, ೨೮, ೨೯, ೩೦, ೩೨, ೩೩, ೩೬, ೩೮, ೩೯, ೪೦, ೪೧, ೪೨, ೪೪, ೪೫, ೪೬, ೪೭, ೪೮, ೪೯, ೫೦, ೫೧, ೫೩, ೫೪, ೫೫, ೫೯ ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

೧.೪೦ ಪಿ.ಎಂ